# ಜನತಾವಾಣಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಶುಕ್ರವಾರ, ಜೂನ್ 10, 2022

ಸಂಪುಟ : 49 ಸಂಚಿಕೆ : 27 ☎ 254736 91642 99999 RNI No: 27369/75 KA/SK/CTA-275/2021-2023. O/P @ B.V. Nagar P.O. ಪುಟ : 6 ರೂ : 5.00 www.janathavani.com janathavani@mac.com




# ಆರೋಗ್ಯ ವೃದ್ಧಿಗೆ ಸೈಕ್ಲಿಂಗ್ ಉತ್ತಮ ವ್ಯಾಯಾಮ

## ವಿಶ್ವ ಸೈಕಲ್ ದಿನಾಚರಣೆ : ಬೈಸಿಕಲ್ ಜಾಥಾದಲ್ಲಿ ಎಸ್ಪಿ ರಿಷ್ಯಂತ್ ಅಭಿಮತ

ದಾವಣಗೆರೆ, ಜೂ.9 - ಸೈಕಲ್ ಬಳಕೆಯಿಂದ ಆರೋಗ್ಯ ವೃದ್ಧಿಸುವುದಲ್ಲದೇ, ಇಂಧನ ಉಳಿಸಲು ಮತ್ತು ಪರಿಸರ ಮಾಲಿನ್ಯ ತಡೆಗೆ ಸಹಕಾರಿ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಿ.ಬಿ. ರಿಷ್ಯಂತ್ ಅಭಿಪ್ರಾಯಪಟ್ಟರು.

ನಗರದ ಎಸ್. ನಿಜಲಿಂಗಪ್ಪ ಬಡಾವಣೆಯ ಗಡಿಯಾರ ಕಂಬದ ಬಳಿ ದಾವಣಗೆರೆ ಸ್ಮಾರ್ಟ್ ಸಿಟಿ ಲಿಮಿಟೆಡ್ ಸಹಯೋಗದಲ್ಲಿ ವಿಶ್ವ ಸೈಕಲ್ ದಿನಾಚರಣೆ ಅಂಗವಾಗಿ ಇಂದು ಹಮ್ಮಿಕೊಂಡಿದ್ದ ಸೈಕಲ್ ಜಾಥಾದಲ್ಲಿ ಸೈಕಲ್ ಸವಾರಿ ಮಾಡುವುದಕ್ಕೂ ಮುನ್ನ ತಮ್ಮನ್ನು ಭೇಟಿಯಾದ ಸುದ್ದಿಗಾರರೊಂದಿಗೆ ಅವರು ಮಾತನಾಡಿದರು.

ಪ್ರತಿ ದಿನ ಮುಂಜಾನೆ ಸೈಕ್ಲಿಂಗ್ ಮಾಡುವುದರಿಂದ ಆರೋಗ್ಯ ಚೆನ್ನಾಗಿರುತ್ತದೆ. ಸೈಕ್ಲಿಂಗ್ ಒಂದು ರೀತಿಯ ಉತ್ತಮವಾದ ವ್ಯಾಯಾಮ. ಹಣ ಖರ್ಚು ಮಾಡಿ ಜಿಮ್, ವ್ಯಾಯಾಮಗಳಿಗಿಂತ ಮುಖ್ಯವಾಗಿ ಪ್ರತಿ ದಿನ 10 ರಿಂದ 15 ಕಿಲೋ ಮೀಟರ್ ಸೈಕಲ್ ಸವಾರಿ ಮಾಡಿದರೆ ಉಚಿತವಾಗಿ ಉತ್ತಮ ಆರೋಗ್ಯ ಸಂಪಾದಿಸಬಹುದು. ಅಲ್ಲದೇ ಸೈಕಲ್ ಬಳಸಿ ಇಂಧನ ಉಳಿಸಿದಂತಾಗುತ್ತದೆ. ಆದ್ದರಿಂದ ಪ್ರತಿಯೊಬ್ಬರೂ ಸೈಕಲ್ ಬಳಸುವಂತೆ ಸಲಹೆ ನೀಡಿದರು.

ಹಿರಿಯ ಪತ್ರಕರ್ತ ಹೆಚ್.ಬಿ. ಮಂಜುನಾಥ್ ಮಾತನಾಡಿ, ಬೈಸಿಕಲ್ ಬಳಕೆ ಬಗ್ಗೆ ಜಾಗೃತಿ ಮೂಡಿಸುವ ನಿಟ್ಟಿನಲ್ಲಿ ಬೈಸಿಕಲ್ ಜಾಥಾ ನಡೆಯುತ್ತಿದೆ. ನಮ್ಮ ದೇಶದಲ್ಲಿ ಬಳಕೆಯಾಗುವ ಒಟ್ಟು ಪೆಟ್ರೋಲಿಯಂ ನಲ್ಲಿ ಶೇ. 62ರಷ್ಟು ಪೆಟ್ರೋಲಿಯಂ ದ್ವಿಚಕ್ರ ವಾಹನಗಳಿಗೆ ಬಳಕೆಯಾಗುತ್ತಿದೆ. ವಾರದಲ್ಲಿ ಒಂದು ದಿನ ದ್ವಿಚಕ್ರ ವಾಹನಗಳನ್ನು ಬದಿಗಿಟ್ಟು ಸೈಕಲ್ ಬಳಸಿದರೆ ಒಂದು ವರ್ಷದಲ್ಲಿ 15 ಕೋಟಿ ಬ್ಯಾರಲ್‌ಗಳಷ್ಟು ಪೆಟ್ರೋಲನ್ನು ನಾವು ಉಳಿಸಬಹುದು. ಅಷ್ಟೇ ಪ್ರಮಾಣದಲ್ಲಿ ಪರಿಸರ ಉಳಿಸಬಹುದು. ಆರೋಗ್ಯವನ್ನು ಗಳಿಸಬಹುದು ಎಂದು ಹೇಳಿದರು.

ಸೈಕಲ್ ಬಳಸುವುದರಿಂದ ಸಮಯ ವ್ಯರ್ಥವಾಗುತ್ತದೆ ಎಂಬ ತಪ್ಪು ಕಲ್ಪನೆ ಇದೆ. ನಮ್ಮ ಕಾರ್ಯಗಳು ತಡವಾಗುತ್ತವೆ ಎಂಬುದನ್ನು ನಾನು ಒಪ್ಪುವುದಿಲ್ಲ. ಸೈಕಲ್ ಬಳಕೆಯಿಂದ ನಮ್ಮ ಹೃದಯ ಸಂಬಂಧಿ ಕಾಯಿಲೆಗಳು ಕಡಿಮೆಯಾಗುತ್ತವೆ. ಇದರಿಂದ ನಮ್ಮ ದೇಹದ ತೂಕ ಯಾವಾಗಲೂ ಸಮತೋಲನದಲ್ಲಿರುತ್ತದೆ. ಇದರಿಂದ ಡಯಾಬಿಟೀಸ್ ಬರಲ್ಲ. ಇದ್ದರೂ ಗುಣವಾಗುತ್ತೆ. ಕ್ಯಾನ್ಸರ್ (4ನೇ ಪುಟಕ್ಕೆ)

# ಪಿ.ಜಿ. ಪ್ರವೇಶದ ಸುತ್ತುಗಳಿಗೆ ಮಿತಿ ಬೇಕು : ಸುಪ್ರೀಂ ಕೋರ್ಟ್

ನವದೆಹಲಿ, ಜೂ. 9 - ಆಲ್ ಇಂಡಿಯಾ ನೀಟ್ - ಪಿ.ಜಿ. -21 ಪ್ರವೇಶಕ್ಕಾಗಿ ನಡೆಸುವ ಕೌನ್ಸಿಲಿಂಗ್ ಸುತ್ತುಗಳಿಗೆ ಮಿತಿ ಇರಬೇಕು. ಜನರ ಆರೋಗ್ಯ ಹಾಗೂ ಶಿಕ್ಷಣದ ಹಿತ ಬದಿಗೊತ್ತಿ ಪ್ರವೇಶ ನೀಡಲಾಗದು ಎಂದು ಸುಪ್ರೀಂ ಕೋರ್ಟ್ ಅಭಿಪ್ರಾಯ ಪಟ್ಟಿದೆ.

ನ್ಯಾಯಮೂರ್ತಿಗಳಾದ ಎಂ.ಆರ್. ಷಾ ಹಾಗೂ ಅನಿರುದ್ಧ ಬೋಸ್ ಅವರನ್ನು ಒಳಗೊಂಡ ರಜೆ ಅವಧಿಯ ಪೀಠ ಈ ಅಭಿಪ್ರಾಯ ವ್ಯಕ್ತಪಡಿಸಿದೆ.

ಈ ಹಿಂದಿನ ಕೌನ್ಸಿಲಿಂಗ್ ನಂತರವೂ ಖಾಲಿ ಉಳಿದಿರುವ 1,456 ಪಿ.ಜಿ. ಸೀಟುಗಳನ್ನು ಭರ್ತಿ ಮಾಡಲು ಮತ್ತೊಂದು ಸುತ್ತಿನ ಕೌನ್ಸಿಲಿಂಗ್ ನಡೆಸಬೇಕು ಎಂದು ದಾಖಲಾದ ಅರ್ಜಿಗಳ ವಿಚಾರಣೆ ನಡೆಸುವಾಗ ನ್ಯಾಯಾಲಯ ಈ ಅಭಿಪ್ರಾಯ ಪಟ್ಟಿದೆ.

8-9 ಸುತ್ತುಗಳ ಕೌನ್ಸಿಲಿಂಗ್ ನಂತರವೂ ಕೆಲ ಸೀಟುಗಳು ಉಳಿದಿವೆ ಎಂಬ ಕಾರಣಕ್ಕಾಗಿ ವಿಳಂಬವಾಗಿ ಪ್ರವೇಶ ನೀಡಲಾಗದು. ಮೂರು ವರ್ಷಗಳ ಕೋರ್ಸ್‌ಗೆ ಒಂದೂವರೆ ವರ್ಷದ ನಂತರ ಪ್ರವೇಶ ನೀಡುವುದರಿಂದ ಶಿಕ್ಷಣ ಹಾಗೂ ಆರೋಗ್ಯಗಳನ್ನು ಬದಿಗೊತ್ತಿದಂತಾಗುತ್ತದೆ ಎಂದು ನ್ಯಾಯಾಲಯ ಹೇಳಿದೆ.

ಅರ್ಜಿಗಳ ವಿಚಾರಣೆ ವೇಳೆ ಹಾಜರಾಗಿದ್ದ ಹೆಚ್ಚುವರಿ ಸಾಲಿಸಿಟರ್ ಜನರಲ್ ಬಲಬೀರ್ ಸಿಂಗ್ ಕುರಿತು ಮಾತನಾಡಿದ ನ್ಯಾಯಾಲಯ, ಅರ್ಜಿದಾರರನ್ನು ಪ್ರತಿವಾದಿಗಳಾಗಿ ಭಾವಿಸ ಬಾರದು. ತಾಂತ್ರಿಕ ವಿಷಯಗಳ ಆಧಾರದ ಮೇಲೆ ನಿರ್ಧಾರ ತೆಗೆದುಕೊಳ್ಳಬೇಡಿ. ಇದು 1,400 ವೈದ್ಯಕೀಯ ಸೀಟುಗಳ ಪ್ರಶ್ನೆ ಎಂದು ತಿಳಿಸಿತು.

ಸರ್ಕಾರಕ್ಕೂ ವೈದ್ಯರ ಅಗತ್ಯವಿದೆ. ಸರ್ಕಾರವೂ ಸೂಪರ್ ಸ್ಪೆಷಾಲಿಟಿ ವೈದ್ಯರನ್ನು ಬಯಸುತ್ತಿದೆ. ನಮ್ಮ ಬಳಿ ವೈದ್ಯರ ಕೊರತೆ ಇದೆ. 1,400 ಸೀಟುಗಳನ್ನು ಕಡಿಮೆ ಎಂದು ಭಾವಿಸಬಾರದು ಎಂದು ತಿಳಿಸಿತು.

ಈಗಾಗಲೇ ಆನ್‌ಲೈನ್ (2ನೇ ಪುಟಕ್ಕೆ)

# ಜು.18ಕ್ಕೆ ರಾಷ್ಟ್ರಪತಿ ಚುನಾವಣೆ

ನವದೆಹಲಿ ಜೂ. 9 – ರಾಷ್ಟ್ರಪತಿ ಸ್ಥಾನಕ್ಕೆ ಜುಲೈ 18ರಂದು ಚುನಾವಣೆ ನಡೆಯಲಿದೆ. 4,809 ಸಂಸದರು ಹಾಗೂ ಶಾಸಕರನ್ನು ಒಳಗೊಂಡ ಮತದಾರರು ರಾಷ್ಟ್ರಪತಿ ಆಯ್ಕೆ ಮಾಡಲಿದ್ದಾರೆ ಎಂದು ಚುನಾವಣಾ ಆಯೋಗ ತಿಳಿಸಿದೆ.

ಲೋಕಸಭೆ ಹಾಗೂ ರಾಜ್ಯಸಭೆಗಳು ಹಾಗೂ ರಾಜ್ಯ ವಿಧಾನಸಭೆಗಳಲ್ಲಿ ಹೊಂದಿರುವ ಬಿಜೆಪಿ ಬಲದಿಂದಾಗಿ, ರಾಷ್ಟ್ರಪತಿ ಸ್ಥಾನಕ್ಕೆ ತನ್ನ ಅಭ್ಯರ್ಥಿಯನ್ನು ಆಯ್ಕೆ ಮಾಡಿಕೊಳ್ಳಬಹುದು.

ಜೂನ್ 15ರಂದು ಚುನಾವಣೆಗಾಗಿ ಅಧಿಸೂಚನೆ ಹೊರಡಿಸಲಾಗುವುದು. ಜೂನ್ 29ರವರೆಗೆ ನಾಮಪತ್ರ ಸಲ್ಲಿಸಬಹುದು ಎಂದು ಮುಖ್ಯ ಚುನಾವಣಾ ಆಯುಕ್ತ ರಾಜೀವ್ ಕುಮಾರ್ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದ್ದಾರೆ.

ಮುಕ್ತ ಹಾಗೂ ನ್ಯಾಯಸಮ್ಮತವಾಗಿ ಚುನಾವಣೆ ನಡೆಸಲು ಎಲ್ಲಾ ಸಿದ್ಧತೆ ಮಾಡಿಕೊಳ್ಳಲಾಗಿದೆ. ಚುನಾವಣೆ ವೇಳೆ ಕೊರೊನಾ ಶಿಷ್ಟಾಚಾರಗಳನ್ನು ಪಾಲಿಸಲಾಗುವುದು ಎಂದು ಕುಮಾರ್ ಹೇಳಿದ್ದಾರೆ. ಚುನಾವಣೆಗಾಗಿ ಯಾವುದೇ ಪಕ್ಷ ವಿಪ್ ಹೊರಡಿಸುವಂತಿಲ್ಲ ಎಂದೂ ಅವರು ತಿಳಿಸಿದ್ದಾರೆ. ಜೂನ್ (2ನೇ ಪುಟಕ್ಕೆ)

# ಹಿಜಾಬ್ ವಿವಾದದ ಕಾಲೇಜಿನಲ್ಲಿ ಮುಸ್ಲಿಂ ವಿದ್ಯಾರ್ಥಿನಿಯರ ಹೆಚ್ಚಳ

ಮಂಗಳೂರು, ಜೂ. 9 -ಹಿಜಾಬ್ ವಿವಾದ ಮೊದಲು ಭುಗಿಲೆದ್ದಿದ್ದ ಉಡುಪಿಯ ಸರ್ಕಾರಿ ಪಿ.ಯು. ಮಹಿಳಾ ಕಾಲೇಜಿಗೆ ಈ ವರ್ಷ ಮುಸ್ಲಿಂ ವಿದ್ಯಾರ್ಥಿನಿಯರ ದಾಖಲಾತಿ ಹೆಚ್ಚಾಗಿದೆ.

ಕಾಲೇಜಿನ ಆರು ವಿದ್ಯಾರ್ಥಿನಿಯರು ಹಿಜಾಬ್ ಧರಿಸಲು ಅನುಮತಿ ಕೋರಿ ಕರ್ನಾಟಕ ಹೈಕೋರ್ಟ್ ಮೆಟ್ಟಿಲೇರಿದ್ದರು. ಆದರೆ, ಶಾಲಾ ಕೋಣೆಯಲ್ಲಿ ಹಿಜಾಬ್ ಧರಿಸುವಂತಿಲ್ಲ ಎಂದು ನ್ಯಾಯಾಲಯ ತೀರ್ಪಿನಲ್ಲಿ ತಿಳಿಸಿತ್ತು.

ವಿವಾದದ ನಂತರ ಕಾಲೇಜಿಗೆ ಮುಸ್ಲಿಂ ವಿದ್ಯಾರ್ಥಿನಿಯರ ಸೇರ್ಪಡೆ ಕಡಿಮೆಯಾಗಬಹುದು ಎಂಬ ಮಾತುಗಳು ಕೇಳಿ ಬರುತ್ತಿದ್ದವು. ಆದರೆ, ಪ್ರಥಮ ಪಿ.ಯು.ಗೆ 40 ಮುಸ್ಲಿಂ ವಿದ್ಯಾರ್ಥಿನಿಯರು ಸೇರ್ಪಡೆಯಾಗಿದ್ದಾರೆ.

ಈ ಬಗ್ಗೆ ಮಾತನಾಡಿರುವ ಉಡುಪಿ (2ನೇ ಪುಟಕ್ಕೆ)

# ಕಾಂಗ್ರೆಸ್ - ಜೆಡಿಎಸ್ ಒಮ್ಮತವಿಲ್ಲದೇ ಬಿಜೆಪಿಗೆ ಲಾಭ

ಬೆಂಗಳೂರು, ಜೂ. 9 - ರಾಜ್ಯಸಭೆಯ ನಾಲ್ಕು ಸ್ಥಾನಗಳಿಗೆ ನಾಳೆ ಶುಕ್ರವಾರ ಚುನಾವಣೆ ನಡೆಯುತ್ತಿದ್ದು, ಪೂರ್ವ ದಿನವಾದ ಗುರುವಾರದವರೆಗೂ ಕಾಂಗ್ರೆಸ್ ಹಾಗೂ ಜೆಡಿಎಸ್‌ಗಳು ನಾಲ್ಕನೇ ಅಭ್ಯರ್ಥಿ ಬಗ್ಗೆ ಒಮ್ಮತಕ್ಕೆ ಬರಲು ಸಾಧ್ಯವಾಗಿಲ್ಲ.

ಕಾಂಗ್ರೆಸ್ ಮತ್ತು ಜೆಡಿಎಸ್ ನಾಯಕರು ತಮ್ಮ ಅಭ್ಯರ್ಥಿಗಳಿಗೆ ಮತ ನೀಡುವಂತೆ ಒಬ್ಬರನ್ನೊಬ್ಬರು ಕೋರಿಕೊಂಡರೇ ಹೊರತು, ಯಾವುದೇ ಪ್ರಯೋಜನವಾಗಿಲ್ಲ.

ಇವೆರಡೂ ಪಕ್ಷಗಳ ಕಿತ್ತಾಟವನ್ನು ರಾಜಕೀಯ ಲಾಭವಾಗಿ ಪಡೆದುಕೊಳ್ಳಲು ಬಿಜೆಪಿ ಮುಂದಾಗಿದ್ದು, ತಮ್ಮ ಇಬ್ಬರು ಅಭ್ಯರ್ಥಿಗಳಿಗೆ ಮೊದಲ ಪ್ರಾಶಸ್ತ್ಯದ ಮತಗಳನ್ನು ನೀಡಿ, ಮೂರನೇ ಅಭ್ಯರ್ಥಿಯನ್ನು ಗೆಲ್ಲಿಸಲು 32 ಮೊದಲ ಪ್ರಾಶಸ್ತ್ಯದ ಮತಗಳ ಜೊತೆ ಉಳಿದ 91 ಮತಗಳ ಎರಡನೇ ಪ್ರಾಶಸ್ತ್ಯವನ್ನು ಮೂರನೇ ಅಭ್ಯರ್ಥಿ ಲೆಹರ್ ಸಿಂಗ್ ಅವರಿಗೆ ನೀಡಿ, ಗೆಲ್ಲಿಸಿಕೊಳ್ಳಲು ರಣತಂತ್ರ ರೂಪಿಸಿದೆ. ತಮ್ಮ ಮತಗಳು ಎಲ್ಲಿಯೂ ದೋಷ ಪೂರಿತವಾಗಬಾರದೆಂದು ಬಿಜೆಪಿ (4ನೇ ಪುಟಕ್ಕೆ)

## ಸೀತಾರಾಮ್ ಯಚೂರಿ ಮಧ್ಯಪ್ರವೇಶ

ಬೆಂಗಳೂರು, ಜೂ. 9 - ಕಾಂಗ್ರೆಸ್-ಜೆಡಿಎಸ್ ಆಂತರಿಕ ಜಗಳದಿಂದ ಬಿಜೆಪಿಗೆ ದಕ್ಕಬಹುದಾದ ಮೂರನೇ ಸ್ಥಾನವನ್ನು ತಪ್ಪಿಸಲು ಸಿಪಿಎಂನ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯಚೂರಿ ಮಧ್ಯೆ ಪ್ರವೇಶ ಮಾಡಿದ್ದಾರೆ.

ಬಿಜೆಪಿಗೆ ಹೆಚ್ಚಿನ ಸ್ಥಾನ ಸಿಗುವುದನ್ನು ತಪ್ಪಿಸಲು ಮಾಜಿ ಪ್ರಧಾನಿ ದೇವೇಗೌಡರ ಮನವಿಗೆ ಸ್ಪಂದಿಸಿದ ಯಚೂರಿ, ಕಾಂಗ್ರೆಸ್‌ನ ಅಧಿನಾಯಕಿ ಸೋನಿಯಾ ಗಾಂಧಿ ಹಾಗೂ ರಾಹುಲ್ ಗಾಂಧಿ ಅವರನ್ನು ಭೇಟಿ ಮಾಡಿ, ಕರ್ನಾಟಕದಲ್ಲಿ ಜೆಡಿಎಸ್ (4ನೇ ಪುಟಕ್ಕೆ)

# ಸರ್ಕಾರಿ ಕನ್ನಡ ಶಾಲೆಗಳ ಬಗ್ಗೆ ಕೀಳರಿಮೆ ಬೇಡ

## ನ್ಯಾಯಾಧೀಶರಾದ ಫಕ್ಕೀರವ್ವ ಕಳಕಳಿ

ಹರಪನಹಳ್ಳಿ, ಜೂ.9- ಸರ್ಕಾರಿ ಶಾಲೆಗಳು ಯಾವುದಕ್ಕೂ ಕಡಿಮೆ ಇಲ್ಲದೇ ಶಿಕ್ಷಣ ನೀಡುತ್ತಿದ್ದು, ಸರ್ಕಾರದ ಸೌಲಭ್ಯ ಪಡೆದು ಸಾಧನೆ ಮಾಡಿ, ಶಾಲೆ, ಪೋಷಕರು, ತಾಲ್ಲೂಕು, ರಾಜ್ಯಕ್ಕೆ ಕೀರ್ತಿ ತರುವಂತವರಾಗಿ ಎಂದು ಹಿರಿಯ ಸಿವಿಲ್ ನ್ಯಾಯಾಧೀಶರಾದ ಫಕ್ಕಿರವ್ವ ಕೆಳಗೇರಿ ಹೇಳಿದರು.

ತಾಲ್ಲೂಕಿನ ಬಾಗಳಿ ಗ್ರಾಮದ ನಂ.ಗು.ಸ.ಮಾ.ಹಿ.ಪ್ರಾ.ಶಾಲೆ ಆವರಣದಲ್ಲಿ ಗುರುವಾರ ತಾಲ್ಲೂಕು ಕಾನೂನು ಸೇವಾ ಸಮಿತಿ ಹಾಗೂ ವಕೀಲರ ಸಂಘ, ತಾಲ್ಲೂಕು ಪಂಚಾಯಿತಿ, ಗ್ರಾಮ ಪಂಚಾಯಿತಿ ಇವರ ಸಂಯುಕ್ತಾಶ್ರಯದಲ್ಲಿ ನಡೆದ ಮಕ್ಕಳ ಹಕ್ಕುಗಳ ರಕ್ಷಣೆಯ ಅಂಗವಾಗಿ ಮಕ್ಕಳ ಸ್ನೇಹಿ ಗ್ರಾಮ ಪಂಚಾಯಿತಿ ಅಭಿಯಾನದಲ್ಲಿ ಮಕ್ಕಳ ಕಾನೂನು ಅರಿವು ಕಾರ್ಯಕ್ರಮ ಉದ್ಘಾಟಿಸಿದ ಬಳಿಕ ಅವರು ಮಾತನಾಡಿದರು.

ಸರ್ಕಾರದ ಕನ್ನಡ ಶಾಲೆಗಳನ್ನು ಕೀಳಾಗಿ ಕಾಣುವುದು ಬೇಡ, ಅನೇಕ ಸಾಧಕರು ಸರ್ಕಾರಿ ಶಾಲೆಯಲ್ಲಿ ಅಭ್ಯಾಸ ಮಾಡಿ ಉನ್ನತ ಮಟ್ಟದ ಸಾಧನೆ ಮಾಡಿದ ಇತಿಹಾಸವಿದ್ದು, ಸರ್ಕಾರಿ ಶಾಲೆಯ ಮಕ್ಕಳೇ ಉನ್ನತ ಹುದ್ದೆ ಪಡೆಯಲು ಸಾಧ್ಯ ಎಂದ ಅವರು, ಮಕ್ಕಳು ಶಿಕ್ಷಣದಿಂದ ವಂಚಿತರಾಗದೇ ಶಾಲೆಗೆ ಬಂದು ಕಲಿಯಬೇಕು. ಇದಕ್ಕೆ ಪೋಷಕರು ಸಹ ಸಹಕಾರ ನೀಡಬೇಕು ಎಂದರು. ಇತ್ತೀಚಿನ ದಿನಮಾನಗಳಲ್ಲಿ (3ನೇ ಪುಟಕ್ಕೆ)

# ದೇವನೂರು, ಎಸ್.ಜಿ.ಎಸ್, ತಾಳ್ಯ ಸೇರಿ ಪಠ್ಯ ವಾಪಸ್ ಪಡೆದ ಸಾಹಿತಿಗಳಿಗೆ ಕೊಲೆ ಬೆದರಿಕೆ





ಬೆಂಗಳೂರು, ಜೂ.9 - ಪಠ್ಯ ಪುಸ್ತಕದ ಪರಿಷ್ಕರಣ ಸಮಿತಿಯ ಅಧ್ಯಕ್ಷ ರೋಹಿತ್ ಚಕ್ರತೀರ್ಥ ಸಮಿತಿಯನ್ನು ಸರ್ಕಾರ ವಿಸರ್ಜನೆ ಮಾಡಿದ ಬೆನ್ನಲ್ಲೇ, ಸಾಹಿತಿಗಳಿಗೆ ಕೊಲೆ ಬೆದರಿಕೆ ಪತ್ರಗಳು ರವಾನೆ ಆಗುತ್ತಿರುವ ಸುದ್ದಿ ವರದಿಯಾಗಿದೆ.

ರೋಹಿತ ಚಕ್ರತೀರ್ಥ ಸಮಿತಿಯು ತಿರುಚಿದ ಪಠ್ಯವನ್ನು ತಿರಸ್ಕರಿಸಿ, ಒಂದೇ ವರ್ಗದ ಸಾಹಿತಿಗಳ ಪಠ್ಯ ಹಾಗೂ ಸುಳ್ಳು ಮಾಹಿತಿ ದಾಖಲಿಸಿದ ಹಿನ್ನೆಲೆಯಲ್ಲಿ ರಾಜ್ಯದಾದ್ಯಂತ ಸಾಹಿತಿಗಳು ಈ ಹಿಂದೆ ನೀಡಿದ್ದ ಪಠ್ಯದ ಒಪ್ಪಿಗೆಯನ್ನು ವಾಪಸ್ ಪಡೆದ ಪತ್ರಗಳನ್ನು ಸರ್ಕಾರಕ್ಕೆ ರವಾನಿಸಿದ್ದರು.

ಹಿರಿಯ ಸಾಹಿತಿಗಳಾದ ದೇವನೂರು ಮಹಾದೇವ, ಜಿ. ರಾಮಕೃಷ್ಣ, ಎಸ್. ಜಿ. ಸಿದ್ದರಾಮಯ್ಯ, ಚಂದ್ರಶೇಖರ ತಾಳ್ಯ, ರೂಪಾ ಹಾಸನ, ಸರಜೂ ಕಾಟ್ಕರ, ಬೋಳುವಾರು, ಈರಪ್ಪ ಕಂಬಳಿ ಒಳಗೊಂಡಂತೆ 61 ಸಾಹಿತಿಗಳಿಗೆ ಬಂದಿರುವ ಅನಾಮಧೇಯ ಎರಡು (3ನೇ ಪುಟಕ್ಕೆ)

# ನವಜಾತ ಶಿಶು ಮಾರಾಟ ಮಾಡಿದ ಅಪ್ಪ- ಚಿಕ್ಕಪ್ಪ

ದಾವಣಗೆರೆ, ಜೂ.9- ಎರಡು ದಿನಗಳ ಹಿಂದಷ್ಟೇ ಜನಿಸಿದ್ದ ನವಜಾತ ಶಿಶುವನ್ನು ಸ್ವಂತ ಅಪ್ಪ ಮತ್ತು ಚಿಕ್ಕಪ್ಪನೇ ಕುಟುಂಬವೊಂದಕ್ಕೆ 60 ಸಾವಿರ ರೂ.ಗೆ ಮಾರಾಟ ಮಾಡಿರುವ ಬಗ್ಗೆ ಇಲ್ಲಿನ ಮಹಿಳಾ ಪೊಲೀಸ್ ಠಾಣೆಯಲ್ಲಿ ಮಗುವಿನ ತಾಯಿ ದೂರು ನೀಡಿದ್ದಾರೆ.

ಮಗು ಸಾವನ್ನಪ್ಪಿರುವುದಾಗಿ ತಾಯಿಗೆ ನಂಬಿಸಿ, ಮಗುವನ್ನು ಬಳ್ಳಾರಿ ಜಿಲ್ಲೆಯ ಹೂವಿನಹಡಗಲಿ ದಂಪತಿಗೆ ಮಾರಾಟ ಮಾಡಲಾಗಿದೆ. ಅನುಮಾನಗೊಂಡ ತಾಯಿ ಪ್ರಶ್ನಿಸಿದಾಗ ನವಜಾತ ಶಿಶು ಮಾರಾಟ ಪ್ರಕರಣ ಬೆಳಕಿಗೆ ಬಂದಿದೆ. ಸ್ಥಳಕ್ಕೆ ಭೇಟಿ ನೀಡಿದ್ದ (3ನೇ ಪುಟಕ್ಕೆ)

# ಮುಂಗಾರಿನಲ್ಲಿ ಸಾಮಾನ್ಯ ಪ್ರಗತಿ : ಹವಾಮಾನ ಇಲಾಖೆ

ನವದೆಹಲಿ, ಜೂ. 9 – ಮುಂಗಾರು ಸಾಮಾನ್ಯ ರೀತಿಯಲ್ಲಿ ಮುಂದುವರೆಯುತ್ತಿದೆ ಎಂದು ಹೇಳಿರುವ ಹವಾಮಾನ ಇಲಾಖೆ, ಮುಂದಿನ ಎರಡು ದಿನಗಳಲ್ಲಿ ಮುಂಗಾರು ಮಹಾರಾಷ್ಟ್ರಕ್ಕೆ ತಲುಪಲಿದೆ ಎಂದು ತಿಳಿಸಿದೆ.

ಜೂನ್ 10-11ರಂದು ಅರುಣಾಚಲ ಪ್ರದೇಶದಲ್ಲಿ ಮತ್ತು ಮುಂದಿನ ಐದು ದಿನಗಳಲ್ಲಿ ಅಸ್ಸಾಂ ಹಾಗೂ ಮೇಘಾಲಯಗಳಲ್ಲಿ ಧಾರಾಕಾರ ಮಳೆಯಾಗಲಿದೆ ಎಂದೂ ಎಚ್ಚರಿಕೆ ನೀಡಲಾಗಿದೆ.

ಮೇ 29ರಂದು ಮುಂಗಾರು ಕೇರಳಕ್ಕೆ ತಲುಪಿತ್ತು. ಅದು ಮಧ್ಯ ಹಾಗೂ ಕೇಂದ್ರ ಅರಬ್ಬೀ ಸಮುದ್ರ, ಕೇರಳ, ಕರ್ನಾಟಕದ ಕೆಲ ಭಾಗ ಹಾಗೂ ತಮಿಳುನಾಡುಗಳನ್ನು ಆವರಿಸಿದೆ ಎಂದು ಹವಾಮಾನ ಇಲಾಖೆಯ ಹಿರಿಯ ವಿಜ್ಞಾನಿ ಆರ್.ಕೆ. (3ನೇ ಪುಟಕ್ಕೆ)

# ಮುಂಗಾರಿಗೆ ಮುನ್ನವೇ ಬಹುತೇಕ ಕೆರೆಗಳಿಗೆ ನೀರು

## ಜಗಳೂರು ತಾ.ನ ರೈತರ ಮುಖದಲ್ಲಿ ಮಂದಹಾಸ

ಬಿ.ಪಿ. ಸುಭಾನ್



ಜಗಳೂರು, ಜೂ. 9- ಬರಪೀಡಿತ ತಾಲೂಕಿನಲ್ಲಿ ಪ್ರತಿವರ್ಷವೂ ಮುಂಗಾರು ಕಳೆದರೂ ಸಹ ಕೆರೆ, ಗೋ ಕಟ್ಟೆಗಳಿಗೆ ನೀರು ತುಂಬುವುದು ಅಪರೂಪವಾಗಿತ್ತು. ಸತತ ಬರಗಾಲದ ಬಾಯಿಗೆ ತುತ್ತಾದ ಜಗಳೂರು ತಾಲ್ಲೂಕು ಯಾವುದೇ ನದಿ, ನೀರಾವರಿ ಸೌಲಭ್ಯ ಇಲ್ಲದೆ ಬಸವಳಿದ ರೈತರಿಗೆ ಕೆರೆ ತುಂಬಿಸುವ ಯೋಜನೆ ಹಾಗೂ ಭದ್ರಾ ಮೇಲ್ದಂಡೆ ಜೋಡಿ ಯೋಜನೆಗಳು ರೈತರ ಬದುಕಿಗೆ ಹೊಸ ಆಶಾಕಿರಣ ಉಂಟುಮಾಡಿವೆ.

ಈ ಮಧ್ಯೆ ಬಹು ವರ್ಷಗಳ ನಂತರ ತಾಲ್ಲೂಕಿಗೆ ಪ್ರಸಕ್ತ ಸಾಲಿನ ಮುಂಗಾರು ಆಗಮಿಸುವ ಮುನ್ನವೇ ಸುರಿದ ಮುಂಗಾರು ಪೂರ್ವ ಮಳೆಯಿಂದಾಗಿ ತಾಲ್ಲೂಕಿನ ಬಹುತೇಕ ಕೆರೆ-ಕಟ್ಟೆಗಳಲ್ಲಿ ನೀರು ಭರ್ತಿಯಾಗಿದ್ದು ಅಂತರ್ಜಲ ಹೆಚ್ಚಳಕ್ಕೆ ಸಹಕಾರಿಯಾಗಿದೆ.

ತಾಲ್ಲೂಕಿನ ಅತೀ ದೊಡ್ಡ ಕೆರೆಗಳಲ್ಲಿ ಒಂದಾದ ತುಪ್ಪದಹಳ್ಳಿ ಕೆರೆ, ಕೆರೆ ತುಂಬಿಸುವ ಯೋಜನೆ ಅಡಿ ನೀರು ಹರಿಸಿದ ಪ್ರಥಮ ಕೆರೆಯಾಗಿದ್ದು, ಆಕಸ್ಮಿಕ ಸುರಿದ ಮುಂಗಾರು ಪೂರ್ವ ಮಳೆಯ ಪರಿಣಾಮದಿಂದ ಕೆರೆ ತುಂಬಿ ಕೋಡಿ ಬಿದ್ದು ಈ ಭಾಗದ ಹಲವಾರು ಗ್ರಾಮಗಳ ರೈತರ ಬದುಕು ಹಸನುಗೊಳಿಸಿದೆ.

ಇದರ ಹೊರತಾಗಿ ಜಗಳೂರು ಕೆರೆ ಹಾಗೂ ಸಂಗೇನಹಳ್ಳಿ ಕೆರೆ ಹೆಚ್ಚಿನ ಪ್ರಮಾಣದ ನೀರು ಸಂಗ್ರಹವಾಗಿದೆ. ಜಮ್ಮಾಪುರ, ಕೆಳಗೋಟೆ, ಬಿಳಿಚೋಡು, ಹಿರೆಅರಕೆರೆ, ಬಿದರಕೆರೆ, ಗುರುಸಿದ್ದಾಪುರ ಸೇರಿದಂತೆ ಬಹುತೇಕ ಕೆರೆಗಳಲ್ಲಿ ಮುಂಗಾರು ಆರಂಭವಾಗುವ ಮುನ್ನವೇ ಕೆರೆಗಳಿಗೆ ನೀರು ಸಂಗ್ರಹವಾಗಿದೆ.

ರಂಗಯ್ಯನದುರ್ಗ ಅರಣ್ಯ ವ್ಯಾಪ್ತಿಗೆ ಒಳಪಡುವ ಕೆಳಗೋಟೆ ಕೆರೆ ಹಾಗೂ ಅರಣ್ಯ ವ್ಯಾಪ್ತಿಯಲ್ಲಿರುವ ಗುರುಸಿದ್ದಾಪುರ ಕೆರೆ ನೀರು ತುಂಬುವುದರೊಂದಿಗೆ ಹಚ್ಚ ಹಸಿರು ಚೌಕಟ್ಟಿನಲ್ಲಿ ನೋಡುಗರ ಕಣ್ಮನ ಸೆಳೆಯುತ್ತಿವೆ.

**ಬೃಹತ್ ಚೆಕ್ ಡ್ಯಾಮ್‌ಗಳಲ್ಲೂ ನೀರಿನ ಕಲರವ :** ಬರಪೀಡಿತ ತಾಲ್ಲೂಕಿನ ಬೃಹತ್ ಚೆಕ್ ಡ್ಯಾಮ್‌ಗಳಾದ ದೊಣ್ಣೆಹಳ್ಳಿ ಚೆಕ್ ಡ್ಯಾಮ್, ಸೊಕ್ಕೆ ಡ್ಯಾಮ್, ಬಿಳಿಚೋಡು ಚೆಕ್ ಡ್ಯಾಮ್, ಬಸವನಕೋಟೆ ಚೆಕ್ ಡ್ಯಾಮ್‌ಗಳಲ್ಲಿ ಸುಮಾರು ಕಿಲೋ ಮೀಟರ್‌ಗಟ್ಟಲೆ ನೀರು ಸಂಗ್ರಹವಾಗಿದೆ.

**ಗಿಡಗಂಟೆಗಳಿಂದ ತುಂಬಿದ ಜಗಳೂರು ಕೆರೆ :** ಪಟ್ಟಣಕ್ಕೆ ಲಗತ್ತಾಗಿರುವ ಸುಮಾರು 550 ಎಕರೆ ವಿಸ್ತೀರ್ಣದ ಜಗಳೂರು ಕೆರೆ ಮಧ್ಯದ ಗುಂಡಿಗಳು ತುಂಬಿಕೊಂಡು ಕೋಡಿಯವರೆಗೂ ನೀರು (2ನೇ ಪುಟಕ್ಕೆ)




# ಕರ್ನಾಟಕ ಗ್ರಾಮೀಣ ಬ್ಯಾಂಕ್

(ಸರ್ಕಾರಿ ಸ್ವಾಮ್ಯದ ಷೆಡ್ಯೂಲ್ಡ್ ಬ್ಯಾಂಕ್) ಪ್ರವರ್ತಕರು : ಕೆನರಾ ಬ್ಯಾಂಕ್
ಪ್ರಧಾನ ಕಛೇರಿ : ಸಂಗನಕಲ್ಲು ರಸ್ತೆ, ಗಾಂಧಿನಗರ, ಬಳ್ಳಾರಿ-583 103 (ಕರ್ನಾಟಕ)

**ಪ್ರಾದೇಶಿಕ ಕಚೇರಿ : ನಂ.496/66, ಸಂಕೋಳ್ ಪ್ಲಾಜಾ, 2ನೇ ಮಹಡಿ ನಾಗನೂರು ರಸ್ತೆ, ಶಾಮನೂರು, ದಾವಣಗೆರೆ-577 004**

ಫೋನ್: 08192 - 223913, 233632 e-mail: rodvg@kgbk.in

## ಚಿನ್ನಾಭರಣಗಳ ಬಹಿರಂಗ ಹರಾಜು

ಈ ಕೆಳಕಂಡ ಮಹನೀಯರು ಕರ್ನಾಟಕ ಗ್ರಾಮೀಣ ಬ್ಯಾಂಕ್‌ನ ಶಾಖೆಗಳಲ್ಲಿ ತಮ್ಮ ಚಿನ್ನಾಭರಣ ಆಧಾರದ ಸಾಲ ಪಡೆದಿದ್ದು, ವಾಯಿದೆ ಪ್ರಕಾರ ಸಾಲ ಮರುಪಾವತಿ ಮಾಡದೇ ಇದ್ದ ಕಾರಣ, ಇವರಿಗೆ ರಿಜಿಸ್ಟರ್ಡ್ ಅಂಚೆ ಮುಖಾಂತರ ಸಾಲಮರುಪಾವತಿ ಮಾಡುವಂತೆ ಕೋರಿ ಕಳುಹಿಸಿದ ನೋಟಿಸ್ ಜಾರಿಯಾಗಿರುತ್ತದೆ. ಆದರೂ ಸಾಲ ಮರುಪಾವತಿ ಮಾಡಲು ಯಾವುದೇ ಕ್ರಮ ಕೈಗೊಳ್ಳದೇ ಇರುವುದರಿಂದ, ಅವರಿಗೆ ಈ ಮೂಲಕ ತಿಳಿಸುವುದೇನೆಂದರೆ, ಈ ಕೆಳಕಂಡ ಹರಾಜು ದಿನಾಂಕಗಳಂದು ಅಥವಾ ಅದಕ್ಕೆ ಮುಂಚೆ ಬ್ಯಾಂಕಿಗೆ ಭೇಟಿ ಕೊಟ್ಟು ಸಂಪೂರ್ಣ ಹಣ, ಬಡ್ಡಿ ಹಾಗೂ ಇತರೆ ಖರ್ಚುಗಳನ್ನು ಮರುಪಾವತಿ ಮಾಡತಕ್ಕದ್ದು, ಇಲ್ಲವಾದಲ್ಲಿ ತಾವು ಒತ್ತೆ ಇಟ್ಟ ಆಭರಣಗಳನ್ನು ಈ ಕೆಳಕಂಡ ಹರಾಜು ದಿನಾಂಕಗಳಂದು ಬೆಳಿಗ್ಗೆ 11.00 ಗಂಟೆಗೆ ಅಥವಾ ಬ್ಯಾಂಕಿಗೆ ಸೂಕ್ತವಾದ ಇನ್ನಾವುದೇ ದಿನದಂದು ನೋಟೀಸು ಕೊಡದೇ ಶಾಖೆಯ ಆವರಣದಲ್ಲಿ ಬಹಿರಂಗವಾಗಿ ಯಾ ಖಾಸಗಿಯಾಗಿ ಹರಾಜು ಮಾಡಲಾಗುವುದು. ಸದರಿ ಹರಾಜಿನಿಂದ ಬಂದ ಮೊತ್ತವು ತಮ್ಮ ಸಾಲವನ್ನು ಸಂಪೂರ್ಣ ತೀರುವಳಿ ಮಾಡಲು ವಿಫಲವಾದಲ್ಲಿ ತಾವು ವೈಯಕ್ತಿಕವಾಗಿ ಹೊಣೆಗಾರರಾಗಿರುತ್ತೀರಿ ಹಾಗೂ ಹರಾಜಿಗೆ ತಗಲುವ ಎಲ್ಲಾ ವೆಚ್ಚಕ್ಕೂ ನೀವೇ ಹೊಣೆಗಾರರೆಂದು ತಿಳಿಯಿರಿ.

**ಶಾಖೆ: ಬಾಡ, ದಾವಣಗೆರೆ ತಾ|| ಮೊ.: 7795241991 ಹರಾಜು ದಿನಾಂಕ : 22-06-2022**

| ಕ್ರ. ಸಂ. | ಸಾಲಗಾರರ ಹೆಸರು ಮತ್ತು ವಿಳಾಸ | ಸಾಲದ ಸಂಖ್ಯೆ | ಬಾಕಿ ಮೊತ್ತ (ರೂ.ಗಳಲ್ಲಿ) (07-06-2022ರಂತೆ) |
|---|---|---|---|
| 1 | ಶ್ರೀ ಶಿವಮೂರ್ತಿ ಬಿನ್. ಶಿವಪ್ಪ, ಅಣಬೇರು | 40533302147320 | 43,260-00+ ಅನ್ವಯಿಸುವ ಬಡ್ಡಿ |
| 2 | ಶ್ರೀ ಬಸವರಾಜಪ್ಪ, ಕಂದಗಲ್ | 40533302017821 | 55,051-00+ ಅನ್ವಯಿಸುವ ಬಡ್ಡಿ |
| 3 | ಶ್ರೀ ಹನುಮಂತಪ್ಪ ಜಿ.ಟಿ., ಅಣಬೇರು | 40533302023121 | 44,683-00+ ಅನ್ವಯಿಸುವ ಬಡ್ಡಿ |
| 4 | ಶ್ರೀಮತಿ ಪಾರ್ವತಮ್ಮ ಕೋಂ. ರುದ್ರಪ್ಪ, ಬಾಡ | 40533302026621 | 21,924-00+ ಅನ್ವಯಿಸುವ ಬಡ್ಡಿ |
| 5 | ಶ್ರೀ ಮೋಹನ್‌ಕುಮಾರ್ ಸಿ.ಎನ್. ಬಿನ್. ನಿಜಲಿಂಗಪ್ಪ ಸಿ.ಎಂ., ಅಣಬೇರು | 40533302027521 | 32,860-00+ ಅನ್ವಯಿಸುವ ಬಡ್ಡಿ |
| 6 | ಶ್ರೀಮತಿ ಗಂಗಮ್ಮ, ಬಾಡ | 40533302027621 | 54,661-00+ ಅನ್ವಯಿಸುವ ಬಡ್ಡಿ |
| 7 | ಶ್ರೀ ಮಹೇಶ್ವರಪ್ಪ ಬಿನ್. ಸಿದ್ದಪ್ಪ, ಒಂಟಿಹಾಳ್ | 40533302027721 | 76,437-00+ ಅನ್ವಯಿಸುವ ಬಡ್ಡಿ |
| 8 | ಶ್ರೀ ಶ್ರೀನಿವಾಸ, ಬಾಡ | 40533302108121 | 41,992-00+ ಅನ್ವಯಿಸುವ ಬಡ್ಡಿ |
| 9 | ಶ್ರೀಮತಿ ಗಂಗಮ್ಮ ಬಾಡ | 40533302146321 | 33,932-00+ ಅನ್ವಯಿಸುವ ಬಡ್ಡಿ |
| 10 | ಶ್ರೀ ಚನ್ನಬಸಪ್ಪ ಎಸ್.ಆರ್., ಶ್ಯಾಗಲೆ | 40533302168221 | 3,57,040-00+ ಅನ್ವಯಿಸುವ ಬಡ್ಡಿ |

**ಶಾಖೆ: ಸುರಹೊನ್ನೆ, ಹೊನ್ನಾಳಿ ತಾ|| ಮೊ.: 9703616362 ಹರಾಜು ದಿನಾಂಕ 23-06-2022**

| ಕ್ರ. ಸಂ. | ಸಾಲಗಾರರ ಹೆಸರು ಮತ್ತು ವಿಳಾಸ | ಸಾಲದ ಸಂಖ್ಯೆ | ಬಾಕಿ ಮೊತ್ತ (ರೂ.ಗಳಲ್ಲಿ) (07-06-2022ರಂತೆ) |
|---|---|---|---|
| 1 | ಶ್ರೀ ಮಹೇಶ್ವರಪ್ಪ ಬಿ. ಬಿನ್. ಹಾಲಪ್ಪ, ಸುರಹೊನ್ನೆ | 40945302035320 | 80,129-50+ ಅನ್ವಯಿಸುವ ಬಡ್ಡಿ |
| 2 | ಶ್ರೀಮತಿ ಸುಧಾ ಕೆ.ಆರ್. ಕೋಂ. ಕರಿಬಸಪ್ಪ ಹೆಚ್., ನ್ಯಾಮತಿ | 40945302004621 | 1,01,136-00+ ಅನ್ವಯಿಸುವ ಬಡ್ಡಿ |
| 3 | ಶ್ರೀಮತಿ ಈರೀಬಾಯಿ, ಸೂರಗೊಂಡನಕೊಪ್ಪ | 40945302007821 | 31,699-00+ ಅನ್ವಯಿಸುವ ಬಡ್ಡಿ |
| 4 | ಶ್ರೀ ರಂಗನಾಥ ಬಿ., ಸುರಹೊನ್ನೆ | 40945302012121 | 29,267-00+ ಅನ್ವಯಿಸುವ ಬಡ್ಡಿ |
| 5 | ಶ್ರೀ ಮಹೇಶ್ವರಪ್ಪ ಬಿ. ಬಿನ್. ಹಾಲಪ್ಪ, ಸುರಹೊನ್ನೆ | 40945302018521 | 41,789-00+ ಅನ್ವಯಿಸುವ ಬಡ್ಡಿ |

**ಶಾಖೆ: ಹೊಸಕೆರೆ, ಜಗಳೂರು ತಾ||. ಮೊ.: 9113695395 ಹರಾಜು ದಿನಾಂಕ : 22-06-2022**

| ಕ್ರ. ಸಂ. | ಸಾಲಗಾರರ ಹೆಸರು ಮತ್ತು ವಿಳಾಸ | ಸಾಲದ ಸಂಖ್ಯೆ | ಬಾಕಿ ಮೊತ್ತ (ರೂ.ಗಳಲ್ಲಿ) (07-06-2022ರಂತೆ) |
|---|---|---|---|
| 1 | ಶ್ರೀಮತಿ ಮಂಜುಳ ಕೋಂ. ಲೋಕೇಶ್ ಬಿ.ಟಿ., ಹೊಸಕೆರೆ | 40657302003221 | 1,11,987-40+ ಅನ್ವಯಿಸುವ ಬಡ್ಡಿ |
| 2 | ಶ್ರೀ ರವಿಶಾ ವೈ.ಯು. ಬಿನ್. ವೈ. ಉಜ್ಜಿನಪ್ಪ, ಹೊಸಕೆರೆ | 40657302006521 | 92,187-40+ ಅನ್ವಯಿಸುವ ಬಡ್ಡಿ |
| 3 | ಶ್ರೀ ಚೌಡಪ್ಪ ಬಿನ್. ತಿಮ್ಮಜ್ಜ, ಹಿರೇಬನ್ನಿಹಟ್ಟಿ | 40657302007021 | 97,787-40+ ಅನ್ವಯಿಸುವ ಬಡ್ಡಿ |
| 4 | ಶ್ರೀಮತಿ ಶಾರದಮ್ಮ ಕೋಂ. ಹನುಮಂತಪ್ಪ, ಗಡಿಮಾಕುಂಟೆ | 40657302007421 | 21,049-80+ ಅನ್ವಯಿಸುವ ಬಡ್ಡಿ |
| 5 | ಶ್ರೀ ಬಸವರಾಜಪ್ಪ ಬಿನ್. ಸಿದ್ದರಾಮಪ್ಪ, ತುಂಬಿನಕಟ್ಟೆ | 40657302008021 | 1,32,849-40+ ಅನ್ವಯಿಸುವ ಬಡ್ಡಿ |

**ಶಾಖೆ: ಪಲ್ಲಾಗಟ್ಟೆ, ಜಗಳೂರು ತಾ|| ಮೊ.: 9035392819 ಹರಾಜು ದಿನಾಂಕ : 22-06-2022**

| ಕ್ರ. ಸಂ. | ಸಾಲಗಾರರ ಹೆಸರು ಮತ್ತು ವಿಳಾಸ | ಸಾಲದ ಸಂಖ್ಯೆ | ಬಾಕಿ ಮೊತ್ತ (ರೂ.ಗಳಲ್ಲಿ) (07-06-2022ರಂತೆ) |
|---|---|---|---|
| 1 | ಶ್ರೀ ಸೂರಪ್ಪ ಬಿನ್. ಪುಟ್ಟಪ್ಪ, ಸೂರಗೊಂಡನಹಳ್ಳಿ | 40777302056220 | 34,016-72+ ಅನ್ವಯಿಸುವ ಬಡ್ಡಿ |
| 2 | ಶ್ರೀ ಪಿ.ಬಿ. ತಿಮ್ಮೇಶ್ ಬಿನ್. ತಿಮ್ಮಪ್ಪ, ದಿದ್ದಿಗೆ | 40777302062020 | 66,727-00+ ಅನ್ವಯಿಸುವ ಬಡ್ಡಿ |
| 3 | ಶ್ರೀಮತಿ ನಾಗವೇಣಿ ವಿ.ಎಸ್. ಕೋಂ. ನಾರಪ್ಪ, ಪಲ್ಲಾಗಟ್ಟೆ | 40777302002621 | 2,52,400-00+ ಅನ್ವಯಿಸುವ ಬಡ್ಡಿ |
| 4 | ಶ್ರೀಮತಿ ಟಿ.ಸಿ. ರುದ್ರಮ್ಮ ಕೋಂ. ಶಿವಮೂರ್ತಿ, ಪಲ್ಲಾಗಟ್ಟೆ | 40777302003921 | 52,928-00+ ಅನ್ವಯಿಸುವ ಬಡ್ಡಿ |
| 5 | ಶ್ರೀ ಮಂಜಪ್ಪ ಎಂ.ಎನ್. ಬಿನ್. ವಿರುಪಾಕ್ಷಪ್ಪ, ದಿದ್ದಿಗೆ | 40777302004221 | 13,226-00+ ಅನ್ವಯಿಸುವ ಬಡ್ಡಿ |
| 6 | ಶ್ರೀ ಕರಿಬಸಪ್ಪ ಎಸ್.ಜೆ. ಬಿನ್. ಶಿವಪ್ಪ, ಕಲ್ಲೇನಹಳ್ಳಿ | 40777302004321 | 2,72,854-00+ ಅನ್ವಯಿಸುವ ಬಡ್ಡಿ |
| 7 | ಶ್ರೀ ವೀರಪ್ಪ ವೀರಭದ್ರಪ್ಪ ಬಿನ್. ಬಸಪ್ಪ, ಕಲ್ಲೇನಹಳ್ಳಿ | 40777302004721 | 1,66,002-00+ ಅನ್ವಯಿಸುವ ಬಡ್ಡಿ |
| 8 | ಶ್ರೀಮತಿ ಕೆ. ಮಂಜುಳಾ ಕೋಂ. ಬಸವರಾಜ, ಪಲ್ಲಾಗಟ್ಟೆ | 40777302007421 | 1,09,417-85+ ಅನ್ವಯಿಸುವ ಬಡ್ಡಿ |
| 9 | ಶ್ರೀ ಕೆಂಚಪ್ಪ ಬಿನ್. ಬಸಪ್ಪ, ಸೂರಗೊಂಡನಹಳ್ಳಿ | 40777302009021 | 20,799-00+ ಅನ್ವಯಿಸುವ ಬಡ್ಡಿ |
| 10 | ಶ್ರೀ ಗುರುಮೂರ್ತಿ ಜಿ.ಆರ್. ಬಿನ್. ರಂಗಪ್ಪ, ಪಾಲನಾಯಕನಕೋಟೆ | 40777302009321 | 68,918-00+ ಅನ್ವಯಿಸುವ ಬಡ್ಡಿ |
| 11 | ಶ್ರೀಮತಿ ಕಲ್ಲಮ್ಮ ಎನ್. ಕೋಂ. ಶಂಭುಲಿಂಗಪ್ಪ, ಪಲ್ಲಾಗಟ್ಟೆ | 40777302010021 | 79,812-00+ ಅನ್ವಯಿಸುವ ಬಡ್ಡಿ |
| 12 | ಶ್ರೀ ಮಂಜಪ್ಪ ಎಂ. ಎನ್. ಬಿನ್. ವಿರೂಪಾಕ್ಷಪ್ಪ, ದಿದ್ದಿಗೆ | 69915301036621 | 16,725-00+ ಅನ್ವಯಿಸುವ ಬಡ್ಡಿ |
| 13 | ಶೋಭಾ ಆರ್. ಬಿನ್. ಆನಂದ, ಪಲ್ಲಾಗಟ್ಟೆ | 69915301003422 | 10,158-00+ ಅನ್ವಯಿಸುವ ಬಡ್ಡಿ |

**ಶಾಖೆ: ಸಿರಿಗೆರೆ(ಡಿವಿಜಿ) ಹರಿಹರ ತಾ|| ಮೊ.: 9394026663 ಹರಾಜು ದಿನಾಂಕ : 23-06-2022**

| ಕ್ರ. ಸಂ. | ಸಾಲಗಾರರ ಹೆಸರು ಮತ್ತು ವಿಳಾಸ | ಸಾಲದ ಸಂಖ್ಯೆ | ಬಾಕಿ ಮೊತ್ತ (ರೂ.ಗಳಲ್ಲಿ) (07-06-2022ರಂತೆ) |
|---|---|---|---|
| 1 | ಶ್ರೀ ಎಂ. ಕುಬೇರಪ್ಪ ಬಿನ್. ಎಂ. ಬಸಪ್ಪ, ಸಿರಿಗೆರೆ | 40815302001721 | 1,09,188-00+ ಅನ್ವಯಿಸುವ ಬಡ್ಡಿ |
| 2 | ಶ್ರೀ ಮಲ್ಲಿಕಾರ್ಜುನ ಎಸ್. ಬಿನ್. ಶ್ಯಾಮನೂರು ಕರಿಯಪ್ಪ, ಸಿರಿಗೆರೆ | 40815302009621 | 1,02,885-00+ ಅನ್ವಯಿಸುವ ಬಡ್ಡಿ |
| 3 | ಶ್ರೀ ಮಹೇಶ್ವರಪ್ಪ ಬಿನ್. ಬಸಪ್ಪ, ಹುಲಿಗನಹೊಳೆ | 40815302011321 | 41,976-00+ ಅನ್ವಯಿಸುವ ಬಡ್ಡಿ |
| 4 | ಶ್ರೀ ಯಲ್ಲಪ್ಪ ಬಿ. ಉಕ್ಕಡಗಾತ್ರಿ ಬಿನ್. ಭರಮಪ್ಪ, ಮಲಹಳ್ಳಿ | 40815302012221 | 59,416-00+ ಅನ್ವಯಿಸುವ ಬಡ್ಡಿ |
| 5 | ಶ್ರೀ ಹೆಚ್. ಎಂ. ವಿಶ್ವನಾಥಯ್ಯ ಬಿನ್. ಶೇಖರಯ್ಯ, ಯಳೆಹೊಳೆ | 40815302034720 | 62,914-00+ ಅನ್ವಯಿಸುವ ಬಡ್ಡಿ |
| 6 | ಶ್ರೀ ಕೊಟ್ರೇಶ್ ಹೊಸಹಳ್ಳಿ ಬಿನ್. ಲೇ|| ಹನುಮಂತಪ್ಪ, ಸಿರಿಗೆರೆ | 40815302039820 | 26,066-00+ ಅನ್ವಯಿಸುವ ಬಡ್ಡಿ |
| 7 | ಶ್ರೀ ಎಂ. ಹೇಮಂತ್‌ಕುಮಾರ್ ಬಿನ್. ತಿರುಕಪ್ಪ, ಸಿರಿಗೆರೆ | 40815302055820 | 2,15,973-00+ ಅನ್ವಯಿಸುವ ಬಡ್ಡಿ |

**ಶಾಖೆ: ಡಿ.ಬಿ.ಕೆರೆ, ಹರಿಹರ ತಾ|| ಮೊ.: 9481909515 ಹರಾಜು ದಿನಾಂಕ : 18-06-2022**

| ಕ್ರ. ಸಂ. | ಸಾಲಗಾರರ ಹೆಸರು ಮತ್ತು ವಿಳಾಸ | ಸಾಲದ ಸಂಖ್ಯೆ | ಬಾಕಿ ಮೊತ್ತ (ರೂ.ಗಳಲ್ಲಿ) (07-06-2022ರಂತೆ) |
|---|---|---|---|
| 1 | ಶ್ರೀ ಮಂಜಪ್ಪ ಬಿನ್. ದುರುಗಪ್ಪ, ಕಡ್ಲೆಗುಂದಿ | 40585302063520 | 22,143-50+ ಅನ್ವಯಿಸುವ ಬಡ್ಡಿ |
| 2 | ಶ್ರೀ ರಾಜಶೇಖರ್ ಬಿನ್. ನಿಂಗಪ್ಪ, ಡಿ.ಬಿ.ಕೆರೆ | 40585302003221 | 9,799-00+ ಅನ್ವಯಿಸುವ ಬಡ್ಡಿ |
| 3 | ಶ್ರೀಮತಿ ರೇವಮ್ಮ ಕೋಂ. ಬಸವರಾಜಪ್ಪ, ಡಿ.ಬಿ. ಕೆರೆ | 40585302010511 | 40,474-00+ ಅನ್ವಯಿಸುವ ಬಡ್ಡಿ |

**ಶಾಖೆ: ಸೊಕ್ಕೆ, ಜಗಳೂರು ತಾ|| ಮೊ.: 7019896889 ಹರಾಜು ದಿನಾಂಕ : 20-06-2022**

| ಕ್ರ. ಸಂ. | ಸಾಲಗಾರರ ಹೆಸರು ಮತ್ತು ವಿಳಾಸ | ಸಾಲದ ಸಂಖ್ಯೆ | ಬಾಕಿ ಮೊತ್ತ (ರೂ.ಗಳಲ್ಲಿ) (07-06-2022ರಂತೆ) |
|---|---|---|---|
| 1 | ಶ್ರೀಮತಿ ನಳಿನ ಕೋಂ. ಹಾಲಪ್ಪ, ಗೋಪಾಲಪುರ | 40821302044720 | 1,02,509-30+ ಅನ್ವಯಿಸುವ ಬಡ್ಡಿ |
| 2 | ಶ್ರೀ ಬಸವರಾಜಪ್ಪ ಬಿನ್. ಹನುಮಂತಪ್ಪ, ಯರ್ಲಕಟ್ಟೆ | 40821302046820 | 1,00,191-30+ ಅನ್ವಯಿಸುವ ಬಡ್ಡಿ |
| 3 | ಶ್ರೀಮತಿ ಶಾರದಮ್ಮ ಕೋಂ. ಸಿದ್ದಪ್ಪ, ಸೊಕ್ಕೆ | 40821302001221 | 16,469-00+ ಅನ್ವಯಿಸುವ ಬಡ್ಡಿ |
| 4 | ಶ್ರೀ ಚನ್ನಬಸಪ್ಪ ಬಿನ್. ಗೌರಣ್ಣ ಕಲ್ಲಳ್ಳಿ, ಗಡಿಮಾಕುಂಟೆ | 40821302001321 | 67,261-00+ ಅನ್ವಯಿಸುವ ಬಡ್ಡಿ |
| 5 | ಶ್ರೀ ಡಿ. ಚೌಡಪ್ಪ ಬಿನ್. ನಿಂಗಪ್ಪ, ಸೊಕ್ಕೆ | 40821302004021 | 15,313-00+ ಅನ್ವಯಿಸುವ ಬಡ್ಡಿ |
| 6 | ಶ್ರೀಮತಿ ಹೆಚ್. ಎಸ್. ರಂಜಿತ ಕೋಂ. ಮದ್ದನಿ, ಚಿಕ್ಕಉಜ್ಜಿನಿ | 40821302004321 | 43,323-00+ ಅನ್ವಯಿಸುವ ಬಡ್ಡಿ |
| 7 | ಶ್ರೀಮತಿ ಬಸಮ್ಮ ಟಿ.ಹೆಚ್., ಸೊಕ್ಕೆ | 40821302004421 | 76,822-00+ ಅನ್ವಯಿಸುವ ಬಡ್ಡಿ |
| 8 | ಶ್ರೀ ಜೆ. ಮಂಜುನಾಥ ಬಿನ್. ಜಯಪ್ಪ, ಗಡಿಮಾಕುಂಟೆ | 40821302004521 | 1,53,481-00+ ಅನ್ವಯಿಸುವ ಬಡ್ಡಿ |
| 9 | ಶ್ರೀ ಎಂ. ಬಿ. ಶಿವಮೂರ್ತಯ್ಯ ಬಿನ್. ವೀರಯ್ಯ, ಚಿಕ್ಕಉಜ್ಜಿನಿ | 40821302005121 | 38,332-00+ ಅನ್ವಯಿಸುವ ಬಡ್ಡಿ |
| 10 | ಶ್ರೀಮತಿ ಕಾಳಮ್ಮ ಕೋಂ. ಚೌಡಪ್ಪ, ಸೊಕ್ಕೆ | 40821302005321 | 76,661-00+ ಅನ್ವಯಿಸುವ ಬಡ್ಡಿ |
| 11 | ಶ್ರೀ ಚಂದ್ರಶೇಖರ ಡಿ. ಬಿನ್. ಈಶ್ವರಪ್ಪ ಡಿ., ಸಿ.ಬಿ.ಹಳ್ಳಿ | 40821302005921 | 13,103-00+ ಅನ್ವಯಿಸುವ ಬಡ್ಡಿ |
| 12 | ಶ್ರೀ ಚಂದ್ರಶೇಖರ ಡಿ. ಬಿನ್. ಈಶ್ವರಪ್ಪ ಡಿ., ಸಿ.ಬಿ.ಹಳ್ಳಿ | 40821302006021 | 17,471-00+ ಅನ್ವಯಿಸುವ ಬಡ್ಡಿ |
| 13 | ಶ್ರೀ ರೇವಣಸಿದ್ದಪ್ಪ ಎಂ.ಕೆ. ಬಿನ್. ಕಲ್ಲೇಶಪ್ಪ, ಸೊಕ್ಕೆ | 40821302007421 | 54,558-00+ ಅನ್ವಯಿಸುವ ಬಡ್ಡಿ |
| 14 | ಶ್ರೀಮತಿ ಪುಷ್ಪ ಕೋಂ. ಶ್ರೀನಿವಾಸ, ಯರ್ಲಕಟ್ಟೆ | 40821302007621 | 20,686-00+ ಅನ್ವಯಿಸುವ ಬಡ್ಡಿ |
| 15 | ಶ್ರೀ ಬಿ.ಎನ್. ಚನ್ನಬಸಪ್ಪ ಬಿನ್. ಬಿ. ನಾಗಣ್ಣ, ಸೊಕ್ಕೆ | 40821302008021 | 39,210-00+ ಅನ್ವಯಿಸುವ ಬಡ್ಡಿ |
| 16 | ಶ್ರೀ ಹನುಮಂತಪ್ಪ ಬಿ. ಬಿನ್. ಕರಿಯಪ್ಪ, ಸೊಕ್ಕೆ | 40821302008121 | 1,61,189-00+ ಅನ್ವಯಿಸುವ ಬಡ್ಡಿ |
| 17 | ಬಿ. ಪ್ರೇಮ ಬಿನ್. ಬಸವರಾಜಪ್ಪ, ಗಡಿಮಾಕುಂಟೆ | 40821302008721 | 31,585-00+ ಅನ್ವಯಿಸುವ ಬಡ್ಡಿ |
| 18 | ಬಿ. ಪ್ರೇಮ ಬಿನ್. ಬಸವರಾಜಪ್ಪ, ಗಡಿಮಾಕುಂಟೆ | 40821302019621 | 22,368-00+ ಅನ್ವಯಿಸುವ ಬಡ್ಡಿ |
| 19 | ಶ್ರೀಮತಿ ಶಾರದಮ್ಮ ಕೋಂ. ಸಿದ್ದಪ್ಪ, ಸೊಕ್ಕೆ | 40821302031421 | 25,199-00+ ಅನ್ವಯಿಸುವ ಬಡ್ಡಿ |

**ಶಾಖೆ: ನಂದಿತಾವರೆ, ಹರಿಹರ ತಾ|| ಮೊ.: 9482205050 ಹರಾಜು ದಿನಾಂಕ : 29-06-2022**

| ಕ್ರ. ಸಂ. | ಸಾಲಗಾರರ ಹೆಸರು ಮತ್ತು ವಿಳಾಸ | ಸಾಲದ ಸಂಖ್ಯೆ | ಬಾಕಿ ಮೊತ್ತ (ರೂ.ಗಳಲ್ಲಿ) (07-06-2022ರಂತೆ) |
|---|---|---|---|
| 1 | ಶ್ರೀ ಬಿ. ಸಿದ್ದಪ್ಪ ಬಿನ್. ರೇವಣಪ್ಪ, ಕುಣೆಬೆಳಕೆರೆ | 40768302005521 | 48,873-00+ ಅನ್ವಯಿಸುವ ಬಡ್ಡಿ |
| 2 | ಶ್ರೀ ಬಿ. ಸಿದ್ದಪ್ಪ ಬಿನ್. ರೇವಣಪ್ಪ, ಕುಣೆಬೆಳಕೆರೆ | 40768302022521 | 29,222-00+ ಅನ್ವಯಿಸುವ ಬಡ್ಡಿ |
| 3 | ಶ್ರೀ ದೇವರಾಜ ಬಿ.ಜಿ. ಬಿನ್. ಬಸವನಗೌಡ, ಯಕ್ಕೆಗುಂದಿ | 40768302016621 | 2,47,868-00+ ಅನ್ವಯಿಸುವ ಬಡ್ಡಿ |
| 4 | ಶ್ರೀ ಹನುಮಂತಪ್ಪ ಬಿನ್. ಮಲ್ಲೇಶಪ್ಪ, ಕುಣೆಬೆಳಕೆರೆ | 40768302010821 | 46,098-00+ ಅನ್ವಯಿಸುವ ಬಡ್ಡಿ |
| 5 | ಶ್ರೀಮತಿ ಇಂದ್ರಮ್ಮ ಕೋಂ. ಚನ್ನಬಸಪ್ಪ, ದಿಬ್ಬದಹಳ್ಳಿ | 40768302000421 | 36,449-00+ ಅನ್ವಯಿಸುವ ಬಡ್ಡಿ |
| 6 | ಶ್ರೀಮತಿ ನೇತ್ರಾವತಿ ಎನ್. ಕೋಂ. ಹರಳಯ್ಯ, ಕುಣೆಬೆಳಕೆರೆ | 40768302011521 | 49,330-00+ ಅನ್ವಯಿಸುವ ಬಡ್ಡಿ |
| 7 | ಶ್ರೀಮತಿ ರುದ್ರಮ್ಮ ಕೋಂ. ಹನುಮಂತಪ್ಪ, ಕುಣೆಬೆಳಕೆರೆ | 40768302008321 | 23,019-00+ ಅನ್ವಯಿಸುವ ಬಡ್ಡಿ |
| 8 | ಶ್ರೀಮತಿ ಶ್ವೇತ ಕೋಂ. ರವಿಚಂದ್ರ, ಕುಣೆಬೆಳಕೆರೆ | 40768302016021 | 89,478-00+ ಅನ್ವಯಿಸುವ ಬಡ್ಡಿ |
| 9 | ಶ್ರೀ ತಿಪ್ಪಣ್ಣ ಬಿನ್. ಸಿದ್ದಪ್ಪ, ಕುಣೆಬೆಳಕೆರೆ | 40768302006621 | 2,72,996-00+ ಅನ್ವಯಿಸುವ ಬಡ್ಡಿ |

**ಶಾಖೆ: ವಾಸನ, ಹರಿಹರ ತಾ|| ಮೊ.: 9481062961 ಹರಾಜು ದಿನಾಂಕ : 18-06-2022**

| ಕ್ರ. ಸಂ. | ಸಾಲಗಾರರ ಹೆಸರು ಮತ್ತು ವಿಳಾಸ | ಸಾಲದ ಸಂಖ್ಯೆ | ಬಾಕಿ ಮೊತ್ತ (ರೂ.ಗಳಲ್ಲಿ) (07-06-2022ರಂತೆ) |
|---|---|---|---|
| 1 | ಶ್ರೀಮತಿ ಚಂದ್ರಮ್ಮ ಎಂ. ಕೋಂ. ಪ್ರಕಾಶ್, ಕಡಾರನಾಯಕನಹಳ್ಳಿ | 40855302004921 | 48,453-50+ ಅನ್ವಯಿಸುವ ಬಡ್ಡಿ |
| 2 | ಶ್ರೀ ಈರನಗೌಡ ಪಾಟೀಲ್ ಬಿನ್. ಹಾಲನಗೌಡ ಪಾಟೀಲ್, ತಿಮ್ಮೇನಹಳ್ಳಿ | 40855302012921 | 20,774-50+ ಅನ್ವಯಿಸುವ ಬಡ್ಡಿ |
| 3 | ಶ್ರೀ ನೀಲಮ್ಮ ಬಿನ್. ಕರಿಯಲ್ಲಪ್ಪ, ವಾಸನ | 40855302013121 | 25,170-50+ ಅನ್ವಯಿಸುವ ಬಡ್ಡಿ |
| 4 | ಜ್ಯೋತಿ ಬಿನ್. ಪರಮೇಶ್ವರಪ್ಪ, ಕಡಾರನಾಯಕನಹಳ್ಳಿ | 40855302018221 | 43,494-50+ ಅನ್ವಯಿಸುವ ಬಡ್ಡಿ |
| 5 | ಶ್ರೀಮತಿ ಬಸಮ್ಮ ಕೋಂ. ಪರಸಪ್ಪ, ಕಡಾರನಾಯಕನಹಳ್ಳಿ | 40855302018721 | 49,965-50+ ಅನ್ವಯಿಸುವ ಬಡ್ಡಿ |
| 6 | ಶ್ರೀಮತಿ ಶೇಖಮ್ಮ ಕೋಂ. ಶೇಖರಪ್ಪ ಜಿ., ವಾಸನ | 40855302020821 | 32,496-50+ ಅನ್ವಯಿಸುವ ಬಡ್ಡಿ |

**ಶಾಖೆ: ಹರಿಹರ, ದಾವಣಗೆರೆ ಜಿಲ್ಲೆ, ಮೊ.: 8892102143 ಹರಾಜು ದಿನಾಂಕ : 29-06-2022**

| ಕ್ರ. ಸಂ. | ಸಾಲಗಾರರ ಹೆಸರು ಮತ್ತು ವಿಳಾಸ | ಸಾಲದ ಸಂಖ್ಯೆ | ಬಾಕಿ ಮೊತ್ತ (ರೂ.ಗಳಲ್ಲಿ) (07-06-2022ರಂತೆ) |
|---|---|---|---|
| 1 | ಶ್ರೀಮತಿ ಸಮೀನಾ ಬೀ ಕೋಂ. ಇದಿಯಾಜ್, ಗಂಗನರಸಿ | 40633302005121 | 1,37,992-50+ ಅನ್ವಯಿಸುವ ಬಡ್ಡಿ |
| 2 | ಶ್ರೀ ಅಂಜಿನಪ್ಪ ಬಿನ್. ಹನುಮಂತಪ್ಪ, ಗುತ್ತೂರು | 40633302005921 | 23,093-50+ ಅನ್ವಯಿಸುವ ಬಡ್ಡಿ |
| 3 | ಶ್ರೀಮತಿ ಜಬೀನಾಬೀ ಕೋಂ. ಶಬ್ಬೀರ್ ಅಹಮ್ಮದ್, ಅಮರಾವತಿ | 40633302012921 | 67,649-00+ ಅನ್ವಯಿಸುವ ಬಡ್ಡಿ |
| 4 | ಶ್ರೀ ಮಂಜುನಾಥ್ ಬಿನ್. ಶರಣಪ್ಪ, ಗುತ್ತೂರು | 40633302015521 | 40,567-00+ ಅನ್ವಯಿಸುವ ಬಡ್ಡಿ |
| 5 | ಶ್ರೀ ಲಕ್ಷ್ಮಿ ಪ್ರಸಾದ್ ಬಿನ್. ಮಲ್ಲಾಪುರಿ ವೀರಭದ್ರಪ್ಪ, ಗಂಗನರಸಿ | 40633302015821 | 70,681-00+ ಅನ್ವಯಿಸುವ ಬಡ್ಡಿ |

**ಶಾಖೆ: ಸರಸ್ವತಿ ಬಡಾವಣೆ, ದಾವಣಗೆರೆ, ಮೊ.: 9482604127 ಹರಾಜು ದಿನಾಂಕ : 23-06-2022**

| ಕ್ರ. ಸಂ. | ಸಾಲಗಾರರ ಹೆಸರು ಮತ್ತು ವಿಳಾಸ | ಸಾಲದ ಸಂಖ್ಯೆ | ಬಾಕಿ ಮೊತ್ತ (ರೂ.ಗಳಲ್ಲಿ) (07-06-2022ರಂತೆ) |
|---|---|---|---|
| 1 | ಶ್ರೀ ಪ್ರದೀಪ್‌ಕುಮಾರ್ ಜಿ.ಎಸ್. ಬಿನ್. ಶಿವಲಿಂಗಪ್ಪ, ನಿಟುವಳ್ಳಿ, ದಾವಣಗೆರೆ. | 40924302050420 | 2,22,666-00+ ಅನ್ವಯಿಸುವ ಬಡ್ಡಿ |

**ಶಾಖೆ: ಬೆನಕನಹಳ್ಳಿ, ಹೊನ್ನಾಳಿ ತಾ|| ಮೊ.: 9008991048 ಹರಾಜು ದಿನಾಂಕ : 18-06-2022**

| ಕ್ರ. ಸಂ. | ಸಾಲಗಾರರ ಹೆಸರು ಮತ್ತು ವಿಳಾಸ | ಸಾಲದ ಸಂಖ್ಯೆ | ಬಾಕಿ ಮೊತ್ತ (ರೂ.ಗಳಲ್ಲಿ) (07-06-2022ರಂತೆ) |
|---|---|---|---|
| 1 | ಶ್ರೀಮತಿ ಅಕ್ಕಮ್ಮ ಕೋಂ. ಹನುಮಂತಪ್ಪ, ಬೆನಕನಹಳ್ಳಿ | 40554302004521 | 52,755-00+ ಅನ್ವಯಿಸುವ ಬಡ್ಡಿ |
| 2 | ಶ್ರೀ ಪರಮೇಶ್ವರಪ್ಪ ಟಿ.ಆರ್. ಬಿನ್. ರಂಗಪ್ಪ, ಬೀರಗೊಂಡನಹಳ್ಳಿ | 40554302004721 | 32,964-34+ ಅನ್ವಯಿಸುವ ಬಡ್ಡಿ |

**ಶಾಖೆ: ಲಿಂಗಾಪುರ, ಹೊನ್ನಾಳಿ ತಾ|| ಮೊ.: 8919017899 ಹರಾಜು ದಿನಾಂಕ : 21-06-2022**

| ಕ್ರ. ಸಂ. | ಸಾಲಗಾರರ ಹೆಸರು ಮತ್ತು ವಿಳಾಸ | ಸಾಲದ ಸಂಖ್ಯೆ | ಬಾಕಿ ಮೊತ್ತ (ರೂ.ಗಳಲ್ಲಿ) (07-06-2022ರಂತೆ) |
|---|---|---|---|
| 1 | ಶ್ರೀ ತಾನೇಶ್‌ರಾವ್ ಕೆ.ಎಲ್. ಬಿನ್. ಲಕ್ಷ್ಮಣಪ್ಪ ಕೆ. ಹನಗವಾಡಿ | 40940302000121 | 86,991-40+ ಅನ್ವಯಿಸುವ ಬಡ್ಡಿ |
| 2 | ಶ್ರೀ ಪಾಂಡುರಾವ್ ಬಿನ್. ರಂಗೋಜಿರಾವ್, ಲಿಂಗಾಪುರ | 40940302004321 | 13,928-40+ ಅನ್ವಯಿಸುವ ಬಡ್ಡಿ |
| 3 | ಶ್ರೀ ಪ್ರಕಾಶ್ ಕೆ.ಎಲ್. ಬಿನ್. ಗಿಡ್ಡಹನುಮಂತರಾವ್, ಲಿಂಗಾಪುರ | 40940302011121 | 1,40,360-40+ ಅನ್ವಯಿಸುವ ಬಡ್ಡಿ |
| 4 | ಶ್ರೀಮತಿ ಮೀನಾಕ್ಷಿ ಕೋಂ. ರಾಘವೇಂದ್ರ, ಹನಗವಾಡಿ | 40940302014721 | 58,571-00+ ಅನ್ವಯಿಸುವ ಬಡ್ಡಿ |
| 5 | ಶ್ರೀ ರಾಜು ಎನ್., ಹೊಸಹಳ್ಳಿ | 40940302017321 | 34,035-00+ ಅನ್ವಯಿಸುವ ಬಡ್ಡಿ |
| 6 | ಶ್ರೀ ವೀರೇಶಾಚಾರ್ ಆರ್. ಬಿನ್. ರಾಮಾಚಾರ್ ಹೆಚ್. ಹೊಸಹಳ್ಳಿ. | 40940302046421 | 62,660-00+ ಅನ್ವಯಿಸುವ ಬಡ್ಡಿ |

**ಶಾಖೆ: ಮುಸ್ಟೂರು, ಜಗಳೂರು ತಾ|| ಮೊ.: 9008882730 ಹರಾಜು ದಿನಾಂಕ : 28-06-2022**

| ಕ್ರ. ಸಂ. | ಸಾಲಗಾರರ ಹೆಸರು ಮತ್ತು ವಿಳಾಸ | ಸಾಲದ ಸಂಖ್ಯೆ | ಬಾಕಿ ಮೊತ್ತ (ರೂ.ಗಳಲ್ಲಿ) (07-06-2022ರಂತೆ) |
|---|---|---|---|
| 1 | ಶ್ರೀಮತಿ ಶಶಿಕಲಾ ಕೋಂ. ಪಾತಲಿಂಗಪ್ಪ, ಹೊಸಹಟ್ಟಿ | 40760302001921 | 33,081-00+ ಅನ್ವಯಿಸುವ ಬಡ್ಡಿ |
| 2 | ಶ್ರೀ ಶಿವಣ್ಣ ಬಿನ್. ತಿನ್ನಯ್ಯ, ಮುಸ್ಟೂರು | 40760302002221 | 9,873-00+ ಅನ್ವಯಿಸುವ ಬಡ್ಡಿ |
| 3 | ಶ್ರೀ ತಿಪ್ಪೇಸ್ವಾಮಿ ಎಸ್.ಬಿ. ಬಿನ್. ಬಸವರಾಜ್, ಸಿದ್ದಮ್ಮನಹಳ್ಳಿ | 40760302002421 | 52,859-00+ ಅನ್ವಯಿಸುವ ಬಡ್ಡಿ |
| 4 | ಶ್ರೀ ವೀರಣ್ಣ ಬಿನ್. ದೊಡ್ಡ ಬಾಲಪ್ಪ, ಸಿದ್ದಮ್ಮನಹಳ್ಳಿ | 40760302003521 | 70,103-00+ ಅನ್ವಯಿಸುವ ಬಡ್ಡಿ |
| 5 | ಶ್ರೀಮತಿ ಕೆ.ಎಂ. ಕಾವ್ಯಶ್ರೀ ಕೋಂ. ಸಂತೋಷಕುಮಾರ್ ಬಿ.ಎಂ., ಮುಸ್ಟೂರು | 40760302008821 | 31,703-00+ ಅನ್ವಯಿಸುವ ಬಡ್ಡಿ |
| 6 | ಶ್ರೀ ಬಸವರಾಜ ಡಿ.ಕೆ. ಬಿನ್. ಕೃಷ್ಣಪ್ಪ, ಬಂಗಾರಕ್ಕನಗುಡ್ಡ | 40760302010021 | 27,223-00+ ಅನ್ವಯಿಸುವ ಬಡ್ಡಿ |
| 7 | ಶ್ರೀ ಬಾಲಪ್ಪ ಬಿನ್. ಸಣ್ಣಬಾಲಪ್ಪ, ಸಿದ್ದಮ್ಮನಹಳ್ಳಿ | 40760302010121 | 23,957-00+ ಅನ್ವಯಿಸುವ ಬಡ್ಡಿ |
| 8 | ಶ್ರೀ ಶಿವಣ್ಣ ಬಿನ್. ತಿನ್ನಯ್ಯ, ಮುಸ್ಟೂರು | 40760302024321 | 10,586-00+ ಅನ್ವಯಿಸುವ ಬಡ್ಡಿ |

**ಶಾಖೆ: ಕಬ್ಬಳ, ಚನ್ನಗಿರಿ ತಾ|| ಮೊ.: 9036410410 ಹರಾಜು ದಿನಾಂಕ : 20-06-2022**

| ಕ್ರ. ಸಂ. | ಸಾಲಗಾರರ ಹೆಸರು ಮತ್ತು ವಿಳಾಸ | ಸಾಲದ ಸಂಖ್ಯೆ | ಬಾಕಿ ಮೊತ್ತ (ರೂ.ಗಳಲ್ಲಿ) (07-06-2022ರಂತೆ) |
|---|---|---|---|
| 1 | ಬಿ. ಸರೋಜ ಬಿನ್. ದೇವಪ್ಪ, ದೊಡ್ಡಘಟ್ಟ ನವಿಲೇಹಾಳ್ | 40893302001121 | 45,320-00+ ಅನ್ವಯಿಸುವ ಬಡ್ಡಿ |
| 2 | ಶ್ರೀಮತಿ ನೀಲಾಬಾಯಿ ಕೋಂ. ಅಶೋಕ, ಕಬ್ಬಳ | 40893302005121 | 1,31,195-00+ ಅನ್ವಯಿಸುವ ಬಡ್ಡಿ |
| 3 | ಶ್ರೀ ಹನುಮಂತಪ್ಪ ಬಿನ್. ಮರುಡಪ್ಪ, ಕರೇಕಟ್ಟೆ | 40893302006221 | 24,137-00+ ಅನ್ವಯಿಸುವ ಬಡ್ಡಿ |
| 4 | ಶ್ರೀಮತಿ ನೀಲಾಬಾಯಿ ಕೋಂ. ಅಶೋಕ, ಕಬ್ಬಳ | 40893302021621 | 1,35,181-00+ ಅನ್ವಯಿಸುವ ಬಡ್ಡಿ |
| 5 | ಶ್ರೀ ಹನುಮಂತಪ್ಪ ಬಿನ್. ಮರುಡಪ್ಪ, ಕರೇಕಟ್ಟೆ | 40893302062721 | 1,22,609-00+ ಅನ್ವಯಿಸುವ ಬಡ್ಡಿ |

**ಶಾಖೆ: ಕುಂಬಳೂರು, ಹರಿಹರ ತಾ|| ಮೊ.: 9980433090 ಹರಾಜು ದಿನಾಂಕ : 24-06-2022**

| ಕ್ರ. ಸಂ. | ಸಾಲಗಾರರ ಹೆಸರು ಮತ್ತು ವಿಳಾಸ | ಸಾಲದ ಸಂಖ್ಯೆ | ಬಾಕಿ ಮೊತ್ತ (ರೂ.ಗಳಲ್ಲಿ) (07-06-2022ರಂತೆ) |
|---|---|---|---|
| 1 | ಶ್ರೀ ರಂಗಪ್ಪ ವೈ. ಬಿನ್. ಕಣ್ಣಪ್ಪ, ಕುಂಬಳೂರು | 40712302001721 | 1,10,449-00+ ಅನ್ವಯಿಸುವ ಬಡ್ಡಿ |
| 2 | ಶ್ರೀ ರಂಗಪ್ಪ ವೈ. ಬಿನ್. ಕಣ್ಣಪ್ಪ, ಕುಂಬಳೂರು | 40712302001821 | 1,98,726-00+ ಅನ್ವಯಿಸುವ ಬಡ್ಡಿ |
| 3 | ಶ್ರೀ ಜಗದೀಶ ಬಿನ್. ಶಿವನಗೌಡ, ಕುಂಬಳೂರು | 40712302003721 | 33,146-00+ ಅನ್ವಯಿಸುವ ಬಡ್ಡಿ |
| 4 | ಶ್ರೀಮತಿ ಸರೋಜಮ್ಮ ಕೋಂ. ಹನುಮಂತಪ್ಪ, ಕುಂಬಳೂರು | 40712302010321 | 76,982-00+ ಅನ್ವಯಿಸುವ ಬಡ್ಡಿ |
| 5 | ಶ್ರೀ ತಿರುಕಪ್ಪ ಹೆಚ್. ಬಿನ್. ನಿಂಗಪ್ಪ, ಕುಂಬಳೂರು | 40712302012720 | 1,64,042-00+ ಅನ್ವಯಿಸುವ ಬಡ್ಡಿ |
| 6 | ಶ್ರೀ ಸೋಮಶೇಖರ್ ಬಿನ್. ಎ.ಕೆ. ರಾಮಪ್ಪ, ಬೇವಿನಹಳ್ಳಿ | 40712302014221 | 12,040-00+ ಅನ್ವಯಿಸುವ ಬಡ್ಡಿ |
| 7 | ಶ್ರೀ ಎಂ. ಸಮೀರ್ ಬಿನ್. ಮುಸ್ತಾಕ್ ಅಹಮ್ಮದ್, ಮಲೇಬೆನ್ನೂರು | 40712302014521 | 82,215-00+ ಅನ್ವಯಿಸುವ ಬಡ್ಡಿ |
| 8 | ಶ್ರೀ ಲಿಂಗರಾಜು ಕೆ. ಬಿನ್. ರಾಮಪ್ಪ ಕಂಬಳಿ, ಜಿಗಳಿ | 40712302014721 | 1,09,587-00+ ಅನ್ವಯಿಸುವ ಬಡ್ಡಿ |
| 9 | ಶ್ರೀಮತಿ ಎಂ. ದ್ರಾಕ್ಷಾಯಣಮ್ಮ ಕೋಂ. ಬಸೆಟಪ್ಪ, ಜಿಗಳಿ | 40712302016121 | 1,44,507-00+ ಅನ್ವಯಿಸುವ ಬಡ್ಡಿ |
| 10 | ಶ್ರೀ ಬಿ.ಹೆಚ್. ಆಂಜನೇಯ ಬಿನ್. ಬಜ್ಜಿಹಾಲಪ್ಪ, ನಿಟ್ಟೂರು | 40712302019121 | 23,997-00+ ಅನ್ವಯಿಸುವ ಬಡ್ಡಿ |
| 11 | ಶ್ರೀಮತಿ ಭಾರತಿ ಸಿ.ಹೆಚ್. ಕೋಂ. ನಾಗಪ್ರಸಾದ್, ವಿನಾಯಕನಗರ ಕ್ಯಾಂಪ್ | 40712302022021 | 1,50,867-00+ ಅನ್ವಯಿಸುವ ಬಡ್ಡಿ |
| 12 | ಶ್ರೀಮತಿ ರೇಣುಕಮ್ಮ ಕೋಂ. ತಿಪ್ಪೇಶಪ್ಪ, ಜಿಗಳಿ | 40712302022921 | 76,198-00+ ಅನ್ವಯಿಸುವ ಬಡ್ಡಿ |
| 13 | ಶ್ರೀಮತಿ ದೀಪಾ ಕೋಂ. ಗಿರೀಶ್, ಬೇವಿನಹಳ್ಳಿ | 40712302024921 | 23,916-00+ ಅನ್ವಯಿಸುವ ಬಡ್ಡಿ |
| 14 | ಶ್ರೀಮತಿ ಜ್ಯೋತಿ ಹೊಣಕೆರೆ ಕೋಂ. ಪ್ರಶಾಂತ್ ಹೊಣಕೆರೆ, ಕುಂಬಳೂರು | 40712302025621 | 17,383-00+ ಅನ್ವಯಿಸುವ ಬಡ್ಡಿ |
| 15 | ಶ್ರೀಮತಿ ಶಿಲ್ಪ ಕೋಂ. ಅಶೋಕ ಕೆ.ಹೆಚ್. ಕುಂಬಳೂರು | 40712302026721 | 52,062-00+ ಅನ್ವಯಿಸುವ ಬಡ್ಡಿ |
| 16 | ಶ್ರೀಮತಿ ಜ್ಯೋತಿ ಜಿ. ಕೋಂ. ಬಿ.ಟಿ. ಸಂತೋಷ್, ಕುಂಬಳೂರು | 40712302027521 | 54,226-00+ ಅನ್ವಯಿಸುವ ಬಡ್ಡಿ |
| 17 | ಶ್ರೀಮತಿ ಅಶ್ವಿನಿ ಹೆಚ್. ಎಂ. ಕೋಂ. ಮಂಜಪ್ಪ, ಕುಂಬಳೂರು | 40712302028321 | 9,758-00+ ಅನ್ವಯಿಸುವ ಬಡ್ಡಿ |
| 18 | ಶ್ರೀ ಸುಬ್ಬರಾವ್ ಬಿ. ಬಿನ್. ಬ್ರಹ್ಮಪ್ಪ, ಮಾಳನಾಯಕನಹಳ್ಳಿ | 40712302029121 | 97,461-00+ ಅನ್ವಯಿಸುವ ಬಡ್ಡಿ |
| 19 | ಶ್ರೀ ಕೆ.ಅಣ್ಣಪ್ಪ ಬಿನ್. ಕಟ್ಟೆಪ್ಪ, ಜಿಗಳಿ | 40712302031921 | 12,927-00+ ಅನ್ವಯಿಸುವ ಬಡ್ಡಿ |
| 20 | ಶ್ರೀ ಆಂಜನೇಯ ಹೆಚ್. ಬಿನ್. ಹಳೇಮನೆ ಶೇಖರಪ್ಪ, ಕುಂಬಳೂರು | 40712302032321 | 87,258-00+ ಅನ್ವಯಿಸುವ ಬಡ್ಡಿ |
| 21 | ಶ್ರೀ ಬಸವರಾಜಪ್ಪ ಬಿ.ಎನ್. ಬಿನ್. ನಿಂಗಪ್ಪ, ಗುಳೇದಹಳ್ಳಿ | 40712302035621 | 1,07,439-00+ ಅನ್ವಯಿಸುವ ಬಡ್ಡಿ |
| 22 | ಶ್ರೀ ಎಂ. ಬಸೆಟೆಪ್ಪ ಬಿನ್. ಮಹಾಲಿಂಗಪ್ಪ, ಜಿಗಳಿ | 40712302035721 | 29,003-00+ ಅನ್ವಯಿಸುವ ಬಡ್ಡಿ |

ವಿ.ಸೂ. : ಯಶಸ್ವಿ ಬಿಡ್ಡುದಾರರು ಯಶಸ್ವಿ ಬಿಡ್ಡಿನ ಮೊತ್ತಕ್ಕೆ 3% ಜಿಎಸ್‌ಟಿ ಪಾವತಿಸತಕ್ಕದ್ದು.

ಸ್ಥಳ : ದಾವಣಗೆರೆ
ದಿನಾಂಕ : 09-06-2022

ಸಹಿ/- ಕರ್ನಾಟಕ ಗ್ರಾಮೀಣ ಬ್ಯಾಂಕ್
ಪ್ರಾದೇಶಿಕ ಕಛೇರಿ,ದಾವಣಗೆರೆ.



# ಜುಲೈ 18 ರಂದು ರಾಷ್ಟ್ರಪತಿ ಚುನಾವಣೆ

**(1ನೇ ಪುಟದಿಂದ)** 30 ರಂದು ನಾಮಪತ್ರಗಳ ಪರಿಶೀಲನೆ ನಡೆಯಲಿದೆ. ಜುಲೈ 2 ನಾಮಪತ್ರ ವಾಪಸ್ ಪಡೆಯಲು ಕೊನೆಯ ದಿನವಾಗಿದೆ. ಅಗತ್ಯವಾದರೆ ಜುಲೈ 18ರಂದು ಮತದಾನ ನಡೆಯಲಿದ್ದು, ಜುಲೈ 21ರಂದು ಫಲಿತಾಂಶ ಹೊರ ಬೀಳಲಿದೆ.

776 ಸಂಸದರು ಹಾಗೂ 4,033 ಶಾಸಕರು ಸೇರಿದಂತೆ 4,809 ಮತದಾರರು ರಾಷ್ಟ್ರಪತಿ ಆಯ್ಕೆ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳಲಿದ್ದಾರೆ.

ಸಂಸತ್ತು ಹಾಗೂ ರಾಜ್ಯ ವಿಧಾನಸಭೆಗಳಲ್ಲಿ ಮತದಾನ ನಡೆಯಲಿದೆ.

ಸಾಮಾನ್ಯವಾಗಿ ಸಂಸದರು ಸಂಸತ್ತಿನಲ್ಲಿ ಹಾಗೂ ಶಾಸಕರು ವಿಧಾನಸಭೆಯಲ್ಲಿ ಮತ ಚಲಾಯಿಸುತ್ತಾರೆ. ತುರ್ತು ಅಗತ್ಯವಿರುವ ಸಂದರ್ಭದಲ್ಲಿ ಹತ್ತು ದಿನ ಮೊದಲೇ ತಿಳಿಸಿದಲ್ಲಿ, ಮತಗಟ್ಟೆಗಳನ್ನು ಬದಲಿಸಿಕೊಳ್ಳಬಹುದಾಗಿದೆ. ರಾಜ್ಯಸಭೆ, ಲೋಕಸಭೆ ಹಾಗೂ ವಿಧಾನಸಭೆಗಳ ನಾಮಕರಣ ಸದಸ್ಯರು ಮತದಾನ ಮಾಡುವಂತಿಲ್ಲ. ಅದೇ ರೀತಿ ವಿಧಾನ ಪರಿಷತ್‌ಗಳ ಸದಸ್ಯರೂ ಸಹ ಮತ ಚಲಾಯಿಸುವಂತಿಲ್ಲ.

# ಒಣತ್ಯಾಜ್ಯ ವಿಲೇವಾರಿ ಘಟಕ ನಿರ್ಮಾಣಕ್ಕೆ ಗುದ್ದಲಿ ಪೂಜೆ



ಮಲೇಬೆನ್ನೂರು, ಜೂ. 9 - ಇಲ್ಲಿನ ಸಂತೆ ಮೈದಾನದಲ್ಲಿ ಪುರಸಭೆಯ 2021-22ನೇ ಸಾಲಿನ 14ನೇ ಹಣಕಾಸು ಯೋಜನೆಯಡಿ 38.75 ಲಕ್ಷ ರೂ. ವೆಚ್ಚದಲ್ಲಿ ಒಣತ್ಯಾಜ್ಯ ಸಂಗ್ರಹಣಾ ಕೇಂದ್ರ ನಿರ್ಮಾಣ ಕಾಮಗಾರಿಗೆ ಶಾಸಕ ಎಸ್. ರಾಮಪ್ಪ ಅವರು ಗುದ್ದಲಿ ಪೂಜೆ ನೆರವೇರಿಸಿ ಚಾಲನೆ ನೀಡಿದರು. ಪುರಸಭೆ ಸದಸ್ಯರಾದ ಕೆ.ಜಿ. ಲೋಕೇಶ್, ನಯಾಜ್, ದಾದಾಪೀರ್, ಮಹಮ್ಮದ್ ಖಲೀಲ್, ಕೆ.ಪಿ ಗಂಗಾಧರ್, ಪಿ.ಹೆಚ್. ಶಿವಕುಮಾರ್, ಪೂಜಾರ್ ನಾರಾಯಣಪ್ಪ ಪ್ರಭಾರ ಮುಖ್ಯಾಧಿಕಾರಿ ಗಣೇಶ್‌ರಾವ್, ಇಂಜಿನಿಯರ್ ಹಾಲೇಶಪ್ಪ, ಪರಿಸರ ಇಂಜಿನಿಯರ್ ಉಮೇಶ್, ಸಮುದಾಯ ಅಧಿಕಾರಿ ದಿನಕರ್, ಕಂದಾಯ ನಿರೀಕ್ಷಕ ಓ.ಜಿ. ಪ್ರವೀಣ್, ಬಿಲ್ ಕಲೆಕ್ಟರ್ ಪರಶುರಾಮ್, ನೀರು ಸರಬರಾಜು ಸಹಾಯಕ ಕೀಜರ್ ಅಲಿಖಾನ್, ಸಿಂಗಾಡಿ ಮಂಜುನಾಥ್, ಗುತ್ತಿಗದಾರ ಎಂ.ಬಿ ಕುರುಬಾನ್ ಅಲಿ ಮತ್ತಿತರರು ಈ ವೇಳೆ ಹಾಜರಿದ್ದರು.

# ಮುಂಗಾರಿಗೆ ಮುನ್ನವೇ ನೀರು

**(1ನೇ ಪುಟದಿಂದ)** ಸಂಗ್ರಹವಾಗಿದೆ. ಮುಂಗಾರು ಮಳೆ ಆರಂಭವಾಗುವ ಮುನ್ನವೇ ಇಷ್ಟೊಂದು ಪ್ರಮಾಣದ ನೀರು ಸಂಗ್ರಹವಾಗಿರುವ ಬಗ್ಗೆ ಈ ಭಾಗದ ರೈತರು ಹರ್ಷ ವ್ಯಕ್ತಪಡಿಸಿದ್ದಾರೆ. ಆದರೆ ಕೆರೆ ತುಂಬಾ ಗಿಡಗಂಟೆ ಜಾಲಿ ಬೆಳೆದು ಜೊತೆಗೆ ಕೋಡಿ ಮತ್ತು ಏರಿ ಮೇಲೆ ಗಿಡಗಂಟೆಗಳು ಬೆಳೆದು ಕೆರೆಯ ಸೌಂದರ್ಯವನ್ನು ಹಾಳು ಮಾಡಿವೆ. ಈ ಬಗ್ಗೆ ಸಣ್ಣ ನೀರಾವರಿ ಇಲಾಖೆಯ ಅಧಿಕಾರಿಗಳು ಈ ಸುಂದರ ಬೃಹತ್ ಕೆರೆಯ ಸ್ವಚ್ಛತೆಗೆ ಕ್ರಮ ಕೈಗೊಳ್ಳದಿರುವುದರ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಜಗಳೂರು ಕೆರೆಗೆ ನೀರು ಹರಿದುಬರುವ ರಂಗಾಪುರ ಫೀಡರ್ ಚಾನೆಲ್ ಹಾಗೂ ಜಾಜಿ ಹಳ್ಳ ಫೀಡರ್ ಚಾನೆಲ್ ಹಾಗೂ ಕಣ್ವಕುಪ್ಪೆ ಕೆಳಗೋಟೆ ಕಡೆಯಿಂದ ಹರಿದು ಬರುವ ಫೀಡರ್ ಚಾನೆಲ್‌ಗಳು ದುರಸ್ತಿ ಕಾಣದ ಪರಿಣಾಮವಾಗಿ ಜಗಳೂರು ಕೆರೆಗೆ ಹೆಚ್ಚಿನ ಪ್ರಮಾಣದ ನೀರು ಹರಿದು ಬರುತ್ತಿಲ್ಲ. ಈ ಎಲ್ಲಾ ಫೀಡರ್ ಚಾನೆಲ್‌ಗಳನ್ನು ಸ್ವಚ್ಛಗೊಳಿಸಿ ದುರಸ್ತಿಗೊಳಿಸುವ ಮೂಲಕ ಹೆಚ್ಚಿನ ಪ್ರಮಾಣದ ನೀರು ಸರಾಗವಾಗಿ ಹರಿದು ಬರಲು ಇಲಾಖೆಯವರು ಕ್ರಮಕೈಗೊಳ್ಳಬೇಕೆಂದು ಈ ಭಾಗದ ರೈತರು ಆಗ್ರಹಿಸಿದ್ದಾರೆ.

**ಅಂತರ್ಜಲ ಮಟ್ಟ ಹೆಚ್ಚಳ :** ತಾಲ್ಲೂಕಿನಾದ್ಯಂತ ಸಮೃದ್ಧ ಮಳೆ ಬಂದ ಪರಿಣಾಮ ಹಾಗೂ ಕೆರೆ ತುಂಬಿಸುವ ಯೋಜನೆಯ ಅಡಿ ತುಪ್ಪದಹಳ್ಳಿ ಕೆರೆ ತುಂಬಿದ ಪರಿಣಾಮ ತಾಲ್ಲೂಕಿನ ಬಹುತೇಕ ಗ್ರಾಮಗಳಲ್ಲಿ ಅಂತರ್ಜಲ ಮಟ್ಟ ಹೆಚ್ಚಳವಾಗಿದೆ ಎಂದು ರೈತರು ಸಂತಸ ವ್ಯಕ್ತಪಡಿಸಿದ್ದಾರೆ.

500, 600 ಅಡಿ ಆಳ ಕೊರೆದರೂ ನೀರು ಸಿಗದ ಸಂದರ್ಭ ತಾಲ್ಲೂಕಿನಲ್ಲಿ ಸಾಮಾನ್ಯವಾಗಿತ್ತು. ಅಡಿಕೆ ಸೇರಿದಂತೆ ತೋಟಗಾರಿಕಾ ಬೆಳೆಗಳ ರೈತರು ತಮ್ಮ ಫಸಲನ್ನು ಉಳಿಸಿಕೊಳ್ಳಲು 500 ರಿಂದ 600 ಅಡಿವರೆಗೂ ಬೋರ್ ಕೊರೆಸುವುದು ಸಾಮಾನ್ಯವಾ ಗಿತ್ತು. ಆದಾಗ್ಯೂ ನೀರಿನ ಲಭ್ಯತೆ ಅನುಮಾನವಾಗಿತ್ತು. ಆದರೆ ಕೆಲವೇ ತಿಂಗಳುಗಳ ಅಂತರದಲ್ಲಿ ಬೋರ್‌ವೆಲ್ ಗಳಲ್ಲಿ ಅಂತರ್ಜಲ ಮಟ್ಟ 100 ಅಡಿಯಿಂದ 150 ಅಡಿಗೆ ಬಂದಿದೆ ಎನ್ನುತ್ತಾರೆ. ತಾಲ್ಲೂಕಿಗೆ ಹೊಂದಿಕೊಂಡಂತಿರುವ ಭರಮಸಾಗರ ಕೆರೆ ತುಂಬಿದ ಪರಿಣಾಮ ಈ ಭಾಗದ ಜಗಳೂರು ತಾಲ್ಲೂಕಿನ ಬಿದರಕೆರೆ ಸೇರಿದಂತೆ ಸುತ್ತ ಮುತ್ತಲಿನ ಗ್ರಾಮಗಳಲ್ಲೂ ಸಹ ಅಂತರ್ಜಲ ಮಟ್ಟ ಹೆಚ್ಚಾಗಿದೆ.

# ಮುಸ್ಲಿಂ ವಿದ್ಯಾರ್ಥಿನಿಯರ ಹೆಚ್ಚಳ

**(1ನೇ ಪುಟದಿಂದ)** ಶಾಸಕ ಹಾಗೂ ಕಾಲೇಜು ಅಭಿವೃದ್ಧಿ ಸಮಿತಿ ಅಧ್ಯಕ್ಷ ರಘುಪತಿ ಭಟ್, ಶಾಲಾ ಕೊಠಡಿಯೊಳಗೆ ಹಿಜಾಬ್ ಧರಿಸದಿರಲು ವಿದ್ಯಾರ್ಥಿನಿಯರು ಸಮ್ಮತಿಸಿದ್ದಾರೆ ಎಂದಿದ್ದಾರೆ.

ಹಿಜಾಬ್ ಘಟನೆಗಳ ನಡುವೆಯೂ ಕಾಲೇಜು ಕಳೆದ ವರ್ಷ ಉತ್ತಮ ಫಲಿತಾಂಶ ಪಡೆದಿತ್ತು ಎಂದು ಶಾಸಕ ಭಟ್ ತಿಳಿಸಿದ್ದಾರೆ.

ಈ ನಡುವೆ, ಹಿಜಾಬ್ ಧರಿಸಲು ಪಟ್ಟು ಹಿಡಿದು ಅಮಾನತ್ತಿಗೆ ಗುರಿಯಾಗಿದ್ದ ದಕ್ಷಿಣ ಕನ್ನಡ ಜಿಲ್ಲೆಯ ಉಪ್ಪಿನಂಗಡಿಯ ಆರು ವಿದ್ಯಾರ್ಥಿನಿಯರ ವಿರುದ್ಧದ ಕ್ರಮವನ್ನು ತಡೆಯಲಾಗಿದೆ. ಸಮವಸ್ತ್ರ ಪಾಲಿಸುವುದಾಗಿ ವಿದ್ಯಾರ್ಥಿನಿಯರು ಮುಚ್ಚಳಿಕೆ ನೀಡಿದ ನಂತರ ಅಮಾನತ್ತು ವಾಪಸ್ ಪಡೆಯಲಾಗಿದೆ ಎಂದು ಮೂಲಗಳು ತಿಳಿಸಿವೆ.


# ಪ್ರವೇಶದ ಸುತ್ತುಗಳಿಗೆ ಮಿತಿ ಬೇಕು

**(1ನೇ ಪುಟದಿಂದ)** ಮೂಲಕ ನಾಲ್ಕು ಸುತ್ತುಗಳ ಕೌನ್ಸಿಲಿಂಗ್ ಪೂರ್ಣಗೊಳಿಸಲಾಗಿದೆ. 1,456 ಖಾಲಿ ಸೀಟುಗಳನ್ನು ಇನ್ನೊಂದು ಸುತ್ತಿನ ಕೌನ್ಸಿಲಿಂಗ್ ಮೂಲಕ ಭರ್ತಿ ಮಾಡಲಾಗದು. ಕೌನ್ಸಿಲಿಂಗ್ ತಂತ್ರಾಂಶವನ್ನು ಮುಚ್ಚಲಾಗಿದೆ ಎಂದು ಆರೋಗ್ಯ ಸೇವೆಗಳ ಪ್ರಧಾನ ನಿರ್ದೇಶನಾಲಯ ಸುಪ್ರೀಂ ಕೋರ್ಟ್‌ಗೆ ತಿಳಿಸಿತ್ತು. ಕೌನ್ಸಿಲಿಂಗ್ ವೆಬ್ ತಾಣ ಮುಚ್ಚಿದೆ. ತಾಂತ್ರಿಕ ಕಾರಣಗಳಿಂದಾಗಿ ಕೌನ್ಸಿಲಿಂಗ್ ಮಾಡಲಾಗದು ಎಂದು ಸರ್ಕಾರ ಹೇಳಬಾರದು ಎಂದು ನ್ಯಾಯಾಲಯ ಹೇಳಿದೆ.

ಈ ಬಗ್ಗೆ ಉತ್ತರ ಸಲ್ಲಿಸಿದ ಹೆಚ್ಚುವರಿ ಸಾಲಿಸಿಟರ್ ಜನರಲ್ ಸಿಂಗ್, ಪ್ರತಿ ವರ್ಷ ಸೀಟುಗಳು ಉಳಿಯುತ್ತಿವೆ. ಇವುಗಳಲ್ಲಿ ಬಹುತೇಕ ಕ್ಲಿನಿಕಲ್ಲೇತರ ಸೀಟುಗಳಾಗಿವೆ. ಇವುಗಳಿಗೆ ಯಾರೂ ಅರ್ಜಿ ದಾಖಲಿಸುವುದಿಲ್ಲ ಎಂದರು.

2021ರಲ್ಲಿ 1,496 ಸೀಟುಗಳ ಪೈಕಿ 900ರಷ್ಟನ್ನು ಆಯ್ಕೆ ಮಾಡಿಕೊಳ್ಳಲಾಗಿತ್ತಾದರೂ, ಪ್ರವೇಶ ಪಡೆದಿಲ್ಲ. ಫೆಬ್ರವರಿ ತಿಂಗಳಲ್ಲೇ ತರಗತಿಗಳು ಆರಂಭವಾಗಿವೆ. ಈಗ ಆರರಿಂದ ಎಂಟು ತಿಂಗಳ ವಿಳಂಬದ ನಂತರ ಪ್ರವೇಶ ನೀಡಲಾಗದು. ಇನ್ನಷ್ಟು ಸುತ್ತು ಕೌನ್ಸಿಲಿಂಗ್ ನಡೆಸಿದರೆ ಕಲಿಕೆಯ ಮೇಲೆ ಪರಿಣಾಮವಾಗುತ್ತದೆ ಎಂದು ಸಿಂಗ್ ತಿಳಿಸಿದರು.

# ಬೈಕ್ ಕಳ್ಳತನ: ಆರೋಪಿಗಳ ಬಂಧನ



**ರಾಣೇಬೆನ್ನೂರು**

ರಾಣೇಬೆನ್ನೂರು, ಜೂ.9- ಪೊಲೀಸ್ ಡಿವೈಎಸ್ಪಿ ಟಿ.ವಿ. ಸುರೇಶ್ ಮಾರ್ಗದರ್ಶನದಲ್ಲಿ, ಸಿಪಿಐ ಎಂ.ಐ. ಗೌಡಪ್ಪಗೌಡ, ಎಸ್‌ಐ ಸುನೀಲ್ ಬಿ.ತೇಲಿ, ಆರ್. ವೈ. ಅಂಬಿಗೇರ ಹಾಗೂ ಪೇದೆಗಳನ್ನು ಒಳಗೊಂಡ ವಿಶೇಷ ತಂಡವು 12 ಬೈಕ್‌ಗಳನ್ನು ವಶಪಡಿಸಿಕೊಂಡು ಮೂವರು ಆರೋಪಿಗಳನ್ನು ಬಂಧಿಸಿರುವುದಾಗಿ ಎಸ್ಪಿ ಹನುಮಂತರಾಯ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದ್ದಾರೆ.

ಆರೋಪಿಗಳಾದ ದಾವಣಗೆರೆಯ ಗೌಂಡಿ ಮಹ್ಮದ್ ಸುಫಿಯಾನ್, ಜಬಿವುಲ್ಲಾ ಖಾನ್, ನಯಾಜ್ ಆಹ್ಮದ್, ಕೆ.ಎ. ಅಬ್ದುಲ್ ಅಜೀಜ್ ಹಾಗೂ ಶಿಕಾರಿಪುರದ ಮಹ್ಮದ್ ಅಬೂಬಕರ್ ಅವರುಗಳನ್ನು ಬಂಧಿಸಿ, ದಾವಣಗೆರೆ ನಗರ - ಗ್ರಾಮೀಣ ಠಾಣೆ, ಹರಿಹರ ಠಾಣೆ, ಚಿತ್ರದುರ್ಗ, ಸಂತೆಬೆನ್ನೂರು, ಮರಿಯಮ್ಮನಹಳ್ಳಿ, ಶಿರಾ ಠಾಣೆ ವ್ಯಾಪ್ತಿಯಲ್ಲಿ ಕಳ್ಳತನ ಮಾಡಿದ 5 ರಾಯಲ್ ಎನ್‌ಫೀಲ್ಡ್, 7 ಹಿರೋ ಹೊಂಡಾ ಸ್ಪೆಂಡರ್ ಬೈಕ್‌ಗಳನ್ನು ವಶಪಡಿಸಿಕೊಂಡಿರುವುದಾಗಿ ಹನುಮಂತರಾಯ ಹೇಳಿದರು.

ಕಾರ್ಯಾಚರಣೆಯಲ್ಲಿ ಭಾಗವಹಿಸಿದ್ದ ನಗರ ಎಸ್ ಐ ಸುನೀಲ್ ತೇಲಿ, ಎ .ಆರ್ ಅಂಬಿಗೇರ, ಸಿಬ್ಬಂದಿ ಎ ಎಸ್ ಐ ಎಚ್.ಎನ್. ದೊಡ್ಡಮನಿ, ಎಚ್ ಸಿ ಕೆ.ಎಚ್. ಸವೂರ, ಪಿ.ಕೆ. ಸನದಿ, ಸಿ.ಬಿ. ಕಡ್ಲೆಪ್ಪನವರ, ವಿಠಲ್ ಡಿಬಿ, ಸಿ.ಡಿ. ಸಣ್ಣಮನಿ, ಚಾಲಕರಾದ ಸಚಿನ್ ಓಲೇಕಾರ, ಮಂಜುನಾಥ ಕೆಂಗೊಂಡ ಮುಂತಾದವರ ಕಾರ್ಯವನ್ನು ಎಸ್ಪಿ ಹನುಮಂತರಾಯ ಪ್ರಶಂಸಿಸಿದ್ದಾರೆ.

### ಸಿದ್ಧಗಂಗಾ ಸಂಸ್ಥೆಯಲ್ಲಿ ಪರಿಸರ ದಿನಾಚರಣೆ

## 50 ಸಾವಿರ ಬೀಜದುಂಡೆ ತಯಾರಿಸಿದ ಮಕ್ಕಳು



ದಾವಣಗೆರೆ, ಜೂ. 9- ಸಿದ್ಧಗಂಗಾ ಶಾಲೆಯಲ್ಲಿ ಮಕ್ಕಳ ಕಲರವ. ಭಾರತ್ ಸ್ಕೌಟ್ ಮತ್ತು ಗೈಡ್ಸ್‌ನ ಸ್ಥಳೀಯ ಸಂಸ್ಥೆ ವತಿಯಿಂದ ಪರಿಸರ ದಿನಾಚರಣೆಯನ್ನು ವಿಶೇಷವಾಗಿ ನಡೆಸಲಾಯಿತು.

ಮೂಟೆ ಮೂಟೆ ಕೆಂಪು ಮಣ್ಣನ್ನು ಬಯಲಲ್ಲಿ ಸುರಿದರು. ವಿವಿಧ ಜಾತಿಯ ಕಾಡು ಮರಗಳ ಬೀಜಗಳನ್ನು ರಾಶಿ ಹಾಕಿದರು. ಕ್ಷಣಾರ್ಧದಲ್ಲಿ ಮಕ್ಕಳು ತಮ್ಮ ತಮ್ಮ ಗುಂಪು ಮಾಡಿಕೊಂಡು ಮಣ್ಣನ್ನು ಹಂಚಿಕೊಂಡರು. ಬೀಜಗಳನ್ನು ಬೊಗಸೆಗಳಲ್ಲಿ ತುಂಬಿಕೊಂಡರು. ವಾಟರ್ ಬಾಟಲ್‌ಗಳಿಂದ ನೀರನ್ನು ಸುರುವಿಕೊಂಡು ಮಣ್ಣನ್ನು ಉಂಡೆಕಟ್ಟುವ ಹದಕ್ಕೆ ಮೃದು ಮಾಡಿಕೊಂಡರು. ಪುಟ್ಟ ಪುಟ್ಟ ಕೈಗಳಲ್ಲಿ ಉಂಡೆಗಳು ರೂಪುಗೊಂಡಂತೆ ಅದರ ಮಧ್ಯದೊಳಗೆ ಬೀಜ ಇಟ್ಟು ದುಂಡಾದ ಆಕಾರ ಮಾಡಿ ಸಾಲಾಗಿ ಜೋಡಿಸಿದರು. ವಿವಿಧ ಗಾತ್ರದ ಬೀಜದುಂಡೆಗಳು ತಯಾರಾದವು. ಒಣಗಲು ಹರಡಿದರು. ಸಾವಿರಾರು ಬೀಜದುಂಡೆಗಳನ್ನು ಅರಣ್ಯ ಇಲಾಖೆಯವರು ನಿಗದಿತ ಕಾಡು ಪ್ರದೇಶದಲ್ಲಿ ಬಿಸಾಡುವರು. ಮಳೆಗಾಲದಲ್ಲಿ ಬೀಜಗಳು ಮೊಳಕೆಯೊಡೆದು ಸಸಿಯಾಗಿ ವೃಕ್ಷಗಳಾಗುತ್ತವೆ ಎಂದು ತಿಳಿಸಿದಾಗ ಮಕ್ಕಳಲ್ಲಿ ಉತ್ಸಾಹ ತುಂಬಿತು. ಪರಿಸರ ದಿನಾಚರಣೆಯನ್ನು ಸಾರ್ಥಕವಾಗಿ ಆಚರಿಸಿದ ಭಾವನೆ ಉಂಟಾಯಿತು.

ಜಿಲ್ಲಾ ಸ್ಕೌಟ್ ಗೈಡ್ ಸಂಸ್ಥೆಯಿಂದ ಆಗಮಿಸಿದ್ದ ಕಾರ್ಯದರ್ಶಿ ರತ್ನ, ಎಡಿಸಿ ಹಾಲಪ್ಪ ಮತ್ತು ಎಸ್‌ಜಿವಿ ಅಶ್ವಿನಿ ಹಾಗೂ ಬೇರೆ ಬೇರೆ ಕಾಲೇಜುಗಳಿಂದ ಬಂದಿದ್ದ ರೋವರ್ಸ್, ರೇಂಜರ್ಸ್ ಮಕ್ಕಳ ಈ ಚಟುವಟಿಕೆಯನ್ನು ಶ್ಲಾಘಿಸಿದರು. ಸಂಸ್ಥೆಯ ಸ್ಕೌಟ್ ಮಾಸ್ಟರ್ಸ್ ಮತ್ತು ಗೈಡ್ ಕ್ಯಾಪ್ಟನ್ಸ್, ಕಬ್ಸ್ ಬುಲ್‌ಬುಲ್ ಫ್ಲಾಕ್ ಲೀಡರ್ಸ್, ಬನ್ನೀಸ್ ಶಿಕ್ಷಕ-ಶಿಕ್ಷಕಿಯರು ಮತ್ತು ಹಲವಾರು ಪಾಲಕರು ಮಕ್ಕಳ ಉತ್ಸಾಹವನ್ನು ಕುತೂಹಲದಿಂದ ವೀಕ್ಷಿಸಿದರು.

ಬೀಜದುಂಡೆಗಳನ್ನು ಕಟ್ಟುವಾಗ, ಹಿನ್ನೆಲೆಯಲ್ಲಿ ಸುಶ್ರಾವ್ಯವಾಗಿ ಮಕ್ಕಳು ಪರಿಸರ ಗೀತೆಗಳನ್ನು ಹಾಡಿದರು. ಸಿದ್ಧಗಂಗಾ ಸ್ಥಳೀಯ ಸಂಸ್ಥೆಯ ಕಾರ್ಯದರ್ಶಿ ಶಶಿಕಲಾ ಮಾರ್ಗದರ್ಶನ ನೀಡಿದರು.

# ರಾಷ್ಟ್ರಪತಿ ಚುನಾವಣೆಯಲ್ಲಿ ಬಿಜೆಪಿ ಮೇಲುಗೈ ಅಭ್ಯರ್ಥಿಯ ಆಯ್ಕೆಯೇ ಉಳಿದಿರುವ ಕುತೂಹಲ

ನವದೆಹಲಿ, ಜೂ. 9 – ರಾಷ್ಟ್ರಪತಿ ಚುನಾವಣೆಯಲ್ಲಿ ಬಿಜೆಪಿ ಸ್ಪಷ್ಟ ಮೇಲುಗೈ ಹೊಂದಿದ್ದು, ಚುನಾವಣಾ ದಿನಾಂಕ ಘೋಷಣೆಯಾದ ನಂತರ ಅಭ್ಯರ್ಥಿ ಯಾರೆಂಬುದರತ್ತ ಗಮನ ಹರಿದಿದೆ.

ಜುಲೈ 18ರಂದು ನಡೆಯಲಿರುವ ಚುನಾವಣೆಯಲ್ಲಿ, ಯಾವ ಮೈತ್ರಿಕೂಟದ ಅಭ್ಯರ್ಥಿ ಗೆಲ್ಲುತ್ತಾರೆ ಎನ್ನುವುದಕ್ಕಿಂತ, ಬಿಜೆಪಿ ಯಾವ ಅಭ್ಯರ್ಥಿಯನ್ನು ಆಯ್ಕೆ ಮಾಡಲಿದೆ ಎಂಬುದೇ ಕುತೂಹಲಕ್ಕೆ ಕಾರಣವಾಗಿದೆ.

ಇತ್ತೀಚೆಗೆ ನಡೆದ ನಾಲ್ಕು ವಿಧಾನಸಭಾ ಚುನಾವಣೆಗಳಲ್ಲಿ ಬಿಜೆಪಿ ಉತ್ತಮ ಮುನ್ನಡೆ ಗಳಿಸಿದೆ. ಮಹತ್ವದ ಉತ್ತರ ಪ್ರದೇಶದ ಗೆಲುವು ರಾಷ್ಟ್ರಪತಿ ಚುನಾವಣೆಯ ಹಾದಿ ಸುಗಮಗೊಳಿಸಿದೆ. ಸಂಸದರು ಹಾಗೂ ಶಾಸಕರು ರಾಷ್ಟ್ರಪತಿಯನ್ನು ಆಯ್ಕೆ ಮಾಡಲಿದ್ದಾರೆ. ಅತಿ ಹೆಚ್ಚಿನ ಶಾಸಕರನ್ನು ಹೊಂದಿರುವ ಉತ್ತರ ಪ್ರದೇಶದಲ್ಲಿ ಬಿಜೆಪಿ ಬಲವಾಗಿದೆ.

2017ರಲ್ಲಿ ನಡೆದ ರಾಷ್ಟ್ರಪತಿ ಚುನಾವಣೆ ಸಂದರ್ಭಕ್ಕೆ ಹೋಲಿಸಿದರೆ, ಈಗ ಬಿಜೆಪಿ ಹಾಗೂ ಮೈತ್ರಿಪಕ್ಷಗಳ ಶಾಸಕರ ಸಂಖ್ಯೆ ಕಡಿಮೆ ಇದೆ. ಇದೇ ವೇಳೆ ಸಂಸದರ ಸಂಖ್ಯೆ ಹೆಚ್ಚಾಗಿದೆ.

ಬಿಜೆಪಿ ಈಗಾಗಲೇ ಗೆಲುವಿಗೆ ಅಗತ್ಯವಾಗಿರುವ ಶೇ.50ರ ಸಂಖ್ಯಾಬಲದ ಸಮೀಪದಲ್ಲಿದೆ. ಆಂಧ್ರ ಪ್ರದೇಶದ ವೈ.ಎಸ್. ಆರ್.ಸಿ.ಪಿ. ಹಾಗೂ ಒಡಿಶಾದ ಬಿ.ಜೆ.ಡಿ. ರೀತಿಯ ಪಕ್ಷಗಳ ಬೆಂಬಲದಿಂದ ಗೆಲುವು ದಾಖಲಿಸುವ ನಿರೀಕ್ಷೆ ಇದೆ ಎಂದು ಬಿಜೆಪಿ ನಾಯಕರೊಬ್ಬರು ಹೇಳಿದ್ದಾರೆ.

ಕಳೆದ ಚುನಾವಣೆಯಲ್ಲಿ ದಲಿತ ಮುಖಂಡರಾದ ರಾಮ ನಾಥ ಕೋವಿಂದ್ ಅವರನ್ನು ರಾಷ್ಟ್ರಪತಿ ಸ್ಥಾನದ ಅಭ್ಯರ್ಥಿಯಾಗಿ ಘೋಷಿಸುವ ಮೂಲಕ ಬಿಜೆಪಿ ಅಚ್ಚರಿ ತರಿಸಿತ್ತು. ಆಗ ಕೋವಿಂದ್ ಅವರು ಬಿಹಾರದ ರಾಜ್ಯಪಾಲರಾಗಿದ್ದರು.

ತನ್ನ ರಾಜಕೀಯ ಬೆಂಬಲವನ್ನು ಬಲಿಷ್ಠಗೊಳಿಸುವ ಉದ್ದೇಶ ಈಡೇರಿಸಿಕೊಳ್ಳುವ ಜೊತೆಗೆ, ಅಚ್ಚರಿಯ ಅಭ್ಯರ್ಥಿ ಆಯ್ಕೆ ಮಾಡುವುದು ಬಿಜೆಪಿ ನಾಯಕತ್ವದ ಸಾಮಾನ್ಯ ಪದ್ಧತಿಯಂತಾಗಿದೆ.

ಕೋವಿಂದ್ ಅವರನ್ನು ಹಿಂದುತ್ವದ ಪ್ರತಿಪಾದಕರಾಗಿ ಪರಿಗಣಿಸುವುದಕ್ಕಿಂತ, ಪಕ್ಷದ ನಿಷ್ಠರಾಗಿ ಪರಿಗಣಿಸಿ, ರಾಷ್ಟ್ರಪತಿ ಹುದ್ದೆ ನೀಡಲಾಗಿತ್ತು. ಈ ಬಾರಿ ಪಕ್ಷ ಸಿದ್ಧಾಂತಕ್ಕೆ ಪ್ರಾಮುಖ್ಯತೆ ನೀಡಲಿದೆಯೇ ಅಥವಾ ಚುನಾವಣಾ ಲೆಕ್ಕಾಚಾರಕ್ಕೆ ಮುಂದಾಗಲಿದೆಯೇ ಎಂಬುದನ್ನು ಕಾದು ನೋಡಬೇಕಿದೆ.

ಬುಡಕಟ್ಟು ಇಲ್ಲವೇ ಮಹಿಳಾ ಅಭ್ಯರ್ಥಿಯನ್ನು ಬಿಜೆಪಿ ಕಣಕ್ಕಿಳಿಸುವ ಮಾತುಗಳು ಕೇಳಿ ಬರುತ್ತಿವೆ. ಅಲ್ಲದೇ, ಕೋವಿಂದ್ ಅವರನ್ನೇ ಎರಡನೇ ಅವಧಿಗೆ ಮರು ಆಯ್ಕೆ ಮಾಡುವ ದಾರಿಯೂ ಇದೆ. ರಾಜೇಂದ್ರ ಪ್ರಸಾದ್ ಅವರ ನಂತರ ಯಾವ ರಾಷ್ಟ್ರಪತಿಯೂ ಎರಡು ಪೂರ್ಣ ಅವಧಿಯಲ್ಲಿ ಕಾರ್ಯ ನಿರ್ವಹಿಸಿಲ್ಲ.

ಪ್ರತಿಪಕ್ಷಗಳೂ ಸೇರಿದಂತೆ ಎಲ್ಲರ ಜೊತೆ ಚರ್ಚಿಸಿ ಸರ್ವಸಮ್ಮತಿಯ ಅಭ್ಯರ್ಥಿಯ ಆಯ್ಕೆಗೆ ಹಿರಿಯ ನಾಯಕರು ಪ್ರಯತ್ನ ನಡೆಸಲಿ ದ್ದಾರೆ ಎಂದು ಬಿಜೆಪಿ ಮೂಲಗಳು ತಿಳಿಸಿವೆ.

ಪ್ರಸಕ್ತ ಲೋಕಸಭೆ ಹಾಗೂ ರಾಜ್ಯಸಭೆಗಳೆರಡರಲ್ಲಿ ಬಿಜೆಪಿಯ 392 ಸಂಸದರು ರಾಷ್ಟ್ರಪತಿ ಚುನಾವಣೆಯಲ್ಲಿ ಮತದಾನದ ಹಕ್ಕು ಹೊಂದಿದ್ದಾರೆ. ಉಭಯ ಸದನಗಳ ಒಟ್ಟು ಸಂಖ್ಯಾಬಲ 772 ಆಗಿದೆ. ಲೋಕಸಭೆಯ ಮೂರು ಹಾಗೂ ರಾಜ್ಯಸಭೆಯ 13 ಸ್ಥಾನಗಳು ಪ್ರಸಕ್ತ ಖಾಲಿ ಇವೆ. ಆದರೆ, ಇದರಿಂದ ಅಂತಿಮ ಬಲಾಬಲದಲ್ಲಿ ಹೆಚ್ಚೇನೂ ಬದಲಾವಣೆಯಾಗುವ ಸಾಧ್ಯತೆ ಇಲ್ಲ.

## ಡೊನೇಷನ್ ಹಾವಳಿ, ರಸ್ತೆ ತಡೆದು ಪ್ರತಿಭಟನೆ




ಹರಪನಹಳ್ಳಿ, ಜೂ. 9 - ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ ಹೆಚ್ಚಿನ ಶುಲ್ಕವನ್ನು ಪಡೆಯಲಾಗುತ್ತಿದೆ ಎಂದು ಆರೋಪಿಸಿ ವಿದ್ಯಾರ್ಥಿ ಸಂಘಟನೆಗಳು ಡೊನೇಷನ್ ಕೈಬಿಡುವಂತೆ ಕಾಲೇಜಿನ ಸಿಬ್ಬಂದಿಗಳಿಗೆ ಮನವಿ ಮಾಡಿದ್ದಾರೆ. ಆದರೆ ಯಾರೂ ಸ್ಪಂದಿಸದ ಹಿನ್ನೆಲೆಯಲ್ಲಿ ವಿದ್ಯಾರ್ಥಿಗಳು ದಿಢೀರ್ ರಸ್ತೆ ತಡೆ ಮಾಡುವ ಮೂಲಕ ಕಾಲೇಜು ಆಡಳಿತ ಮಂಡಳಿ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ ಘಟನೆ ಗುರುವಾರ ನಡೆದಿದೆ.

ಡೊನೇಷನ್ ತೆಗೆದುಕೊಳ್ಳುವುದನ್ನು ವಿರೋಧಿಸಿ ಎಸ್‌ಎಫ್‌ಐ ಹಾಗೂ ಎಐಎಸ್‌ಎಫ್ ವಿದ್ಯಾರ್ಥಿ ಸಂಘಟನೆಯ ಮುಖಂಡರು ಪಟ್ಟಣದ ಎಸ್‌ಎಸ್‌ಎಚ್ ಜೈನ್ ಪಿಯು ಕಾಲೇಜಿನಲ್ಲಿ ದಾಖಲಾತಿ ತಡೆಯಲು ಮುಂದಾದರೂ, ಪೊಲೀಸರು ಇದ್ದರು ಸಹ ದಾಖಲಾತಿ ನಡೆಯುತ್ತಿತ್ತು.

ಆದರೆ ಕಾಲೇಜಿನಲ್ಲಿ ಪ್ರಾಚಾರ್ಯರು ಸ್ಥಳದಲ್ಲಿ ಇಲ್ಲದಿರುವುದರಿಂದ ವಿದ್ಯಾರ್ಥಿ ಮುಖಂಡರು ಕೆರಳಿ ವಿದ್ಯಾರ್ಥಿಗ ಳೊಂದಿಗೆ ಹರಿಹರ-ಹೊಸಪೇಟೆ ರಸ್ತೆ ಬಂದ್ ಮಾಡಿ ವಾಹನಗಳನ್ನು ತಡೆದು, ಕಾಲೇಜು ಆಡಳಿತ ಮಂಡಳಿ ವಿರುದ್ಧ ಘೋಷಣೆ ಕೂಗಿದರು.

ಸುದ್ದಿ ತಿಳಿದ ಪಿಎಸ್‌ಐ ಹಾಗೂ ಪೊಲೀಸ್ ಸಿಬ್ಬಂದಿಗಳು ರಸ್ತೆ ತಡೆ ನಡೆಸುತ್ತಿದ್ದ ವಿದ್ಯಾರ್ಥಿ ಮುಖಂಡರಾದ ವೆಂಕಟೇಶ್‌ನಾಯ್ಕ, ರಮೇಶ್‌ನಾ ಯ್ಕ ಸೇರಿದಂತೆ, ಇತರೆ ಇಬ್ಬರು ವಿದ್ಯಾರ್ಥಿಗಳನ್ನು ರಸ್ತೆಯಿಂದ ಎಬ್ಬಿಸಿದರು. ಈ ನಡುವೆ ಮಾತಿನ ವಾಗ್ವಾದ ನಡೆಸಿದರು, ನಂತರ ಅವರನ್ನು ಜೀಪ್‌ನಲ್ಲಿ ಪೊಲೀಸ್ ಠಾಣೆಗೆ ಕರೆದುಕೊಂಡು ಹೋಗಿ ವಿಚಾರಣೆ ನಡೆಸಿದರು.

ವಿದ್ಯಾರ್ಥಿ ಮುಖಂಡರನ್ನು ಠಾಣೆಗೆ ಕರೆತಂದ ಪಿಎಸ್‌ಐರವರು ಅವರಿಗೆ ಎಚ್ಚರಿಕೆ ನೀಡಿ ಬಿಡುಗಡೆ ಮಾಡಿದ್ದಾರೆ.

ಈ ಸಂದರ್ಭದಲ್ಲಿ ಚೇತನ, ಪ್ರಸನ್ನ, ಶಿವರಾಜ, ಎಂ.ಡಿ.ಶ್ರೀಕಾಂತ, ಸಂಜು, ದ್ರಾವಿಡ ಸೇರಿದಂತೆ ಇತರರು ಇದ್ದರು.

## ಕೊರೊನಾ : ಎಚ್ಚರ ತಪ್ಪದಂತೆ ಕೇಂದ್ರ ಸೂಚನೆ

ನವದೆಹಲಿ, ಜೂ. 9 – ಕೊರೊನಾ ಪ್ರಕರಣಗಳು ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ ಎಚ್ಚರ ತಪ್ಪದಂತೆ ಎಲ್ಲಾ ರಾಜ್ಯಗಳಿಗೆ ಕೇಂದ್ರ ಸರ್ಕಾರ ಸೂಚನೆ ನೀಡಿದೆ.

ವಾರದ ಸರಾಸರಿ ಪ್ರಕರಣಗಳ ಸಂಖ್ಯೆ ಜೂನ್ 1ರಂದು 2,663 ಆಗಿತ್ತು. ಅದು ಜೂನ್ 8ರ ವೇಳೆಗೆ 4,207ಕ್ಕೆ ತಲುಪಿದೆ. ಮಹಾರಾಷ್ಟ್ರ, ದೆಹಲಿ, ಕೇರಳ ಹಾಗೂ ಕರ್ನಾಟಕಗಳಲ್ಲಿ ಶೇ.80ರಷ್ಟು ಪ್ರಕರಣಗಳು ಕಂಡು ಬಂದಿವೆ ಎಂದು ಕೇಂದ್ರ ಆರೋಗ್ಯ ಕಾರ್ಯದರ್ಶಿ ರಾಜೇಶ್ ಭೂಷಣ್ ತಿಳಿಸಿದ್ದಾರೆ.

ಸೋಂಕು ಹೆಚ್ಚಾಗಿರುವ ಪ್ರದೇಶಗಳಲ್ಲಿ ಹೆಚ್ಚಿನ ಟೆಸ್ಟ್ ಮಾಡಬೇಕು. ಅಂತರರಾಷ್ಟ್ರೀಯ ಪ್ರಯಾಣಿಕರ ಜಿನೋಮ್ ಪರೀಕ್ಷೆ ನಡೆಸಬೇಕು ಎಂದು ಭೂಷಣ್ ಹೇಳಿದ್ದಾರೆ.

## ಮಡಿವಾಳ ಮಾಚಿದೇವ ಸಂಘದಿಂದ ಸಮಾಜ ಕಲ್ಯಾಣ ಸಚಿವರಿಗೆ ಮನವಿ



ದಾವಣಗೆರೆ, ಜೂ.9 - ಜಿಲ್ಲಾ ಮಡಿವಾಳ ಮಾಚಿದೇವ ಸಂಘ ಮಾಡಿಕೊಂಡ ಮನವಿ ಮೇರೆಗೆ ಶಾಸಕ ಎಸ್.ಎ. ರವೀಂದ್ರನಾಥ್ ಅವರು ನೀಡಿದ ಶಿಫಾರಸ್ಸು ಪತ್ರವನ್ನು ಸಮಾಜ ಕಲ್ಯಾಣ ಸಚಿವ ಕೋಟ ಶ್ರೀನಿವಾಸ ಪೂಜಾರಿ ಅವರಿಗೆ ಬೆಂಗಳೂರಿನ ಶಾಸಕರ ಭವನದ ಅವರ ವಸತಿ ಗೃಹದಲ್ಲಿ ಬಿಜೆಪಿ ಜಿಲ್ಲಾ ಹಿಂದುಳಿದ ವರ್ಗಗಳ ಮೋರ್ಚಾ ಕೋಶಾಧ್ಯಕ್ಷ ಎಸ್.ಎಲ್. ಆನಂದಪ್ಪ ಅವರ ಮುಖಂಡತ್ವದಲ್ಲಿ ಭೇಟಿಯಾಗಿ ಮಡಿವಾಳ ಮಾಚಿದೇವ ಸಂಘದ ವಿದ್ಯಾರ್ಥಿ ನಿಲಯಕ್ಕೆ ಅಪೂರ್ಣಗೊಂಡ ಕಾಮಗಾರಿ ಪೂರ್ಣಗೊಳಿಸಲು 70 ಲಕ್ಷ ರೂ. ಅನುದಾನ ಬಿಡುಗಡೆ ಮಾಡಲು ಕೋರಿ ಮನವಿ ಪತ್ರ ಸಲ್ಲಿಸಲಾಯಿತು.

ಈ ಸಂದರ್ಭದಲ್ಲಿ ಹಿಂದುಳಿದ ವರ್ಗಗಳ ಸಂಘಟನೆ ಬಗ್ಗೆ ಚರ್ಚಿಸಲಾಯಿತು. ಸಚಿವರು ವಿದ್ಯಾರ್ಥಿ ನಿಲಯಕ್ಕೆ ಹಣವನ್ನು ಖಂಡಿತಾ ಬಿಡುಗಡೆ ಮಾಡುತ್ತೇವೆ. ದಾವಣಗೆರೆಗೆ ಬಂದಾಗ ವಿದ್ಯಾರ್ಥಿ ನಿಲಯಕ್ಕೆ ಭೇಟಿ ನೀಡುತ್ತೇನೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಬಿಜೆಪಿಯ ಹಿರಿಯ ಮುಖಂಡ ಕೊಂಡಜ್ಜಿ ಶಾನುಭೋಗರು, ಮಡಿವಾಳ ಮಾಚಿದೇವ ಸಂಘದ ಪ್ರಧಾನ ಕಾರ್ಯದರ್ಶಿ ಓಂಕಾರಪ್ಪ, ಸಹ ಕಾರ್ಯದರ್ಶಿ ಆರ್.ಎನ್. ಧನಂಜಯ, ನಿರ್ದೇಶಕರಾದ ಸಿ ಗುಡ್ಡಪ್ಪ, ರುದ್ರೇಶ್, ಮಡಿವಾಳ ಮಾಚಿದೇವ ಸಂಘದ ಖಜಾಂಚಿ ಮತ್ತು ಬಿಜೆಪಿ ಓಬಿಸಿ ಮೋರ್ಚಾದ ಸಾಮಾಜಿಕ ಜಾಲತಾಣದ ಜಿಲ್ಲಾ ಸಂಚಾಲಕ ಸುರೇಶ್ ಕೋಗುಂಡೆ ಹಾಗು ಇತರರು ಉಪಸ್ಥಿತರಿದ್ದರು.

## ಸರ್ಕಾರಿ ಕನ್ನಡ ಶಾಲೆಗಳ ಬಗ್ಗೆ ಕೀಳರಿಮೆ ಬೇಡ



**(1ನೇ ಪುಟದಿಂದ)** ಮಕ್ಕಳ, ಮಹಿಳೆಯರ ಮೇಲೆ ಲೈಂಗಿಕ ದೌರ್ಜನ್ಯಗಳು ಹೆಚ್ಚುತ್ತಿವೆ, ಅದರಲ್ಲೂ ಮಕ್ಕಳಿಗೆ ಅಶ್ಲೀಲ ಚಿತ್ರಗಳನ್ನು ತೋರಿಸುವುದು, ಮಕ್ಕಳನ್ನು ಚುಡಾಯಿಸುವುದು, ಅವರ ಮೇಲೆ ಹಲ್ಲೆ ಮಾಡುವುದು ಕಾನೂನಿನಡಿಯಲ್ಲಿ ಅಪರಾಧವಾಗಿದ್ದು, ಇಂತಹ ಘಟನೆಗಳು ತಮ್ಮ ಸುತ್ತ ಮುತ್ತ ಜರುಗಿದಲ್ಲಿ ಕೂಡಲೇ ಹತ್ತಿರದ ಪೊಲೀಸರಿಗೆ ಮಾಹಿತಿ ನೀಡಿದರೆ ಕಾನೂನು ಕ್ರಮ ಕೈಗೊಳ್ಳಲು ಸಹಾಯವಾಗುತ್ತದೆ ಎಂದು ಮಕ್ಕಳಿಗೆ ಸಲಹೆ ನೀಡಿದ ಅವರು, ಪ್ರತಿಯೊಬ್ಬರು ಕಾನೂನು ಅರಿವು ಪಡೆದುಕೊಳ್ಳಿ ಎಂದು ಮನವಿ ಮಾಡಿದರು.

ಬಾಲ ಕಾರ್ಮಿಕರ ಕಾಯಿದೆಗಳು ಮತ್ತು ಬಾಲ್ಯ ವಿವಾಹ ನಿಷೇಧ ಕುರಿತು ವಕೀಲ ಕೆ. ಸಣ್ಣನಿಂಗನಗೌಡ, ಶಿಕ್ಷಣ ಇಲಾಖೆಯ ಇಸಿಓ ಮಂಜುನಾಥ ಗಿರಜ್ಜಿ ಉಪನ್ಯಾಸ ನೀಡಿದರು.

ವಕೀಲರ ಸಂಘದ ಅಧ್ಯಕ್ಷ ಕೆ.ಜಗದಪ್ಪ, ಆರೋಗ್ಯ ಇಲಾಖೆಯ ವೈದ್ಯ ಇನಾಯತ್ ಮಾತನಾಡಿದರು.

ಈ ಸಂದರ್ಭದಲ್ಲಿ ಸಹಾಯಕ ಅಭಿಯೋಜಕ ಡಿ.ನಿರ್ಮಲ, ಅಪರ ಸರ್ಕಾರಿ ವಕೀಲ ವಿ.ಜಿ. ಪ್ರಕಾಶ್ ಗೌಡ, ವಕೀಲರ ಸಂಘದ ಉಪಾಧ್ಯಕ್ಷ ಡಿ.ಬಿ. ವಾಸುದೇವ, ಕಾರ್ಯದರ್ಶಿ ಎಸ್.ಜಿ.ತಿಪ್ಪೇಸ್ವಾಮಿ, ಜಂಟಿ ಕಾರ್ಯದರ್ಶಿ ಎಂ. ನಾಗೇಂದ್ರಪ್ಪ, ಕಾರ್ಯದರ್ಶಿ ವೀರಭದ್ರಪ್ಪ, ಎಸ್.ಡಿ.ಎಂ.ಸಿ ಅಧ್ಯಕ್ಷ ಸಿ.ಬಸವರಾಜ, ಮುಖ್ಯೋಪಾಧ್ಯಾಯ ಜೆ.ಪ್ರಭಾಕರ, ಗ್ರಾಪಂ ಮಾಜಿ ಅಧ್ಯಕ್ಷ ಪಿ.ಹನುಮಂತಪ್ಪ, ಸದಸ್ಯರಾದ ಎನ್.ಮಂಜುನಾಥ, ನೀಲಮ್ಮ ಕೆ, ಕರಿಯಮ್ಮ ರೇಣುಕಮ್ಮ ಸೇರಿದಂತೆ ಇತರರು ಇದ್ದರು.

## ನಗರದ ವಿವಿಧೆಡೆಯಲ್ಲಿ ಇಂದು ವಿದ್ಯುತ್ ವ್ಯತ್ಯಯ

ಮಾಮಾಸ್ ಜಾಯಿಂಟ್ ರಸ್ತೆ, ಶಾಬನೂರು ರಸ್ತೆ, ಎಸ್.ಎಸ್. ಲೇಔಟ್, 'ಎ' ಬ್ಲಾಕ್, ಕುವೆಂಪು ನಗರ, ಬಾಟ್ಲಿ ಬಿಲ್ಡಿಂಗ್ ಸುತ್ತ ಮುತ್ತ, ಸಿದ್ದವೀರಪ್ಪ ಬಡಾವಣೆ, 1ನೇ ಅಡ್ಡ ರಸ್ತೆಯಿಂದ 7ನೇ ಅಡ್ಡ ರಸ್ತೆವರೆಗೆ, ಗ್ಲಾಸ್ ಹೌಸ್, ಬಾಪೂಜಿ ಬ್ಯಾಂಕ್ ಸಮುದಾಯ ಭವನದ ಹಿಂಭಾಗದ ಪ್ರದೇಶ, ಬಿ.ಐ.ಇ.ಟಿ. ಕಾಲೇಜು ಹಾಗೂ ಸುತ್ತ ಮುತ್ತ ಪ್ರದೇಶಗಳು. ಹೆಚ್.ಕೆ. ಆರ್. ಸರ್ಕಲ್, ಕೆ.ಇ.ಬಿ ಕಾಲೋನಿ, ನಿಟುವಳ್ಳಿ ಹಾಗು ನಿಟುವಳ್ಳಿ ಹೊಸ ಬಡಾವಣೆ, ಮೌನೇಶ್ವರ ಬಡಾವಣೆ, ಸೈಯದ್ ಪೀರ್ ಬಡಾವಣೆ, ಐ.ಟಿ.ಐ. ರಿಂಗ್ ರಸ್ತೆ, ಜಯನಗರ, ದುರ್ಗಾಂಬಿಕ ದೇವಸ್ಥಾನ, ಎಸ್. ಎಸ್. ಹೈಟೆಕ್ ಆಸ್ಪತ್ರೆ ರಸ್ತೆ, ಭಗೀರಥ ಸರ್ಕಲ್, ಕಾಳಿಕಾಂಬ ದೇವಸ್ಥಾನ, ಶಕ್ತಿನಗರ ಹಾಗು ಇ.ಎಸ್.ಐ . ಆಸ್ಪತ್ರೆ ಮತ್ತು ಸುತ್ತ ಮುತ್ತಲಿನ ಪ್ರದೇಶಗಳು.

ಶಕ್ತಿನಗರ, ಬನಶಂಕರಿ ದೇವಸ್ಥಾನದ ಸುತ್ತಮುತ್ತ, ರಾಜೇಂದ್ರ ಬಡಾವಣೆ ಹಾಗೂ ಸುತ್ತ ಮುತ್ತಲಿನ ಪ್ರದೇಶಗಳು. ಪಿ.ಬಿ. ರಸ್ತೆ ಹಾಗೂ ಸುತ್ತ ಮುತ್ತಲಿನ ಪ್ರದೇಶಗಳು.

ಶ್ರೀ ಮುರುಘ ರಾಜೇಂದ್ರ ಸ್ವಾಮಿಗಳ ಮಠ, ಜಾಧವ್ ಕ್ಲಿನಿಕ್ ಸುತ್ತ ಮುತ್ತ, ಶಿವಪ್ಪಯ್ಯ ವೃತ್ತದಿಂದ ಜಯದೇವ ವೃತ್ತದವರೆಗೆ, ಪೊಲೀಸ್ ಕ್ವಾಟ್ರಸ್, ತುಂಗ, ಭದ್ರ, ಸರಸ್ವತಿ, ಕೃಷ್ಣ ಬ್ಲಾಕ್, ಅರುಣ ಸರ್ಕಲ್, ಎಮ್.ಸಿ.ಸಿ. 'ಎ' ಬ್ಲಾಕ್, ನ್ಯಾಯಾಧೀಶರ ವಸತಿ ಗೃಹಗಳು, ತೊಗಟವೀರ ಕಲ್ಯಾಣ ಮಂದಿರ, ವಿನೋಬ ನಗರ 1ನೇ ಮುಖ್ಯ ರಸ್ತೆ, ಎಸ್.ಎಸ್. ಬಡಾವಣೆ, ಎ ಬ್ಲಾಕ್, ಶಾಂತಿ ನಗರ, ಕುಂದುವಾಡ ರಸ್ತೆ, ಮಹಾನಗರ ಪಾಲಿಕೆ ಕುಡಿಯುವ ನೀರಿನ ಸ್ಥಾವರ, ಬಸವೇಶ್ವರ ಬಡಾವಣೆ, ಮಹಾಲಕ್ಷ್ಮಿ ಬಡಾವಣೆ, ಬಾಲಾಜಿ ನಗರ, ಕುಂದುವಾಡ ಕೆರೆ, ಎ.ವಿ.ಕೆ ಕಾಲೇಜ್ ರಸ್ತೆ, ರತ್ನಮ್ಮ ಮಹಿಳಾ ಹಾಸ್ಟೆಲ್, ಸೀತಮ್ಮ ಕಾಲೇಜ್ ಮತ್ತು ಬಡಾವಣೆ ಪೊಲೀಸ್ ಠಾಣೆ, ಹದಡಿ ರಸ್ತೆ ಹಾಗೂ ಸುತ್ತ ಮುತ್ತ ಪ್ರದೇಶಗಳು.

ನಿಟುವಳ್ಳಿ ಹಾಗು ನಿಟುವಳ್ಳಿ ಹೊಸ ಬಡಾವಣೆ, ದುರ್ಗಾಂಬಿಕ ದೇವಸ್ಥಾನ ಸುತ್ತಮುತ್ತ, 60 ಅಡಿ ರಸ್ತೆ ಮತ್ತು ಸುತ್ತ ಮುತ್ತಲಿನ ಪ್ರದೇಶಗಳು.ಪಿ.ಬಿ. ರೋಡ್, ರಿಲಯನ್ಸ್ ಮಾರ್ಕೆಟ್, ಸುಲ್ತಾನ್ ಡೈಮೈಂಡ್ಸ್, ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣ ಹಾಗೂ ಸುತ್ತ ಮುತ್ತಲಿನ ಪ್ರದೇಶಗಳು.

ಡೆಂಟಲ್ ಕಾಲೇಜ್ ರಸ್ತೆ, ಮ್ಯಾಕ್ಸ್, ಕೆಎಸ್‌ಪಿ, ಕಡ್ಲಿ ಬಿಲ್ಡಿಂಗ್, ಬಿಎಸ್‌ಸಿ, ಎಆರ್‌ಜಿ ಕಾಲೇಜ್, ನಿಜಲಿಂಗಪ್ಪ ಬಡಾವಣೆ, ರಿಂಗ್ ರೋಡ್, ಕುಂದವಾಡ ರಸ್ತೆ, ಯಲ್ಲಮ್ಮನಗರ, ವಿನೋಬನಗರ 4ನೇ ಮೇನ್, 3ನೇ ಮೇನ್ ಹಾಗೂ ಸುತ್ತ ಮುತ್ತಲ ಪ್ರದೇಶಗಳು.

ಇ.ಎಸ್.ಐ ಆಸ್ಪತ್ರೆ ಹಾಗೂ ಸುತ್ತ ಮುತ್ತಲಿನ ಪ್ರದೇಶಗಳಲ್ಲಿ ಇಂದು ಬೆಳಿಗ್ಗೆ 10 ರಿಂದ ಸಂಜೆ 5 ರವರೆಗೆ ವಿದ್ಯುತ್ ಸರಬರಾಜಿನಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

## ಮುಂಗಾರಿನಲ್ಲಿ ಸಾಮಾನ್ಯ ಪ್ರಗತಿ : ಹವಾಮಾನ ಇಲಾಖೆ

**(1ನೇ ಪುಟದಿಂದ)** ಜೇನಮಣಿ ಹೇಳಿದ್ದಾರೆ.

ಮುಂಗಾರು ಪ್ರಗತಿಯಲ್ಲಿ ವಿಳಂಬವಾಗಿಲ್ಲ. ಮುಂದಿನ ಎರಡು ದಿನಗಳಲ್ಲಿ ಮುಂಗಾರು ಮಹಾರಾಷ್ಟ್ರಕ್ಕೆ ತಲುಪಲಿದೆ. ನಂತರದ ಎರಡು ದಿನಗಳಲ್ಲಿ ಮುಂಬೈ ಆವರಿಸಲಿದೆ ಎಂದವರು ತಿಳಿಸಿದ್ದಾರೆ.

ಗೋವಾ, ಮಹಾರಾಷ್ಟ್ರದ ಇನ್ನಷ್ಟು ಭಾಗ, ಕರ್ನಾಟಕ, ಆಂಧ್ರ ಪ್ರದೇಶ ಹಾಗೂ ತಮಿಳುನಾಡುಗಳಲ್ಲಿ ಮುಂಗಾರು ಆವರಿಸಲು ಮುಂದಿನ ಎರಡು ದಿನಗಳು ಅನುಕೂಲಕರವಾಗಿವೆ ಎಂದವರು ಹೇಳಿದ್ದಾರೆ.

## ಶಿಶು ಮಾರಾಟ

**(1ನೇ ಪುಟದಿಂದ)** ಮಹಿಳಾ ಪೊಲೀಸರು ಪ್ರಕರಣಕ್ಕೆ ಸಂಬಂಧಿಸಿದಂತೆ ಮಗುವಿನ ತಂದೆಯನ್ನು ವಶಕ್ಕೆ ಪಡೆದು ವಿಚಾರಣೆ ಕೈಗೊಂಡಿದ್ದಾರೆ. ಮಗುವಿನ ಪತ್ತೆಗೆ ಶೋಧ ಕಾರ್ಯ ನಡೆಸುತ್ತಿದ್ದಾರೆ ಎಂದು ತಿಳಿದು ಬಂದಿದೆ.

## ಜನಪರ ಕಾರ್ಯಗಳಿಂದ ಪ್ರಧಾನಿ ಮೋದಿ ಜಗದ ಜನಾನುರಾಗಿಗಳಾಗಿದ್ದಾರೆ

### ರಾಣೇಬೆನ್ನೂರು ಶಾಸಕ ಅರುಣಕುಮಾರ ಪೂಜಾರ



ರಾಣೇಬೆನ್ನೂರು, ಜೂ. 9- ಮುಂಗಾರು ಹಾಗೂ ಹಿಂಗಾರು ಬೆಳೆ ವಿಮೆ, ಉಜ್ವಲ, ಸಿಂಚಾಯಿ, ಭತ್ತದ ಬೆಂಬಲ ಬೆಲೆ, ಕೃಷಿ ವಿಕಾಸ ಹಾಗೂ ಸಮ್ಮಾನ ಯೋಜನೆಗಳ ಮೂಲಕ ಲಕ್ಷಾಂತರ ಕೋಟಿ ಹಣವನ್ನು ರೈತಪರ ಕಾರ್ಯಕ್ರಮಗಳಿಗೆ ಕೇಂದ್ರ ಸರ್ಕಾರ ವಿನಿಯೋಗಿಸಿದೆ ಎಂದು ಶಾಸಕ ಅರುಣಕುಮಾರ ಪೂಜಾರ ಹೇಳಿದರು.

ಪ್ರಧಾನಿ ನರೇಂದ್ರ ಮೋದಿ ಅವರ 8 ವರ್ಷಗಳ ಆಡಳಿತದ ಅವಧಿಯಲ್ಲಿ ಮಾಡಿದ ಅಭಿವೃದ್ಧಿ ಕಾರ್ಯಗಳ ಬಗ್ಗೆ ಬಿಜೆಪಿ ಕಾರ್ಯಾಲಯದಲ್ಲಿ ಇಂದು ನಡೆಸಿದ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿದರು.

ಸ್ವಚ್ಛ ಭಾರತ, ಆವಾಸ್, ಕೋವಿಡ್ ಸಂದರ್ಭದ ಆತ್ಮನಿರ್ಭರ್, ಕ್ರೆಡಿಟ್ ಕಾರ್ಡ್, ಜನಧನ್, ಉದ್ಯೋಗ ಖಾತ್ರಿ, ಗ್ರಾಮ ಜ್ಯೋತಿ, ಆರೋಗ್ಯ ಅಭಿಯಾನ, ಹೆದ್ದಾರಿ, ಜಲಜೀವನ ಯೋಜನೆಗಳ ಜಾರಿ ಜೊತೆ ಮನ್ ಕಿ ಬಾತ್ ನಿಂದ ಪ್ರತಿ ಪ್ರಜೆಯ ಮನೆಗೆ ಪ್ರಧಾನಿ ನರೇಂದ್ರ ಮೋದಿ ಧಾವಿಸಿದ್ದಾರೆ ಎಂದು ಶಾಸಕರು ವಿವರಿಸಿದರು.

ರಾಣೇಬೆನ್ನೂರು ವಿಧಾನಸಭಾ ಕ್ಷೇತ್ರದಲ್ಲಿ ಇಂತಹ ಅನೇಕ ಕಾರ್ಯಕ್ರಮಗಳ ಮೂಲಕ ನೂರಾರು ಕೋಟಿ ಹಣ ವ್ಯಯಿಸಿ ಜನ ಕಲ್ಯಾಣ ಕೆಲಸಗಳನ್ನು ಕೈಗೊಂಡಿದ್ದಾರೆ. ಕೆಲವು ಪೂರ್ಣಗೊಂಡಿವೆ. ಇನ್ನು ಅನುದಾನ ಬರುವುದಿದ್ದು ಉಳಿದ ಕೆಲಸಗಳನ್ನು ಹಂತ ಹಂತವಾಗಿ ತೆಗೆದುಕೊಳ್ಳಲಾಗುವುದು ಎಂದು ಶಾಸಕರು ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಅಧ್ಯಕ್ಷರುಗಳಾದ ಬಸವರಾಜ ಕೇಲಗಾರ, ದೀಪಕ್ ಹರಪನಹಳ್ಳಿ, ವಾಯುವ್ಯ ಸಾರಿಗೆ ಉಪಾಧ್ಯಕ್ಷ ಡಾ. ಬಸವರಾಜ ಕೇಲಗಾರ, ಪ್ರಾಧಿಕಾರದ ಅಧ್ಯಕ್ಷ ಶಿವಕುಮಾರ ನರಸಗೊಂಡರ, ಮಾಜಿ ಅಧ್ಯಕ್ಷ ಚೋಳಪ್ಪ ಕಸವಾಳ, ದಾವಣಗೆರೆ ಉಸ್ತುವಾರಿ ಕೆ. ಶಿವಲಿಂಗಪ್ಪ ಮತ್ತಿತರರಿದ್ದರು.

## ಪಠ್ಯ ವಾಪಸ್ ಪಡೆದ ಸಾಹಿತಿಗಳಿಗೆ ಕೊಲೆ ಬೆದರಿಕೆ

**(1ನೇ ಪುಟದಿಂದ)** ಪುಟದ ಪತ್ರದಲ್ಲಿ 'ಹಿಂದೂ ಧರ್ಮ ಅವಹೇಳನ ಮಾಡಿ, ಕೇಸರೀಕರಣಗೊಳಿಸಿದ್ದೀರಿ ಎಂದು ಸುಳ್ಳು ಹೇಳುತ್ತಿದ್ದೀರಿ. ಜೊತೆಗೆ ನೀವೆಲ್ಲ ದೇಶಕ್ಕೆ ದ್ರೋಹ ಬಗೆಯುತ್ತಿದ್ದೀರಿ. ನೀವೆಲ್ಲ ನಾಶವಾಗುತ್ತೀರಿ. ಕೊನೆಗೆ ದುರ್ಮರಣಕ್ಕೆ ತುತ್ತಾಗುತ್ತೀರಿ ಎಚ್ಚರಿಕೆ' ಎಂದು ಬರೆದ ಈ ಅನಾಮಧೇಯ ಪತ್ರ 'ಜನತಾವಾಣಿ' ಗೆ ಲಭ್ಯವಾಗಿದೆ.

ಬೆದರಿಕೆ ಪತ್ರ ಬಂದ ಹಿನ್ನೆಲೆಯಲ್ಲಿ ಕೆಲವು ಸಾಹಿತಿಗಳು ಜೀವ ಬೆದರಿಕೆಯ ದೂರು ದಾಖಲಿಸುವುದಾಗಿ ತಿಳಿಸಿದ್ದಾರೆ.

## ಜೈವಿಕ ಆರ್ಥಿಕ ವಲಯದಲ್ಲಿ 8 ಪಟ್ಟು ಬೆಳವಣಿಗೆ



ನವದೆಹಲಿ, ಜೂ. 9 – ದೇಶದ ಅಭಿವೃದ್ಧಿಗಾಗಿ ಎಲ್ಲ ವಲಯಗಳಿಗೆ ಉತ್ತೇಜನ ನೀಡುವುದರಲ್ಲಿ ಸರ್ಕಾರ ನಂಬಿಕೆ ಹೊಂದಿದೆ ಎಂದಿರುವ ಪ್ರಧಾನ ಮಂತ್ರಿ ನರೇಂದ್ರ ಮೋದಿ, ಕೆಲವೇ ವಲಯಗಳಿಗೆ ಉತ್ತೇಜನ ನೀಡಿ ಉಳಿದವುಗಳನ್ನು ಕಡೆಗಣಿಸುವ ಹಿಂದಿನ ಪದ್ಧತಿಯನ್ನು ಬದಲಿಸಲಾಗಿದೆ ಎಂದಿದ್ದಾರೆ. ಬಯೋಟೆಕ್ ಸ್ಟಾರ್ಟ್‌ಅಪ್ ಎಕ್ಸ್‌ಪೋ ಕಾರ್ಯಕ್ರಮದಲ್ಲಿ ಮಾತನಾಡುತ್ತಿದ್ದ ಅವರು, ಕಳೆದ ಎಂಟು ವರ್ಷಗಳಲ್ಲಿ ದೇಶದ ಜೈವಿಕ – ಆರ್ಥಿಕತೆ ಎಂಟು ಪಟ್ಟು ವಿಸ್ತಾರವಾಗಿ 80 ಶತಕೋಟಿ ಡಾಲರ್‌ಗಳಿಗೆ ತಲುಪಿದೆ. ಬಯೋಟೆಕ್ ಜಾಗತಿಕ, ಆರ್ಥಿಕ ವ್ಯವಸ್ಥೆಯ ಮೊದಲ ಹತ್ತು ದೇಶಗಳ ಸಾಲಿಗೆ ಸೇರ್ಪಡೆಯಾಗುವ ದಿನಗಳು ದೂರವಿಲ್ಲ ಎಂದು ತಿಳಿಸಿದ್ದಾರೆ. ಕಳೆದ ಎಂಟು ವರ್ಷಗಳಲ್ಲಿ ಕೆಲವು ನೂರರಷ್ಟಿದ್ದ ನವೋದ್ಯಮಗಳ ಸಂಖ್ಯೆ 70 ಸಾವಿರಕ್ಕೂ ಹೆಚ್ಚಿನ ಮಟ್ಟಕ್ಕೆ ತಲುಪಿದೆ. ತಮ್ಮ ಸರ್ಕಾರ ಉದ್ಯಮ ನಡೆಸುವುದನ್ನು ಸುಗಮಗೊಳಿಸುತ್ತಿದೆ ಹಾಗೂ ಉದ್ಯಮಶೀಲತೆಯ ಸಂಸ್ಕೃತಿಗೆ ಉತ್ತೇಜನ ನೀಡುತ್ತಿದೆ ಎಂದವರು ಹೇಳಿದ್ದಾರೆ.


## ಈಡಿಗರ ವಿದ್ಯಾರ್ಥಿ ನಿಲಯಕ್ಕೆ ಅರ್ಜಿ

ದಾವಣಗೆರೆ, ಜೂ.9- ಪಿಯುಸಿ, ಪದವಿ, ಇಂಜನಿಯರಿಂಗ್ ಪದವಿ, ಸ್ನಾತಕೋತ್ತರ ಪದವಿ ಅಭ್ಯಾಸ ಮಾಡುವ ವಿದ್ಯಾರ್ಥಿನಿಯರಿಂದ ಆರ್ಯ ಈಡಿಗರ ಮಹಿಳಾ ವಿದ್ಯಾರ್ಥಿ ನಿಲಯಕ್ಕೆ ಅರ್ಜಿ ಆಹ್ವಾನಿಸಲಾಗಿದೆ.

ಪ್ರವೇಶ ಬಯಸುವ ವಿದ್ಯಾರ್ಥಿನಿಯರು ವಿನೋಬನಗರದಲ್ಲಿರುವ ಹಾಸ್ಟೆಲ್‌ನಲ್ಲಿ ಅರ್ಜಿ ಪಡೆದುಕೊಂಡು ಇದೇ ಜೂನ್ 25ರೊಳಗೆ ಸೂಕ್ತ ದಾಖಲಾತಿಯೊಂದಿಗೆ ಸಲ್ಲಿಸುವಂತೆ ಜಿಲ್ಲಾ ಆರ್ಯ ಈಡಿಗ ಸಂಘದ ಕಾರ್ಯದರ್ಶಿ ಎ.ನಾಗರಾಜ್ ತಿಳಿಸಿದ್ದಾರೆ.


ವಾಸವಿ ಯುವಜನ ಸಂಘ (ರಿ)
ಎಸ್.ಕೆ.ಪಿ. ರಸ್ತೆ, ದಾವಣಗೆರೆ

ಜನ್ಮದಿನದ ಶುಭಾಶಯಗಳು



ಶ್ರೀ ಜೀವನ್ ಆರ್.ಆರ್.
ನಿರ್ದೇಶಕರು



ಮಾತೆ ಶ್ರೀ ಕನ್ಯಕಾಪರಮೇಶ್ವರಿ ಅಮ್ಮನವರು ಅವರಿಗೆ ಆಯುರಾರೋಗ್ಯ-ಅಷ್ಟೈಶ್ವರ್ಯ-ಸುಖ-ಶಾಂತಿ - ನೆಮ್ಮದಿ ನೀಡಲಿ ಹಾಗೂ ಇನ್ನೂ ಹೆಚ್ಚಿನ ಸಮಾಜ ಸೇವೆ ಮಾಡಲು ಶಕ್ತಿ ನೀಡಲೆಂದು ಪ್ರಾರ್ಥಿಸುತ್ತಾ, ಶುಭ ಹಾರೈಸುತ್ತೇವೆ.

ಅಧ್ಯಕ್ಷರು, ಕಾರ್ಯಕಾರಿ ಸಮಿತಿ ಹಾಗೂ ಸರ್ವ ಸದಸ್ಯರು
ವಾಸವಿ ಯುವಜನ ಸಂಘ (ರಿ), ಎಸ್.ಕೆ.ಪಿ. ರಸ್ತೆ, ದಾವಣಗೆರೆ.



VACANCY

| Sl. No. | Job Title | No Of Openings | Educational Qualification | Experience No of Years |
|---|---|---|---|---|
| 01 | Accountants (Junior) | 10 | B.Com / M.Com / MBA TALLY / ERP / SAP | 0-1 |
| 02 | Accounts (Senior) | 05 | Bcom / Mcom / MBA GST / INCOME TAX / SAP | 5 |
| 03 | Sales Executives for marketing retail & Project. with 2-wheeler | 10 | Any Degree (Diploma/ITI) | 0-1 |

HULLUMANE PROPERTIES & POWER PVT LTD.,
# Depot Address - Beside Lalitha International School, Behind Shashi Soap Factory
Land Mark-Towards Shiramagondanahalli Road, From Lokikere Road
Lokikere Industrial Area, Davangere-577 005. Karnataka
Drop Resume to Email - hrhullumanepropertiespwr@yahoo.com

# ಕಷ್ಟವೆನಿಸುವ ವಿಷಯಗಳನ್ನು ಪ್ರೀತಿಸಿರಿ, ಸುಲಭವಾಗುತ್ತದೆ

## ಶ್ರೀಮತಿ ಪಾರ್ವತಮ್ಮ ಶಿವಶಂಕರಪ್ಪ ವಿಜ್ಞಾನ ಪದವಿ ಪೂರ್ವ ಕಾಲೇಜಿನಲ್ಲಿ ಡಾ. ಎಂ.ಜಿ. ಈಶ್ವರಪ್ಪ

ದಾವಣಗೆರೆ. ಜೂ. 9- ವಿದ್ಯಾರ್ಥಿಗಳು ತಮಗೆ ಕಷ್ಟವೆನಿಸುವ ವಿಷಯಗಳನ್ನು ಮೊದಲು ಪ್ರೀತಿಸಬೇಕು. ಆಗ ಅದು ನಿಮ್ಮದಾಗಿ ಅರ್ಥವಾಗುತ್ತದೆ, ಸುಲಭವಾಗುತ್ತದೆ ಎಂದು ಬಾಪೂಜಿ ವಿದ್ಯಾಸಂಸ್ಥೆಯ ಶೈಕ್ಷಣಿಕ ನಿರ್ದೇಶಕ ಡಾ. ಎಂ.ಜಿ.ಈಶ್ವರಪ್ಪ ಕಿವಿಮಾತು ಹೇಳಿದರು.



ನಗರದ ಶ್ರೀಮತಿ ಪಾರ್ವತಮ್ಮ ಶಾಮನೂರು ಶಿವಶಂಕರಪ್ಪ ವಿಜ್ಞಾನ ಪದವಿ ಪೂರ್ವ ಕಾಲೇಜಿನ ಪ್ರಥಮ ಪಿಯುಸಿ ವಿದ್ಯಾರ್ಥಿಗಳಿಗೆ ಸ್ವಾಗತ ಕೋರುವ ಹಾಗೂ ವನ ಮಹೋತ್ಸವ ಕಾರ್ಯಕ್ರಮದ ಮುಖ್ಯ ಅತಿಥಿಯಾಗಿ ಪಾಲ್ಗೊಂಡು ಅವರು ಮಾತನಾಡಿದರು.

ಶಿಸ್ತು, ಶ್ರಮ, ಶ್ರದ್ಧೆಯಿಂದ ಪಾಠ ಕೇಳಿ ಅದನ್ನು ಬುದ್ಧಿ, ಕರುಣೆ ಮತ್ತು ಕೌಶಲ್ಯದೊಂದಿಗೆ ಜೀವನದಲ್ಲಿ ಅಳವಡಿಸಿ ಬಳಸಿಕೊಳ್ಳಬೇಕು. ಆಗ ಯಶಸ್ಸು ಸಾಧ್ಯ, ಪರಿಪೂರ್ಣತೆ ನಮ್ಮಲ್ಲಿ ಅಡಗಿರುವ ವಿದ್ಯೆ, ಅದನ್ನು ಹೊರ ತೆಗೆಯುವುದು ಶಿಕ್ಷಕರ ಪಾತ್ರ, ಶಿಕ್ಷಕರು ವಿದ್ಯಾರ್ಥಿಗಳಿಗೆ ಎರಡನೇ ಪೋಷಕರು ಇದ್ದಂತೆ ಎಂದರು.

ಪದವಿಪೂರ್ವ ಶಿಕ್ಷಣವು ನಿರ್ಣಾಯಕ ಘಟ್ಟವಾಗಿದ್ದು ವಿದ್ಯಾರ್ಥಿಗಳು ಮುಂದೆ ತಾವು ಏನಾಗಬೇಕೆಂಬ ನಿರ್ಧಾರ ತೆಗೆದುಕೊಳ್ಳುವ ಪರ್ವ ಕಾಲವಿದು ಎಂದು ಅವರು ಹೇಳಿದರು.

ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ಕಾಲೇಜಿನ ಹಳೆಯ ವಿದ್ಯಾರ್ಥಿಗಳಾದ ನಸೀಮಾ ಬಾನು, ಉದಯ್ ಕಿರಣ್, ಹಾಗೂ ಬಾಲಾಜಿ ಸನ್ಮಾನ ಸ್ವೀಕರಿಸಿ ಮಾತನಾಡುತ್ತಾ, ತಮ್ಮ ಕಾಲೇಜು ಜೀವನದ ಅನುಭವಗಳನ್ನು ಹಾಗೂ ತಮ್ಮ ಸಾಧನೆಗೆ ರೂಢಿಸಿಕೊಂಡ ಮಾರ್ಗಗಳನ್ನು ವಿವರಿಸಿದರು.

ಕಾಲೇಜಿನ ಪ್ರಾಚಾರ್ಯ ಪ್ರೊ. ಎಂ.ಪಿ. ರುದ್ರಪ್ಪ ಮಾತನಾಡಿ, ಅಂದಿನ ಪಠ್ಯ ವಿಷಯಗಳನ್ನು ವಿದ್ಯಾರ್ಥಿಗಳು ಅಂದೇ ಅರ್ಥ ಮಾಡಿಕೊಂಡಲ್ಲಿ ಪರೀಕ್ಷೆಗಳಿಗೆ ಭಯಪಡುವ ಸಂದರ್ಭ ಬರುವುದಿಲ್ಲ. ಇದಕ್ಕೆ ಆಸಕ್ತಿ ಬಹುಮುಖ್ಯ ಎಂದರು. ಗಣಿತ ಉಪನ್ಯಾಸಕ ಕೆ.ಸಿ.ಶಿವಶಂಕರ್ ನಿರೂಪಿಸಿದರು. ಚೈತ್ರ ಸಂಗಡಿಗರು ಪ್ರಾರ್ಥಿಸಿದರು. ಇಂಗ್ಲಿಷ್ ಉಪನ್ಯಾಸಕ ಕೆ.ಸಿ. ವಿಜಯಕುಮಾರ್ ಸ್ವಾಗತಿಸಿದರು. ಅಧ್ಯಾಪಕಿ ಶರ್ಮಿಳಾ ಅತಿಥಿಗಳನ್ನು ಪರಿಚಯಿಸಿದರು. ಕನ್ನಡ ಉಪನ್ಯಾಸಕ ಹೆಚ್.ಸಿ. ವಿನಯ್ ಕುಮಾರ್ ವಂದಿಸಿದರು.

# ಪಾಪ್‌ಕಾರ್ನ್ ಅಲ್ಲಿ ಅಂತರ್ ಬೆಳೆಯಾಗಿ ತೊಗರಿ



ಚನ್ನಗಿರಿ, ಜೂ. 9 - ಐಸಿಎಆರ್ ತರಳಬಾಳು ಕೃಷಿ ವಿಜ್ಞಾನ ಕೇಂದ್ರ (ದಾವಣಗೆರೆ) ಹಾಗೂ ರೈತ ಸಂಪರ್ಕ ಕೇಂದ್ರ, ಕೃಷಿ ಇಲಾಖೆ (ಸಂತೇಬೆನ್ನೂರು) ಇವರ ಸಂಯುಕ್ತಾಶ್ರಯದಲ್ಲಿ ಪಾಪ್‌ಕಾರ್ನ್ ಬೆಳೆಯಲ್ಲಿ ಅಂತರ ಬೆಳೆಯಾಗಿ ತೊಗರಿಯ ಮುಂಚೂಣಿ ಪ್ರಾತ್ಯಕ್ಷಿಕೆಯನ್ನು ಚನ್ನಗಿರಿ ತಾಲ್ಲೂಕು ದೊಡ್ಡಬ್ಬಿಗೆರೆ ಗ್ರಾಮದಲ್ಲಿ ಹಮ್ಮಿಕೊಳ್ಳಲಾಗಿತ್ತು.

ಕೇಂದ್ರದ ಬೇಸಾಯ ತಜ್ಞ ಮಲ್ಲಿಕಾರ್ಜುನ್ ಮಾತನಾಡಿ, ಮಳೆಯಾಧಾರಿತ ಕೃಷಿ ಚಟುವಟಿಕೆಗಳಲ್ಲಿ ಏಕಬೆಳೆ ಪದ್ಧತಿ ಬದಲು ಅಂತರ ಬೆಳೆಗಳನ್ನು ಮಾಡಿಕೊಳ್ಳುವುದು ಸೂಕ್ತ. ಪಾಪ್‌ಕಾರ್ನ್ ಬೆಳೆಯಲ್ಲಿ ನವೀನ ತಳಿಯಾದ ತೊಗರಿ ಟಿಎಸ್-3ಆರ್ ಇನ್ನು ಅಂತರ್ ಬೆಳೆಯಾಗಿ ಬೆಳೆಯುವುದರಿಂದ ಆದಾಯ ಮಾಡಿಕೊಳ್ಳಬಹುದು.

ಮಣ್ಣು ವಿಜ್ಞಾನಿಗಳಾದ ಎಚ್.ಎಂ ಸಣ್ಣಗೌಡರು ಜೈವಿಕ ಗೊಬ್ಬರಗಳಿಂದ ಬೀಜೋಪಚಾರ ಮಾಡಿ ಬಿತ್ತನೆ ಮಾಡುವುದರಿಂದ ರಾಸಾಯನಿಕ ಗೊಬ್ಬರದ ಬಳಕೆಯನ್ನು ಕಡಿಮೆ ಮಾಡಬಹುದು ಎಂದರು.

ಮಹತಬ್ ಅಲಿ ಕೃಷಿ ಅಧಿಕಾರಿಗಳು ಕೃಷಿ ಇಲಾಖೆಯ ಸವಲತ್ತುಗಳನ್ನು ಬಳಸಿಕೊಂಡು ವಿಜ್ಞಾನಿಗಳು ಹೇಳಿದ ತಂತ್ರಜ್ಞಾನಗಳನ್ನು ಬಳಸಿಕೊಳ್ಳಬೇಕು ಎಂದರು.

ರಘುರಾಜ್ ಮಾತನಾಡಿ, ರೈತ ಕ್ಷೇತ್ರ ಪಾಠಶಾಲೆಯಿಂದ ರೈತರಿಗೆ ಬಿತ್ತನೆಯಿಂದ ಹಿಡಿದು ಮಾರುಕಟ್ಟೆ ಮಾಡುವ ತನಕ ಮಾಹಿತಿಯನ್ನು ನೀಡಲಾಗುತ್ತದೆ ಎಂದರು.

# ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ ನಿಂದ ಪರಿಸರ ದಿನಾಚರಣೆ



ದಾವಣಗೆರೆ, ಜೂ. 9 - ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ ಕುವೆಂಪು ಭವನದ ಮುಂಭಾಗದಲ್ಲಿ ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷರಾದ ಸುಮತಿ ಜಯಪ್ಪ ಸಸಿ ನೆಟ್ಟು ನೀರು ಹಾಕುವುದರ ಮೂಲ ಪರಿಸರ ದಿನಾಚರಣೆ ಆಚರಿಸಲಾಯಿತು.

ಈ ಸಂದರ್ಭದಲ್ಲಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಬಿ.ವಾಮದೇವಪ್ಪ, ಗೌರವ ಕಾರ್ಯದರ್ಶಿ ಬಿ. ದಿಳ್ಳೆಪ್ಪ, ಶರಣ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ಕೆ .ಬಿ. ಪರಮೇಶ್ವರಪ್ಪ, ತಾಲ್ಲೂಕು ಕಸಾಪ ಕಾರ್ಯದರ್ಶಿ ನಾಗರಾಜ ಸಿರಿಗೆರೆ, ದಾಗಿನಕಟ್ಟೆ ಪರಮೇಶ್ವರಪ್ಪ, ಖಜಾಂಚಿ ಗೋಪನಾಳ್ ಪಾಲಾಕ್ಷಪ್ಪ, ತಾಲ್ಲೂಕು ಕಸಾಪ ನಿರ್ದೇಶಕ ಎಂ. ಷಡಾಕ್ಷರಪ್ಪ ಬೇತೂರು, ಶಿವಕುಮಾರ್ ಆರ್, ನಾಗವೇಣಿ ಎನ್, ಸೌಭಾಗ್ಯ, ಮಮತಾ, ಪದ್ಮಾ ಮತ್ತು ಇತರರು ಪಾಲ್ಗೊಂಡಿದ್ದರು.

# ಪೊಲೀಸ್ ಸಿಬ್ಬಂದಿ ಮಂಜುನಾಥ ಅಮಾನತ್ತು ಕಾರಿನ ವಿಚಾರವಾಗಿ ಹಲ್ಲೆಯ ವಿಡಿಯೋ ವೈರಲ್

ದಾವಣಗೆರೆ, ಜೂ.9- ಕಾರಿನ ವಿಚಾರವಾಗಿ ಹದಡಿ ಪೊಲೀಸ್ ಸಿಬ್ಬಂದಿ ಮಂಜುನಾಥ ಅವರು ವ್ಯಕ್ತಿಯೋರ್ವರ ಮೇಲೆ ಹಲ್ಲೆ ನಡೆಸಿರುವ ಪ್ರಕರಣಕ್ಕೆ ಸಂಬಂಧಿಸಿದಂತೆ ಸಾಮಾಜಿಕ ಜಾಲತಾಣದಲ್ಲಿ ವಿಡಿಯೋ ವೈರಲ್ ಆದ ಹಿನ್ನೆಲೆಯಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಿ.ಬಿ. ರಿಷ್ಯಂತ್ ಈ ಪ್ರಕರಣವನ್ನು ಬೆಳಕಿಗೆ ತಂದಿದ್ದು, ಪ್ರಕರಣದಲ್ಲಿನ ಮಂಜುನಾಥ ಅವರನ್ನು ಅಮಾನತ್ತು ಗೊಳಿಸಿದ್ದಾರೆ.

ಕಾರಿನ ವಿಚಾರವಾಗಿ ಪೊಲೀಸ್ ಸಿಬ್ಬಂದಿ ಹೊಡೆಯುತ್ತಿರುವ ವಿಡಿಯೋ ವೈರಲ್ ಆಗಿತ್ತು. ಇದರ ಹಿಂದಿನ ಸತ್ಯಸಂಗತಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಸ್.ಪಿ. ರಿಷ್ಯಂತ್ ವಿಡಿಯೋ ಮೂಲಕ ತಿಳಿಸಿದ್ದಾರೆ.

ತನ್ನ ಬಳಿ ಎರಡು ಕಾರುಗಳಿದ್ದು, ಅವುಗಳನ್ನು ಪರಮೇಶ್ ಎಂಬ ವ್ಯಕ್ತಿಗೆ ಮೂರು ದಿನಗಳ ಕಾಲ ಬಾಡಿಗೆ ಆಧಾರದಲ್ಲಿ ನೀಡಿದ್ದೆ. ಆದರೆ ಈಗ ಪರಮೇಶ್ ಕಾರುಗಳನ್ನು ವಾಪಸ್ ಕೊಡದೆ ಸತಾಯಿಸುತ್ತಿದ್ದಾನೆ. ಸಂಪರ್ಕಕ್ಕೂ ಸಿಗುತ್ತಿಲ್ಲ. ಹೇಗಾದರೂ ಮಾಡಿ ಕಾರನ್ನು ಹುಡುಕಿಕೊಡಿ ಎಂದು ಗಿರೀಶ್ ಎಂಬ ವ್ಯಕ್ತಿಯೊಬ್ಬ ಮೇ 15ರಂದು ವಿದ್ಯಾನಗರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದರು.

ಗಿರೀಶ್ ಮತ್ತು ಪರಮೇಶ್ ಒಂದೇ ಬಿಲ್ಡಿಂಗ್‌ನಲ್ಲಿ ವಾಸಿವಾಗಿದ್ದು, ಇವರಿಬ್ಬರೂ ಸ್ನೇಹಿತರು. ಪರಮೇಶ್ ಗಿರೀಶ್‌ಗೆ ತಾನು ಬಾಡಿಗೆ ಆಧಾರದಲ್ಲಿ ಕಾರನ್ನು ನೀಡುವ ಬ್ಯುಸಿನೆಸ್ ಮಾಡುತ್ತಿದ್ದಾರೆ. ದಿನಕ್ಕೆ ಕಾರೊಂದಕ್ಕೆ 1500 ರೂ. ಬಾಡಿಗೆ ಕೊಡು ಎಂದಾಗ ಕಾರಿನ ಸಾಲ ತೀರಿಸುವ ಸಲುವಾಗಿ ಗಿರೀಶ್ ಕಾರನ್ನು ಪರಮೇಶ್‌ಗೆ ಕೊಟ್ಟಿರುತ್ತಾರೆ.

ಇನ್ನೂ ಪರಮೇಶ್ ವಿಶಾಖ್ ಎಂಬುವವರಿಂದ 5 ಲಕ್ಷ ರೂ. ಸಾಲವಾಗಿ ಪಡೆದಿದ್ದು, ಆ ಹಣ ಹಿಂತಿರುಗಿಸಲಾಗದೆ ಗಿರೀಶ್ ಅವರಿಂದ ಪಡೆದ ಕಾರುಗಳಲ್ಲಿ ಬ್ರೀಜಾ ಕಾರನ್ನು ವಿಶಾಖ್‌ಗೆ ನೀಡಿ ನಿನ್ನ 5 ಲಕ್ಷ ಹಣ ಕೊಟ್ಟ ಮೇಲೆ ಕಾರು ಪಡೆದುಕೊಳ್ಳುವೆ ಎಂದು ಹೇಳಿ ಕೊಟ್ಟಿರುತ್ತಾನೆ. ವಿಶಾಖ್ ಹದಡಿ ಪೊಲೀಸ್ ಸಿಬ್ಬಂದಿ ಮಂಜುನಾಥ ಅವರಿಗೆ ಇದೇ ಕಾರನ್ನು ಉಪಯೋಗಿಸಿಕೊಳ್ಳುವಂತೆ ನೀಡಿದ್ದಾರೆ.

ಹೀಗೆ ಒಬ್ಬರಿಂದ ಮತ್ತೊಬ್ಬರಿಗೆ ವಿವಿಧ ಕಾರಣಗಳಿಂದ ಬದಲಾದ ಕಾರು ಹದಡಿ ಪೊಲೀಸ್ ಠಾಣೆ ಸಿಬ್ಬಂದಿ ಮಂಜುನಾಥ್ ಅವರ ಬಳಿಗೆ ಬಂದು ತಾನು ಉಪಯೋಗಿಸುತ್ತಿರುವ ವೇಳೆ ಕಾಫಿ ಡೇ ಹತ್ತಿರ ಕಾರಿನ ಮಾಲೀಕ ಗಿರೀಶ್ ಕಾರನ್ನು ಗಮನಿಸುತ್ತಾರೆ. ಆಗ ಪೊಲೀಸ್ ಸಿಬ್ಬಂದಿ ಮಂಜುನಾಥ್‌ಗೆ ಈ ಕಾರು ನನ್ನದು ನಿಮ್ಮ ಬಳಿ ಹೇಗೆ ಬಂತು ಎಂದು ವಿಚಾರಿಸುವ ವೇಳೆ ಮಾತಿಗೆ ಮಾತು ಬೆಳೆದು ಪೊಲೀಸ್ ಸಿಬ್ಬಂದಿ ಗಿರೀಶ್‌ಗೆ ಹೊಡೆದಿದ್ದಾರೆ. ಈ ವಿಡಿಯೋ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿದ್ದು, ಪೊಲೀಸ್ ಸಿಬ್ಬಂದಿ ಮಂಜುನಾಥ್ ಅವರನ್ನು ಸಸ್ಪೆಂಡ್ ಮಾಡಲಾಗಿದೆ ಎಂದು ಹೇಳಿದ್ದಾರೆ.

# ಹಿಂಸಾತ್ಮಕ ಜಾಹೀರಾತುಗಳ ಪತ್ತೆಗೆ ಫೇಸ್‌ಬುಕ್ ವಿಫಲ

ಸ್ಯಾನ್ ಫ್ರಾನ್ಸಿಸ್ಕೋ, ಜೂ. 9 – ಹಿಂಸೆಗೆ ಪ್ರಚೋದಿಸುವ ದ್ವೇಷದ ಅಂಶವಿರುವ ಜಾಹೀರಾತುಗಳನ್ನು ಪತ್ತೆ ಮಾಡಲು ಫೇಸ್‌ಬುಕ್ ವಿಫಲವಾಗಿದೆ.

ಸರ್ಕಾರೇತರ ಸಂಸ್ಥೆಗಳಾದ ಗ್ಲೋಬಲ್ ವಿಟ್ನೆಸ್ ಹಾಗೂ ಫಾಕ್ಸ್‌ಗ್ಲೋವ್‌ಗಳು ಇಥಿಯೋಪಿಯಾ ದೇಶಕ್ಕೆ ಸಂಬಂಧಿಸಿದಂತೆ ಕೆಲ ಪ್ರಚೋದನಕಾರಿ ಜಾಹೀರಾತುಗಳನ್ನು ಪ್ರಕಟಿಸಲು ಅನುಮತಿ ಕೋರಿದ್ದವು. ಫೇಸ್‌ಬುಕ್ ದ್ವೇಷದ ಅಂಶಗಳನ್ನು ಗುರುತಿಸುತ್ತದೆಯೇ ಎಂಬುದನ್ನು ಈ ಸಂಘಟನೆಗಳು ಪರೀಕ್ಷಿಸಿದ್ದವು. ಆದರೆ, ಫೇಸ್‌ಬುಕ್ ಹಿಂಸಾತ್ಮಕ ಭಾಷೆಯನ್ನು ಗುರುತಿಸಲು ವಿಫಲವಾಗಿತ್ತು ಎಂದು ಶಿಳ್ಳೆಕಾರರಾದ ಫ್ರಾನ್ಸಿಸ್ ಹೌಗೆನ್ ಅವರು ಪಡೆದಿರುವ ಆಂತರಿಕ ದಾಖಲೆಗಳಲ್ಲಿ ತಿಳಿಸಲಾಗಿದೆ.

ಕಳೆದ ಮಾರ್ಚ್ ತಿಂಗಳಲ್ಲಿ ಗ್ಲೋಬಲ್ ವಿಟ್ನೆಸ್ ಸಂಸ್ಥೆ ಸಹ ಮ್ಯಾನ್‌ಮಾರ್‌ಗೆ ಸಂಬಂಧಿಸಿದಂತೆ ಇದೇ ರೀತಿಯ ಪರೀಕ್ಷೆ ನಡೆಸಿತ್ತು. ಆ ಪರೀಕ್ಷೆಯಲ್ಲೂ ಫೇಸ್‌ಬುಕ್ ವಿಫಲವಾಗಿತ್ತು.

ಇಥಿಯೋಪಿಯಾದ ಜನಾಂಗೀಯ ಸಮುದಾಯಗಳಾದ ಅಮ್ಹಾರಾ, ಒರೊಮೊ ಹಾಗೂ ಟಿಗ್ರಯಾನಾಗಳ ವಿರುದ್ಧ ಪ್ರಚೋದನಕಾರಿ ಅಂಶಗಳಿರುವ ಜಾಹೀರಾತುಗಳನ್ನು ಫೇಸ್‌ಬುಕ್‌ಗೆ ರವಾನಿಸಲಾಗಿತ್ತು. ಮ್ಯಾನ್‌ಮಾರ್ ರೀತಿಯಲ್ಲೇ ಇಥಿಯೋಪಿಯಾ ವಿಷಯದಲ್ಲೂ ದ್ವೇಷ ಜಾಹೀರಾತು ತಡೆಯಲು ಸಾಧ್ಯವಾಗಿರಲಿಲ್ಲ. ನಿಯಮ ಉಲ್ಲಂಘನೆ ಪತ್ತೆ ಮಾಡಲಾಗದೇ ಇರುವುದನ್ನು ಫೇಸ್‌ಬುಕ್ ಗಮನಕ್ಕೆ ತರಲಾಗಿತ್ತು. ಈ ಬಗ್ಗೆ ಪ್ರತಿಕ್ರಿಯೆ ನೀಡಿದ್ದ ಫೇಸ್‌ಬುಕ್, ಜಾಹೀರಾತುಗಳಿಗೆ ಅನುಮತಿ ಸಿಗಬಾರದಿತ್ತು. ದ್ವೇಷ ಹಾಗೂ ಪ್ರಚೋದನಕಾರಿ ಅಂಶ ತಡೆಯಲು ವ್ಯವಸ್ಥೆ ಬಲಪಡಿಸುತ್ತಿದ್ದೇವೆ ಎಂದು ಹೇಳಿತ್ತು.

ಫೇಸ್‌ಬುಕ್ ಈ ಹೇಳಿಕೆ ನೀಡಿದ ನಂತರ, ಗ್ಲೋಬಲ್ ವಿಟ್ನೆಸ್ ಸಂಸ್ಥೆಯು ದ್ವೇಷದ ಅಂಶ ಇರುವ ಇನ್ನೆರಡು ಜಾಹೀರಾತುಗಳನ್ನು ಕಳಿಸಿತ್ತು. ಇಥಿಯೋಪಿಯಾದಲ್ಲಿ ಹೆಚ್ಚು ಬಳಕೆಯಲ್ಲಿರುವ ಅಮ್ಹಾರಿಕ್ ಭಾಷೆಯಲ್ಲಿ ಜಾಹೀರಾತು ರವಾನಿಸಲಾಗಿತ್ತು. ಇವುಗಳಿಗೂ ಅನುಮತಿ ದೊರೆತಿತ್ತು.

ಜಾಹೀರಾತುಗಳು ಗುಪ್ತ ಲಿಪಿಯಲ್ಲಿ ಇರಲಿಲ್ಲ. ನೇರವಾದ ಭಾಷೆಯಲ್ಲೇ ಇದ್ದವು. ಇಂಥವರು ಮನುಷ್ಯರಲ್ಲ, ಇವರು ಹಸಿವಿನಿಂದ ಸಾಯಬೇಕು ಎಂದು ತಿಳಿಸಲಾಗಿತ್ತು ಎಂದು ಗ್ಲೋಬನ್ ವಿಟ್ನೆಸ್ ಪ್ರಚಾರಕರೊಬ್ಬರು ಹೇಳಿದ್ದಾರೆ.

# ನಗರದಲ್ಲಿ ಇಂದು ವಿಕಾಸ ತೀರ್ಥ ಬೈಕ್ ರ್‍ಯಾಲಿ, ಜಿಲ್ಲಾ ಕಾರ್ಯಕಾರಿಣಿ

ಜಿಲ್ಲಾ ಬಿಜೆಪಿ ಯುವ ಮೋರ್ಚಾ ವತಿಯಿಂದ ಇಂದು ವಿಕಾಸ ತೀರ್ಥ ಬೈಕ್ ರ್‍ಯಾಲಿ ಮತ್ತು ಜಿಲ್ಲಾ ಕಾರ್ಯಕಾರಿಣಿ ಸಭೆ ನಡೆಯಲಿದೆ. ಬೆಳಿಗ್ಗೆ 9.30 ಕ್ಕೆ ಬಂಬೂ ಬಜಾರ್ ಗಣೇಶ್ ಹೋಟೆಲ್ ವೃತ್ತದಿಂದ ಬೃಹತ್ ಬೈಕ್ ರ್‍ಯಾಲಿ ನಡೆಯಲಿದೆ. ನಂತರ ಬೆಳಿಗ್ಗೆ 11.30 ಕ್ಕೆ ದಾವಣಗೆರೆ-ಹರಿಹರ ಅರ್ಬನ್ ಬ್ಯಾಂಕ್ ಸಮುದಾಯ ಭವನದಲ್ಲಿ ಜಿಲ್ಲಾ ಯುವ ಮೋರ್ಚಾ ಕಾರ್ಯಕಾರಿಣಿ ಸಭೆ ನಡೆಯಲಿದ್ದು, ಸಂಸದ ಜಿ.ಎಂ. ಸಿದ್ದೇಶ್ವರ ಚಾಲನೆ ನೀಡುವರು. ಬಿಜೆಪಿ ರಾಜ್ಯ ಯುವ ಮೋರ್ಚಾ ಅಧ್ಯಕ್ಷ ಡಾ. ಕೆ.ಸಿ. ಸಂದೀಪ್ ಕುಮಾರ್, ಪ್ರಧಾನ ಕಾರ್ಯದರ್ಶಿ ಡಾ. ಮಲ್ಲಿಕಾರ್ಜುನ್ ಬಾಳೆಕಾಯಿ ಮತ್ತು ಇತರರು ಭಾಗವಹಿಸಲಿದ್ದಾರೆ.

# 12ರಂದು ದೈವಜ್ಞ ಬ್ರಾಹ್ಮಣ ಸಮಾಜದ ಸಭೆ

ದಾವಣಗೆರೆ, ಜೂ.8- ದೈವಜ್ಞ ಬ್ರಾಹ್ಮಣ ಸಮಾಜವನ್ನು ರಾಜ್ಯ ಮತ್ತು ರಾಷ್ಟ್ರ ಮಟ್ಟದಲ್ಲಿ ಪ್ರಬಲವಾಗಿ ಸಂಘಟಿಸುವ ನಿಟ್ಟಿನಲ್ಲಿ ದೈವಜ್ಞ ಬ್ರಾಹ್ಮಣ ಸಮಾಜದ ಸಭೆಯನ್ನು ಇದೇ ದಿನಾಂಕ 12ರ ಭಾನುವಾರ ಮಧ್ಯಾಹ್ನ 3 ಗಂಟೆಗೆ ಕಾರವಾರದ ದೈವಜ್ಞ ಭವನದಲ್ಲಿ ಕರೆಯಲಾಗಿದೆ.

ಉತ್ತರ ಕನ್ನಡ, ಹುಬ್ಬಳ್ಳಿ, ಧಾರವಾಡ, ಬೆಳಗಾವಿ, ದಾವಣಗೆರೆ, ಶಿವಮೊಗ್ಗ, ಬೆಂಗಳೂರು ಸೇರಿದಂತೆ, ವಿವಿಧ ಜಿಲ್ಲೆಗಳ ಮತ್ತು ತಾಲ್ಲೂಕು ಮಟ್ಟದ ದೈವಜ್ಞ ಬ್ರಾಹ್ಮಣ ಸಮಾಜದ ಪದಾಧಿಕಾರಿಗಳು ಮತ್ತು ಸರಾಫ್ ಸಂಘಟನೆ ಹಾಗೂ ಸಮಾಜದ ಪ್ರಮುಖರ ಸಂಘಟನಾ ಸಭೆ ಇದಾಗಿದೆ. ಈ ಎಲ್ಲಾ ಜಿಲ್ಲೆಗಳ ದೈವಜ್ಞ ಬ್ರಾಹ್ಮಣ ಸಮಾಜ ಬಾಂಧವರು ಈ ಸಭೆಯಲ್ಲಿ ಭಾಗವಹಿಸಿ, ಸಲಹೆ - ಸೂಚನೆ ನೀಡುವಂತೆ ದಾವಣಗೆರೆ ದೈವಜ್ಞ ಬ್ರಾಹ್ಮಣ ಸಮಾಜದ ಅಧ್ಯಕ್ಷ ಸತ್ಯನಾರಾಯಣ ಆರ್. ರಾಯ್ಕರ್ ಕೋರಿದ್ದಾರೆ. ರಾಜಕೀಯ ಪಕ್ಷಗಳಿಂದ ನಿರ್ಲಕ್ಷಿಸಲ್ಪಟ್ಟಿರುವ ದೈವಜ್ಞ ಬ್ರಾಹ್ಮಣ ಸಮಾಜದ ಪಾತ್ರವನ್ನು ಮುಂಬರುವ ವಿಧಾನಸಭೆ ಮತ್ತು ಲೋಕಸಭೆ ಚುನಾವಣೆಗಳಲ್ಲಿ ತೋರಿಸುವ ಬಗ್ಗೆ ಮತ್ತು ಆರ್ಥಿಕವಾಗಿ ಹಿಂದುಳಿದ ಸಮಾಜ ಬಾಂಧವರ ಸುಧಾರಣೆ ಮತ್ತು ಸಮಾಜದ ಅಭಿವೃದ್ಧಿ ಕುರಿತಂತೆ ಈ ಸಭೆಯಲ್ಲಿ ಚರ್ಚಿಸಲಾಗುತ್ತದೆ ಎಂದು ರಾಯ್ಕರ್ ತಿಳಿಸಿದ್ದಾರೆ.

ಸಭೆಯ ವಿವರಕ್ಕಾಗಿ ಗಂಗಾಧರ್ ಭಟ್ (94481-25833), ವಿವೇಕಾನಂದ ಬೈಕೇರಿಕರ (97438-95006), ಶ್ರೀಕಾಂತ್ ವೆರ್ಣೇಕರ್ (96869-21428), ಅನಮೋಲ್ ರೇವಣಕರ್ (99860-75580) ಅವರನ್ನು ಸಂಪರ್ಕಿಸುವಂತೆ ರಾಯ್ಕರ್ ವಿವರಿಸಿದ್ದಾರೆ.

# ಮಹಿಳಾ ಕ್ರೀಡಾಪಟು ಜೊತೆ ಅನುಚಿತ ವರ್ತನೆ : ದೂರು ದಾಖಲು

ನವದೆಹಲಿ, ಜೂ. 9 – ತರಬೇತುದಾರರೊಬ್ಬರು ಜರ್ಮನಿ ಪ್ರವಾಸದಲ್ಲಿ ತಮ್ಮೊಂದಿಗೆ ಅನುಚಿತವಾಗಿ ನಡೆದುಕೊಂಡಿದ್ದಾರೆ ಎಂದು ಮಹಿಳಾ ದೋಣಿ ಕ್ರೀಡಾ ಪಟುವೊಬ್ಬರು ದೂರಿದ್ದಾರೆ. ಕೆಲ ದಿನಗಳ ಹಿಂದಷ್ಟೇ ಮಹಿಳಾ ಸೈಕಲ್ ಸ್ಪರ್ಧಿಯೊಬ್ಬರು ತಮ್ಮ ತರಬೇತುದಾರನ ವಿರುದ್ಧ ಲೈಂಗಿಕ ಪೀಡನೆಯ ದೂರು ದಾಖಲಿಸಿದ್ದರು.

ಮಹಿಳಾ ಕ್ರೀಡಾಪಟು ತರಬೇತುದಾರನ ವಿರುದ್ಧ ಯಾಚಿಂಗ್ ಫೆಡರೇಷನ್ ಆಫ್ ಇಂಡಿಯಾ ಬಳಿ ಹಲವು ಬಾರಿ ದೂರು ಸಲ್ಲಿಸಿದ್ದರು. ಆದರೆ, ಈ ಬಗ್ಗೆ ಕ್ರಮ ತೆಗೆದುಕೊಂಡಿರಲಿಲ್ಲ. ನಂತರ ಅವರು ಭಾರತೀಯ ಕ್ರೀಡಾ ಪ್ರಾಧಿಕಾರಕ್ಕೆ ದೂರು ದಾಖಲಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ. ದೂರು ನೀಡಿದ ನಂತರವೂ ಕ್ರಮ ತೆಗೆದುಕೊಳ್ಳದೇ ಇರುವ ಬಗ್ಗೆ ಫೆಡರೇಷನ್ ಉತ್ತರ ನೀಡಬೇಕೆಂದು ಪ್ರಾಧಿಕಾರ ತಿಳಿಸಿದೆ. ಜರ್ಮನಿಯಲ್ಲಿ ತರಬೇತಿಗೆ ತೆರಳಿದ ಸಂದರ್ಭದಲ್ಲಿ ಈ ಘಟನೆ ನಡೆದಿದೆ ಎಂದು ದೂರಲಾಗಿದೆ.

## ಓದುಗರ ಪತ್ರ

### ನಾಗರಿಕ ಬಡಾವಣೆಯ ನರಕ ದರ್ಶನ

**ಮಾನ್ಯರೆ,**

ದಾವಣಗೆರೆ ಮಹಾನಗರ ಪಾಲಿಕೆ ವ್ಯಾಪ್ತಿಯ 40ನೇ ವಾರ್ಡ್‌ನ ವಿನಾಯಕ ಬಡಾವಣೆ 10ನೇ ಕ್ರಾಸ್‌ನ ರಸ್ತೆಯ ಡಾಂಬರೀಕರಣ ಕಾಮಗಾರಿ ಈಗ 2 ತಿಂಗಳಿಂದ ನಡೆಯತ್ತಲೇ ಇದೆ. ಸುಮಾರು 200 ಮೀಟರ್ ಕಾಮಗಾರಿಯ ಡಾಂಬರೀಕರಣಕ್ಕಾಗಿ ರಸ್ತೆಯನ್ನು ಜೆಸಿಬಿಯಿಂದ ಅಗೆದು ಮೆಟ್ಲಿಂಗ್ ಕಾರ್ಯವು ಅರೆ-ಬರೆ ನಡೆಯುತ್ತಿದೆ.

ಇಲ್ಲಿನ ನಾಗರಿಕರು ತಮ್ಮ ಮನೆಗಳಿಗೆ ವಾಹನಗಳನ್ನು ತೆಗೆದುಕೊಂಡು ಹೋಗಲು, ವೃದ್ಧರು ಆಸ್ಪತ್ರೆಗೆ ಚಿಕಿತ್ಸೆಗೆ ಹೋಗಲು, ಈ ಅರೆ-ಬರೆ ಕಾಮಗಾರಿಯಿಂದ ತುಂಬಾ ತೊಂದರೆಯಾಗುತ್ತಿದೆ. ಒಂದು ತಿಂಗಳಲ್ಲಿ ಎರಡು-ಮೂರು ದಿನಗಳು ಮಾತ್ರ ಕೆಲಸ ಮಾಡಿ ಹಾಗೆಯೇ ಬಿಟ್ಟಿರುತ್ತಾರೆ. ಯಾವುದೇ ಕಾಮಗಾರಿಯನ್ನು ಮುಕ್ತಾಯಗೊಳಿಸಲು ಕಾಲಮಿತಿ ಇರುವುದಿಲ್ಲವೇ? ನಾಗರಿಕರ ಗೋಳನ್ನು ಯಾರಿಗೆ ಹೇಳಬೇಕು.? ವಾರ್ಡ್‌ನ ಸದಸ್ಯರು, ಮಹಾಪೌರರು, ಆಯುಕ್ತರು, ಸಂಬಂಧಿಸಿದ ಇಂಜನಿಯರ್‌ರವರನ್ನು ಸಂಪರ್ಕಿಸಿದರೂ ಕೂಡಾ ಯಾವುದೇ ತುರ್ತು ಕ್ರಮ ತೆಗೆದುಕೊಂಡಿರುವುದಿಲ್ಲ. ಈ ಅರೆಬೆಂದ ಕಾಮಗಾರಿಗೆ ಮುಕ್ತಿಯೇ ಇಲ್ಲವೇ?

ಎಂ.ಬಸವರಾಜ, ನಿವೃತ್ತ ಖಜಾನೆ ಅಧಿಕಾರಿ, ದಾವಣಗೆರೆ.

# ಪ್ರಜಾಪ್ರಭುತ್ವದಲ್ಲಿ ಜನರ ಧ್ವನಿ ಅವಶ್ಯ

## ಹಿರಿಯ ನ್ಯಾಯವಾದಿ ಎಲ್.ಹೆಚ್.ಅರುಣ್‌ಕುಮಾರ್ ಅಭಿಮತ

ದಾವಣಗೆರೆ, ಜೂ. 9 - ಪ್ರಜಾ ಪ್ರಭುತ್ವದಲ್ಲಿ ಸರ್ಕಾರವು ಜನರಿಂದ, ಜನರಿಗಾಗಿ, ಜನರಿಗೋಸ್ಕರ ಇರಬೇಕು. ಆದರೆ, ಎಲ್ಲಿ ನೋಡಿದರೂ ಸಾರ್ವಜನಿಕರ ದನಿ ಇಲ್ಲದಂತಾಗಿದ್ದು, ಸ್ಥಳೀಯ ಸಂಸ್ಥೆಗಳಲ್ಲಿ ನಿರ್ಧಾರ ತೆಗೆದುಕೊಳ್ಳುವಲ್ಲಿ ಜನರ ಧ್ವನಿ ಅವಶ್ಯವಾಗಿದೆ ಎಂದು ಹಿರಿಯ ನ್ಯಾಯವಾದಿ ಎಲ್.ಹೆಚ್.ಅರುಣ್‌ಕುಮಾರ್ ಅಭಿಪ್ರಾಯಪಟ್ಟರು.



ನಗರದ ರೋಟರಿ ಬಾಲಭವನದಲ್ಲಿ ನೆರಳು ಬೀಡಿ ಕಾರ್ಮಿಕರ ಯೂನಿಯನ್ ವತಿಯಿಂದ ಗುರುವಾರ ಆಯೋಜಿಸಲಾಗಿದ್ದ ನಗರಾಡಳಿತದಲ್ಲಿ ಜನರ ಸಹಭಾಗಿತ್ವ ವಿಷಯ ಕುರಿತು ಇಂದು ಏರ್ಪಡಿಸಿದ್ದ ಅರಿವು ಕಾರ್ಯಕ್ರಮ ಮತ್ತು ವಿಚಾರ ಸಂಕಿರಣದಲ್ಲಿ ಮುಖ್ಯ ಅತಿಥಿಯಾಗಿ ಪಾಲ್ಗೊಂಡು ಅವರು ಮಾತನಾಡಿದರು.

ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ಮಹಾತ್ಮಾಗಾಂಧಿಯವರು ಜನರ ಮಾಲೀಕತ್ವ, ಭಾಗವಹಿಸುವಿಕೆ ಮತ್ತು ಸ್ಥಳೀಯ ಸಂಪನ್ಮೂಲಗಳು ಮತ್ತು ನಿರ್ಧಾರಗಳು ಜನರ ನಿಯಂತ್ರಣದಲ್ಲಿರುವ ಸ್ವರಾಜ್‌ಕ್ಕಾಗಿ ಹೋರಾಟ ರೂಪಿಸಿದರು. ಆದರೆ ಇಂದು ಆಡಳಿತ ವ್ಯವಸ್ಥೆಯಲ್ಲಿ ಜನರ ಭಾಗವಹಿಸು ವಿಕೆ ಇಲ್ಲದಂತಾಗಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಜನರಿಗೆ ಅಧಿಕಾರ ನೀಡುವ ಸಲುವಾಗಿ ನಗರ ಪಾಲಿಕೆ ಕಾಯದೆ 1992ನ್ನು ಜಾರಿಗೆ ತರಲಾಯಿತು. ಈ ಕಾಯಿದೆ ಉದ್ದೇಶ ಆರ್ಥಿಕ ಅಭಿವೃದ್ಧಿ ಮತ್ತು ಸಾಮಾಜಿಕ ನ್ಯಾಯಕ್ಕೆ ಯೋಜನೆಗಳನ್ನು ರೂಪಿಸುವುದಾಗಿತ್ತು. ನಂತರ 2011ರಲ್ಲಿ ರಾಜ್ಯದಲ್ಲಿ ಹೊರಡಿಸಿದ ಕರ್ನಾಟಕ ಮಹಾನಗರ ಪಾಲಿಕೆ ತಿದ್ದುಪಡಿ ಕಾಯಿದೆ ಪ್ರಕಾರ ಏರಿಯಾ ಸಭೆಗಳು ಮತ್ತು ವಾರ್ಡ್ ಸಮಿತಿಗಳ ಮೂಲಕ ನಾಗರಿಕರ ಭಾಗವಹಿಸುವಿಕೆಗೆ ಪ್ರಾಮುಖ್ಯತೆ ನೀಡಲಾಯಿತು. ಆದರೆ, ಈ ಕಾಯಿದೆಗಳ ಅನುಷ್ಠಾನ ಆಗುತ್ತಿಲ್ಲ ಎಂದರು.

ಜನರಿಗೆ ಅಧಿಕಾರ ನೀಡದೇ ಇರುವುದರ ಫಲಿತಾಂಶವಾಗಿ ಕುಡಿವ ನೀರು, ಚರಂಡಿ, ಒಳಚರಂಡಿ ವ್ಯವಸ್ಥೆಗಳನ್ನು ಸಮರ್ಪಕವಾಗಿ ಒದಗಿಸಲು ಸಾಧ್ಯವಾಗುತ್ತಿಲ್ಲ. ಮಕ್ಕಳಿಗೆ ಅಂಗನವಾಡಿ ಸೌಲಭ್ಯಗಳು ದೊರೆಯುತ್ತಿಲ್ಲ. ಅನೇಕ ಸರ್ಕಾರಿ ಶಾಲೆಗಳಲ್ಲಿ ಮೂಲಭೂತ ಸೌಲಭ್ಯಗಳಿಲ್ಲ. ಬಹುತೇಕ ಸರ್ಕಾರಿ ಆಸ್ಪತ್ರೆಯಲ್ಲಿ ಸಿಬ್ಬಂದಿ, ಔಷಧಿ ಕೊರತೆ ಇದೆ. ಇವುಗಳೆಲ್ಲವುಗಳ ನಿವಾರಣೆಗೆ ಜನರ ಭಾಗವಹಿಸುವಿಕೆ ಅತಿಮುಖ್ಯ ಎಂದರು.

ಬೆಂಗಳೂರಿನ ಸಿವಿಕ್ ಸಂಸ್ಥೆಯ ಸಂಚಾಲಕ ಲಕ್ಷ್ಮಿ ಕಾಂತ್ ಮಾತನಾಡಿ, ಸಂವಿಧಾನದ 74ನೇ ಪರಿಚ್ಛೇದಕ್ಕೆ ತಿದ್ದುಪಡಿ ತರುವ ಮೂಲಕ ಸ್ಥಳೀಯ ಸಂಸ್ಥೆಯಲ್ಲಿ ಸಾರ್ವಜನಿಕರ ಸಹಭಾಗಿತ್ವಕ್ಕೆ ಅವಕಾಶ ಮಾಡಿಕೊಡಲಾಗಿದೆ. ವಾರ್ಡ್ ಸಮಿತಿಯಲ್ಲಿ ಜನರು ಇರಬೇಕು. ವಾರ್ಡ್ ಸಮಿತಿ ಸಭೆಯಲ್ಲಿ ಆಯಾ ಏರಿಯಾದಲ್ಲಿ ನಡೆಸುವ ಕಾಮಗಾರಿ, ಬಿಡುಗಡೆಯಾದ ಅನುದಾನ, ಮೂಲಭೂತ ಸೌಕರ್ಯಗಳ ಕುರಿತಂತೆ, ಪ್ರಶ್ನೆ ಮಾಡಬಹುದು. ಆದರೆ, ಸಾರ್ವಜನಿಕರಿಗೆ ಕಾಯ್ದೆ ಯ ಬಗ್ಗೆ ಹೆಚ್ಚಿನ ಮಾಹಿತಿ ಇಲ್ಲ. ಹಾಗಾಗಿ ನಗರಾಡಳಿತದಲ್ಲಿ ಜನರ ಸಹಭಾಗಿತ್ವ ಹೆಚ್ಚಾಗಿ ಕಂಡು ಬರುತ್ತಿಲ್ಲ ಎಂದು ತಿಳಿಸಿದರು.

ನೆರಳು ಬೀಡಿ ಕಾರ್ಮಿಕರ ಅಸೋಸಿಯೇಷನ್ ಅಧ್ಯಕ್ಷೆ ಜಬೀನಾಖಾನಂ ಅಧ್ಯಕ್ಷತೆ ವಹಿಸಿದ್ದರು. ಎಂ.ಕರಿಬಸಪ್ಪ ನಿರೂಪಿಸಿದರು.

# ಕೃಷಿ ಉತ್ಪನ್ನಗಳಿಗೆ ಬೆಂಬಲ ಬೆಲೆ ಏರಿಕೆಗೆ ಸ್ವಾಗತ

ದಾವಣಗೆರೆ, ಜೂ.9- ಕೇಂದ್ರ ಸರ್ಕಾರವು 14 ಕೃಷಿ ಉತ್ಪನ್ನಗಳಿಗೆ ಬೆಂಬಲ ಬೆಲೆ ಏರಿಕೆ ಮಾಡಿರುವ ಕ್ರಮವನ್ನು ಭಾರತೀಯ ರೈತ ಒಕ್ಕೂಟದ ಜಿಲ್ಲಾಧ್ಯಕ್ಷ ಹೆಚ್.ಆರ್. ಲಿಂಗರಾಜ್ ಸ್ವಾಗತಿಸಿದ್ದಾರೆ.

ಆದರೆ ಈ ಬೆಲೆ ಏರಿಕೆಯು ಶೇ. 30 ರಷ್ಟು ಖರೀದಿ ಕೇಂದ್ರಗಳ ಮೂಲಕ ಖರೀದಿಸುವುದಾಗಲೀ ಈ ಕಾನೂನಿಗೆ ಬಲ ಕೊಡುವುದಾಗಲೀ ಮಾಡದಿದ್ದರೆ ಇದು ಕೇವಲ ಪುಸ್ತಕದ ಬದನೆಕಾಯಿಯಾಗಿ ಉಳಿಯುತ್ತದೆ.

ಈ ವರ್ಷ ಕರ್ನಾಟಕದಲ್ಲಿ ಬೆಂಬಲ ಬೆಲೆಗಿಂತ ಕಡಿಮೆ ಬೆಲೆಗೆ ಕೃಷಿ ಉತ್ಪನ್ನಗಳು ಮಾರಾಟವಾಗಿವೆ. ಏನೇ ಮನವಿ ಕೊಟ್ಟರೂ ಪ್ರಯೋಜನವಾಗಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದ್ದಾರೆ.


# ನಗರದಲ್ಲಿ ಆಜಾದಿ ಕಾ ಅಮೃತ್ ಮಹೋತ್ಸವ್


ಭಾರತದ 75 ವರ್ಷಗಳ ಸ್ವಾತಂತ್ರ್ಯ ಮತ್ತು ಅದರ ಅಭಿವೃದ್ಧಿ ಹೊಂದುತ್ತಿರುವ ಬಂಡವಾಳ ಮಾರುಕಟ್ಟೆಗಳ ಸಂಭ್ರಮಾಚರಣೆಯ ಆಜಾದಿ ಕಾ ಅಮೃತ್ ಮಹೋತ್ಸವ್ ಸಮ್ಮೇಳನ (ಮಾರುಕಟ್ಟೆಗಳ ಮೂಲಕ ಸಂಪತ್ತಿನ ಸೃಷ್ಟಿ) ಇಂದು ಸಂಜೆ 4 ರಿಂದ 6 ರವರೆಗೆ ಜಿಲ್ಲಾಡಳಿತ ಭವನದ ತುಂಗಭದ್ರಾ ಸಭಾಂಗಣದಲ್ಲಿ ನಡೆಯಲಿದೆ.

ಎಲ್ಲಾ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳನ್ನು ಒಳಗೊಂಡಂತೆ 75 ನಗರಗಳಲ್ಲಿ ಬೃಹತ್ ಪ್ರಮಾಣದಲ್ಲಿ ಆಯೋಜನೆ ಮಾಡಲಾಗಿದೆ.

ಆನ್‌ಲೈನ್ ಮತ್ತು ಆಫ್‌ಲೈನ್ ಮೂಲಕ ಚರ್ಚೆ ನಡೆಯಲಿದ್ದು, ಕೇಂದ್ರ ಹಣಕಾಸು ಮತ್ತು ಕಾರ್ಪೊರೇಟ್ ವ್ಯವಹಾರಗಳ ಖಾತೆ ಸಚಿವೆ ನಿರ್ಮಲಾ ಸೀತಾರಾಮನ್ ಉದ್ಘಾಟನಾ ಭಾಷಣ ಮಾಡಲಿದ್ದಾರೆ. ಕೇಂದ್ರ ಹಣಕಾಸು ರಾಜ್ಯ ಸಚಿವ ಡಾ. ಭಾಗವತ್ ಕಿಶಾನ್ ರಾವ್ ಕಾರಡ್ ಉಪಸ್ಥಿತರಿರುವರು.


॥ ಶ್ರೀ ಕದರಮಂಡಲಗಿ ಆಂಜನೇಯ ಪ್ರಸನ್ನ ॥ ॥ ಶ್ರೀ ಚಂದ್ರಗುತ್ತೆಮ್ಮ ದೇವಿ ಪ್ರಸನ್ನ ॥





**ಕೈಲಾಸ ಸಮಾರಾಧನೆ ಆಹ್ವಾನ**



ದಾವಣಗೆರೆ ಜಿಲ್ಲೆ ಹರಿಹರ ತಾಲ್ಲೂಕು ದೇವರಬೆಳಕೆರೆ ಗ್ರಾಮದ ವಾಸಿ

**ಶ್ರೀ ಎ.ಆರ್. ಶೇಖರಪ್ಪ ಮತ್ತು ಸಹೋದರರು ಮಾಡುವ ವಿಜ್ಞಾಪನೆಗಳು.**

ದಿನಾಂಕ : 02.062022ನೇ ಗುರುವಾರ ಮಧ್ಯಾಹ್ನ 12.30ಕ್ಕೆ ನಮ್ಮ ಪೂಜ್ಯ ತಾಯಿಯವರಾದ

**ಶ್ರೀಮತಿ ಸಿದ್ದಮ್ಮ ದ್ಯಾವಕ್ಕರ ರಾಮಪ್ಪ**

ಇವರು ಶಿವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ

**ಕೈಲಾಸ ಸಮಾರಾಧನೆಯನ್ನು**

ದಿ. : 10.06.2022ನೇ ಶುಕ್ರವಾರ ಬೆಳಗ್ಗೆ 10.30 ಗಂಟೆಗೆ ದೇವರಬೆಳಕೆರೆ ಗ್ರಾಮದ ಮೃತರ ಸ್ವಗೃಹದಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು : **ಶ್ರೀ ಎ.ಆರ್. ಮಹೇಶ್ವರಪ್ಪ, ಶ್ರೀಮತಿ ಚೌಡಮ್ಮ, ಶ್ರೀಮತಿ ಸುಜಾತ ಮತ್ತು ಅಳಿಯಂದಿರು ಸೊಸೆಯಂದಿರು, ಮಕ್ಕಳು, ಮೊಮ್ಮಕ್ಕಳು ಹಾಗೂ ಬಂಧು-ಮಿತ್ರರು, ಫೋ. : 99028 55071, 95919 12627**

ವಿ.ಸೂ. : ಆಹ್ವಾನ ಪತ್ರಿಕೆ ತಲುಪದೇ ಇರುವವರು ಇದನ್ನೇ ವೈಯಕ್ತಿಕ ಆಹ್ವಾನವೆಂದು ಭಾವಿಸಿ ಆಗಮಿಸಬೇಕಾಗಿ ವಿನಂತಿ.



**16ನೇ ವಾರ್ಷಿಕ ಪುಣ್ಯಸ್ಮರಣೆ**



ಬಿ. ಕೋಗಾಚಾರ್
(ಮರಣ : 10-06-2006)



ಶ್ರೀಮತಿ ಲೀಲಾವತಿ ಕೋಗಾಚಾರ್
(ಮರಣ: 9.2.2006)

ಹುಟ್ಟುವಾಗ ಉಸಿರಿತ್ತು ಹೆಸರಿರಲಿಲ್ಲ. ಸಾಯುವಾಗ ಹೆಸರಿತ್ತು ಉಸಿರು ಇರಲಿಲ್ಲ. ಹುಟ್ಟು-ಸಾವುಗಳ ನಡುವೆ ನೀವು ಬಿಟ್ಟು ಹೋದ ಆದರ್ಶಗಳೇ ನಮಗೆ ದಾರಿದೀಪ

ಅಗಲಿದ ನಿಮ್ಮ ದಿವ್ಯಾತ್ಮಕ್ಕೆ ಭಗವಂತನಲ್ಲಿ ಸದಾ ಚಿರಶಾಂತಿಯನ್ನು ಪ್ರಾರ್ಥಿಸುವ ಮಕ್ಕಳಾದ

**ರವಿಚಂದ್ರ, ಬಿ.ಕೋಗಾಚಾರ್ ಆಭರಣ ತಯಾರಕರು,**
ಕಾಯಿಪೇಟೆ, ದಾವಣಗೆರೆ. ಮೊ. **98443 28445**



॥ ಶ್ರೀ ಆಂಜನೇಯ ಸ್ವಾಮಿ ಪ್ರಸನ್ನ ॥

**ಕೈಲಾಸ ಶಿವಗಣಾರಾಧನೆ ಆಹ್ವಾನ**



ದಾವಣಗೆರೆ ಜಿ॥ ಮತ್ತು ತಾಲ್ಲೂಕು ಶಿರಮಗೊಂಡನಹಳ್ಳಿ ಗ್ರಾಮದ ವಾಸಿ
**ದಿ॥ ಕೋಟ್ಯಾಳ್ ಜಯದೇವಪ್ಪನವರ** ಮಗನಾದ **ಶ್ರೀ ಕೆ.ಜೆ. ರೇವಣಸಿದ್ದಪ್ಪ**
ಇವರು ಮಾಡುವ ವಿಜ್ಞಾಪನೆಗಳು.
ದಿನಾಂಕ :02.06.2022ನೇ ಗುರುವಾರ ಬೆಳಗಿನ ಜಾವ 3.30ಕ್ಕೆ ನನ್ನ ಮಗನಾದ

**ಶ್ರೀ ಕೆ.ಆರ್. ವಿನಯ್‌ಕುಮಾರ್**

ಇವರು ಲಿಂಗೈಕ್ಯರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ

**"ಕೈಲಾಸ ಶಿವಗಣಾರಾಧನೆ"ಯನ್ನು**

**ದಿನಾಂಕ : 10.06.2022ನೇ ಶುಕ್ರವಾರ ಬೆಳಿಗ್ಗೆ 10.30ಕ್ಕೆ ಸದ್ಯೋಜಾತ ಮಠ ಎಂ.ಸಿ.ಸಿ. "ಬಿ" ಬ್ಲಾಕ್, ಗುಂಡಿ ಛತ್ರದ ಹಿಂಭಾಗ, ದಾವಣಗೆರೆಯಲ್ಲಿ** ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು :

ತಂದೆ-ತಾಯಿ : ಶ್ರೀಮತಿ ಸೌಭಾಗ್ಯಮ್ಮ ಶ್ರೀ ಕೆ.ಜೆ. ರೇವಣಸಿದ್ದಪ್ಪ ಮತ್ತು ಮಕ್ಕಳು
ಧರ್ಮಪತ್ನಿ : ಶ್ರೀಮತಿ ಪವಿತ್ರ ಮತ್ತು ಮಕ್ಕಳು
ಅಳಿಯಂದಿರು, ಮಕ್ಕಳು, ಮೊಮ್ಮಕ್ಕಳು
ಕರಿಯಪ್ಪರ ವಂಶಸ್ಥರು ಹಾಗೂ ಬಂಧು-ಮಿತ್ರರು, ಶಿರಮಗೊಂಡನಹಳ್ಳಿ.

ವಿ.ಸೂ. : ಇದನ್ನೇ ವೈಯಕ್ತಿಕ ಆಹ್ವಾನವೆಂದು ಭಾವಿಸಿ, ಆಗಮಿಸಬೇಕಾಗಿ ವಿನಂತಿ.

## ಕಣ್ವಕುಪ್ಪೆ ಗವಿಮಠದಲ್ಲಿ 12 ರಂದು ಆಚಾರ ಸಂವರ್ಧನಾ ಕಾರ್ಯಕ್ರಮ




ದಾವಣಗೆರೆ, ಜೂ.9- ತಪೋಕ್ಷೇತ್ರ ಕಣ್ವಕುಪ್ಪೆ ಗವಿ ಮಠದಲ್ಲಿ ಇದೇ ದಿನಾಂಕ 12ರ ಭಾನುವಾರದಿಂದ ಆಚಾರ ಸಂವರ್ಧನಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ಶ್ರೀ ನಾಲ್ವಡಿ ಶಾಂತಲಿಂಗ ಶಿವಾಚಾರ್ಯ ಸ್ವಾಮೀಜಿ (ಕೇದಾರ ಪೀಠ) ದಿವ್ಯ ಸಾನ್ನಿಧ್ಯದಲ್ಲಿ ಕಾರ್ಯಕ್ರಮ ನಡೆಯುವುದು.

ಅಂದು ಪ್ರಾತಃಕಾಲ 5.45 ರಿಂದ ಮಹಾಸಂಕಲ್ಪ, ಕ್ಷೇತ್ರದ ಕರ್ತೃ ಗದ್ದುಗೆ ಗಳಿಗೆ ರುದ್ರಾಭಿಷೇಕ, ಬೆಳಿಗ್ಗೆ 6.30 ಕ್ಕೆ ಇಷ್ಟಲಿಂಗ ಪೂಜೆ, ರುದ್ರಾಭಿಷೇಕ, ಶಿವಾಷ್ಟೋತ್ತರ ಮಹಾಮಂಗಲ, ಬೆಳಿಗ್ಗೆ 9.30 ಕ್ಕೆ ತೀರ್ಥ ಪ್ರಸಾದ ಜರುಗುತ್ತದೆ. ಬೆಳಿಗ್ಗೆ 9.35 ರಿಂದ ಕರ್ತೃಗದ್ದುಗೆಗಳಿಗೆ ಮಂಗಲ ಮಹಾಮಂಗಳಾರತಿ, ಶ್ರೀಗಳೊಂದಿಗೆ ಗದ್ದುಗೆ ದರ್ಶನ, ಬೆಳಿಗ್ಗೆ 10.15 ರಿಂದ ಆಸಕ್ತ ಆಚಾರವಂತರಿಗೆ ಮಂತ್ರೋಪದೇಶ, ಬೆ. 11.15 ಕ್ಕೆ ಸಾಮೂಹಿಕ ಗುರುಪಾದ ಪೂಜೆ, ಮಧ್ಯಾಹ್ನ 12 ಗಂಟೆಗೆ ಗುರುವರ್ಯರಿಂದ ಧರ್ಮೋಪದೇಶ, ಗುರುದರ್ಶನ ಹಾಗೂ ಕೇದಾರನಾಥನ ಪ್ರಸಾದ ಸ್ವೀಕಾರ ನಡೆಯಲಿವೆ. ಮಧ್ಯಾಹ್ನ 1 ಗಂಟೆಗೆ ಮಹಾಪ್ರಸಾದ ಜರುಗುತ್ತದೆ.

## ರಾಷ್ಟ್ರೀಯ ಶಿಕ್ಷಣ ನೀತಿ : ಡಾ. ವಾಮದೇವಪ್ಪಗೆ ಅಭಿನಂದನೆ



ದಾವಣಗೆರೆ, ಜೂ.9- ಸಾರ್ವಜನಿಕ ಶಿಕ್ಷಣ ಇಲಾಖೆ ವತಿಯಿಂದ ಶ್ರೀ ತರಳಬಾಳು ಜಗದ್ಗುರು ವಿದ್ಯಾಸಂಸ್ಥೆಯ ಆಡಳಿತಾಧಿಕಾರಿ ಡಾ.ಎಚ್.ವಿ. ವಾಮದೇವಪ್ಪ ಅವರನ್ನು ಬೆಂಗಳೂರಿನಲ್ಲಿ ಕಳೆದ ವಾರ ನಡೆದ ಸಮಾರಂಭದಲ್ಲಿ ಶಿಕ್ಷಣ ಸಚಿವ ಬಿ.ಸಿ. ನಾಗೇಶ್ ಅಭಿನಂದಿಸಿದರು.

ರಾಷ್ಟ್ರೀಯ ಶಿಕ್ಷಣ ನೀತಿ-2020ನ್ನು ಕರ್ನಾಟಕ ರಾಜ್ಯದಲ್ಲಿ ಅನುಷ್ಠಾನಗೊಳಿಸುವ ಹಿನ್ನೆಲೆಯಲ್ಲಿ ನಿಲುವು ಲೇಖನಗಳನ್ನು ಸಿದ್ಧಪಡಿಸಲು ರಾಜ್ಯಮಟ್ಟದಲ್ಲಿ ವಿವಿಧ ಸಮಿತಿಗಳನ್ನು ರಚಿಸಲಾಗಿತ್ತು. ಪೂರ್ವ ಪ್ರಾಥಮಿಕ ಶಿಕ್ಷಣ, ಶಾಲಾ ಶಿಕ್ಷಣ, ಶಿಕ್ಷಕರ ಶಿಕ್ಷಣ ಮತ್ತು ವಯಸ್ಕರ ಶಿಕ್ಷಣಕ್ಕೆ ಸಂಬಂಧಿಸಿದಂತೆ ನಿಲುವು ಲೇಖನಗಳನ್ನು ಸಿದ್ಧಪಡಿಸುವ ಸಮಿತಿಗೆ ಡಾ. ಎಚ್. ವಿ. ವಾಮದೇವಪ್ಪ ಮುಖ್ಯಸ್ಥರಾಗಿದ್ದರು. ರಾಜ್ಯದಲ್ಲಿ ಶಿಕ್ಷಕರ ಶಿಕ್ಷಣವನ್ನು ಬುನಾದಿ ಹಂತ, ಪ್ರಾಥಮಿಕ ಹಂತ, ಮಾಧ್ಯಮಿಕ ಹಂತ, ಸೆಕೆಂಡರಿ ಹಂತಗಳಲ್ಲಿ ಜಾರಿಗೊಳಿಸುವ ಕ್ರಮದ ಬಗ್ಗೆ ಡಾ. ವಾಮದೇವಪ್ಪ ವರದಿ ತಯಾರಿಸಿ, ರಾಜ್ಯ ಸರ್ಕಾರಕ್ಕೆ ಎನ್‌ಸಿಇಆರ್‌ಟಿಗೆ ಸಲ್ಲಿಸಿದ್ದರು. ರಾಷ್ಟ್ರೀಯ ಶಿಕ್ಷಣ ನೀತಿಯ ವಿವಿಧ ವಿಭಾಗ ಗಳಿಗೆ ಪೊಸಿಷನ್ ಪೇಪರನ್ನು ಸಿದ್ಧಗೊಳಿಸಿದ ವಿವಿಧ ಸಮಿತಿಗಳ ಮುಖ್ಯಸ್ಥರನ್ನು ಮತ್ತು ಸದಸ್ಯರನ್ನು ಸಹ ಅಭಿನಂದಿಸಲಾಯಿತು.

ಸಮಾರಂಭದ ಅಧ್ಯಕ್ಷತೆಯನ್ನು ಶಿಕ್ಷಣ ಸಚಿವ ಬಿ.ಸಿ. ನಾಗೇಶ್ ವಹಿಸಿದ್ದರು. ಶಿಕ್ಷಣ ಇಲಾಖೆಯ ಕಾರ್ಯದರ್ಶಿ ಸೆಲ್ವಕುಮಾರ್, ರಾಷ್ಟ್ರೀಯ ಶಿಕ್ಷಣ ನೀತಿ ಅನುಷ್ಠಾನ ಕಾರ್ಯಪಡೆಯ ಮುಖ್ಯಸ್ಥ ಮದನಗೋಪಾಲ್ ಮತ್ತು ಡಿಎಸ್‌ಇಆರ್‌ಟಿಯ ನಿರ್ದೇಶಕರಾದ ಸುಮಂಗಲ ಭಾಗವಹಿಸಿದ್ದರು.

## 'ಸರಸ್ವತಿ ಸಿರಿ' ಪ್ರಶಸ್ತಿಗೆ ಜಯಲಕ್ಷ್ಮಿ ಆಯ್ಕೆ



ದಾವಣಗೆರೆ, ಜೂ. 9- ನಗರದ ಕಲಾಕುಂಚ ಸಾಂಸ್ಕೃತಿಕ ಸಂಸ್ಥೆಯು ಪ್ರತೀ ವರ್ಷ ಒಬ್ಬ ಸಾಧಕರನ್ನು ಗುರುತಿಸಿ 'ಸರಸ್ವತಿ ಸಿರಿ' ಪ್ರಶಸ್ತಿ ಪ್ರದಾನ ಮಾಡಲಾಗುತ್ತಿದೆ. ಈ ಬಾರಿ ಕೇರಳ ರಾಜ್ಯದ ಕಾಸರಗೋಡು ಜಿಲ್ಲೆಯ ಮಂಗಲ್ಪಾಡಿಯ ಹಿರಿಯ ಯಕ್ಷಗಾನ ವಿದ್ವಾಂಸರೂ, ಯಕ್ಷಗಾನ ತಾಳಮದ್ದಳೆಯ ಪ್ರಕಾರಗಳಲ್ಲಿ ಮಕ್ಕಳನ್ನು, ಮಹಿಳೆಯರನ್ನು ಪ್ರೇರೇಪಿಸಿ ಮುಂಚೂಣಿಯಲ್ಲಿ ತಂದಂತಹ ಸ್ವತಃ ಯಕ್ಷಗಾನ ಅರ್ಥದಾರಿ ಶ್ರೀಮತಿ ಜಯಲಕ್ಷ್ಮಿ ಕಾರಂತ್ ಅವರನ್ನು ಆಯ್ಕೆ ಮಾಡಲಾಗಿದೆ ಎಂದು ಕಲಾಕುಂಚ ಸಾಂಸ್ಕೃತಿಕ ಸಂಸ್ಥೆಯ ಸಂಸ್ಥಾಪಕ ಸಾಲಿಗ್ರಾಮ ಗಣೇಶ್ ಶೆಣೈ ತಿಳಿಸಿದ್ದಾರೆ.

# ಮೌಢ್ಯತೆ, ಕಂದಾಚಾರ ತೊಲಗಲು ಪ್ರೊ. ಕೃಷ್ಣಪ್ಪರ ವಿಚಾರಧಾರೆ ಅಗತ್ಯ

### ಪ್ರೊ.ಬಿ. ಕೃಷ್ಣಪ್ಪ ಅವರ 85 ನೇ ಜಯಂತಿ ಸಮಾರಂಭದಲ್ಲಿ ಎಸ್.ಎಂ.ವೀರೇಶ್



ಹರಿಹರ,ಜೂ.9- ಪ್ರೊ. ಬಿ. ಕೃಷ್ಣಪ್ಪನವರಂತಹ ಮಹಾನ್ ನಾಯಕರ ಚಿಂತನೆಗಳು ಜನರ ಬದುಕಿನ ಅವಿಭಾಜ್ಯ ಅಂಗವಾಗಬೇಕು ಎಂದು ಜಿಲ್ಲಾ ಬಿಜೆಪಿ ಅಧ್ಯಕ್ಷ ಹನಗವಾಡಿ ಎಸ್. ಎಂ. ವೀರೇಶ್ ಹೇಳಿದರು.

ನಗರದ ಹೊರವಲಯದ ಮೈತ್ರಿವನದ ಸಮಾಧಿ ಬಳಿ ಪ್ರೊ. ಬಿ. ಕೃಷ್ಣಪ್ಪನವರ 85 ನೇ ಜಯಂತಿ ಆಚರಣೆ ನಿಮಿತ್ತವಾಗಿ ಸಮಾಧಿಗೆ ಪುಷ್ಪಾರ್ಚನೆ ಮಾಡಿ ಅವರು ಮಾತನಾಡಿದರು.

ಆಧುನಿಕ ಪ್ರಪಂಚದಲ್ಲಿ ಭಾರತ ಬಹಳಷ್ಟು ಮುಂದಿದ್ದರೂ ಸಹ ಇನ್ನೂ ಮೌಢ್ಯತೆ, ಕಂದಾಚಾರ ದಿಂದಾಗಿ ಸುಧಾರಣೆ ಕಾಣುವಲ್ಲಿ ಹಿನ್ನಡೆಯಾಗಿದೆ. ಅವುಗಳನ್ನು ತೊಲಗಿಸಬೇಕಾದರೆ ಪ್ರೊ. ಬಿ. ಕೃಷ್ಣಪ್ಪನವರ ವಿಚಾರಧಾರೆಗಳು ಜನರ ಮಧ್ಯದಲ್ಲಿ ಪ್ರಕಾಶಿಸಬೇಕು. ಅವರ ಆದರ್ಶಗಳು ಬರೀ ಪುಣ್ಯತಿಥಿ, ಜಯಂತಿ ದಿನ ಸ್ಮರಣೆಗೆ ಸೀಮಿತವಾಗಬಾರದು ಎಂದು ಹೇಳಿದರು.

ಬಿಜೆಪಿ ಮುಖಂಡ ಚಂದ್ರಶೇಖರ್ ಪೂಜಾರ್ ಮಾತನಾಡಿ, ಪ್ರೊ. ಬಿ. ಕೃಷ್ಣಪ್ಪನವರನ್ನು ಕರ್ನಾಟಕದ ಅಂಬೇಡ್ಕರ್ ಎಂದೇ ಕರೆಯುತ್ತಾರೆ ಎಂದರೆ ಅವರು ಎಂತಹ ಹೋರಾಟದ ಗುಣಗಳನ್ನು ಹೊಂದಿದ್ದರು ಎನ್ನುವುದು ತಿಳಿಯುತ್ತದೆ. ಇಂತಹ ಮಹಾನ್ ನಾಯಕರು ನಮ್ಮ ನಗರದವರು ಎಂದು ಹೇಳಲು ನಮಗೆ ಹೆಮ್ಮೆ ಅನಿಸುತ್ತದೆ. ಹಾಗಾಗಿ ಈಗಿನ ಯುವಕರು ಅವರ ಹೋರಾಟದ ಆದರ್ಶ ಗುಣಗಳನ್ನು ತಮ್ಮ ಜೀವನದಲ್ಲಿ ಅಳವಡಿಕೊಳ್ಳುವಂತೆ ಹೇಳಿದರು.

ಕಾಂಗ್ರೆಸ್ ಪಕ್ಷದ ಮುಖಂಡ ನಂದಿಗಾವಿ ಶ್ರೀನಿವಾಸ್ ಮಾತನಾಡಿ, ಕೃಷ್ಣಪ್ಪನವರ ಕನಸು ನನಸು ಮಾಡುವಂತಹ ಕೆಲಸಗಳು ನಿರಂತರವಾಗಿ ನಡೆಯುವಂತಾಗಬೇಕು. ನಗರದ ಎ.ಕೆ. ಕಾಲೋನಿಯಲ್ಲಿ ಪ್ರೊ. ಬಿ. ಕೃಷ್ಣಪ್ಪನವರ ಮನೆ ಇದ್ದರೂ ಸಹ ಅಲ್ಲಿನ ಜನತೆಗೆ ಕೃಷ್ಣಪ್ಪನವರ ಹೋರಾಟದ ಬಗ್ಗೆ ಅನೇಕರಿಗೆ ತಿಳಿದಿಲ್ಲ, ಇನ್ನೂ ಮುಂದಾದರು ಬಡಾವಣೆಯ ಮನೆಯಿಂದ ಒಬ್ಬೊಬ್ಬ ಕೃಷ್ಣಪ್ಪನವರು ಹುಟ್ಟಿ ಬರುವಂತಾಗಲಿ ಎಂದು ಹೇಳಿದರು.

ಜಿಲ್ಲಾ ದಲಿತ ಸಂಘರ್ಷ ಸಮಿತಿ ಸಂಚಾಲಕ ಮಂಜುನಾಥ್ ಮಾತನಾಡಿ, ಕರ್ನಾಟಕದಲ್ಲಿ ದಲಿತ ಜನಾಂಗದ ಮೇಲೆ ನಡೆಯುತ್ತಿರುವ ದೌರ್ಜನ್ಯ, ದಬ್ಬಾಳಿಕೆ ವಿರುದ್ಧ ಪ್ರೊ ಬಿ. ಕೃಷ್ಣಪ್ಪ ಹೋರಾಟಕ್ಕೆ ಧುಮುಕಿದರು. ಇವರ ಹೋರಾಟದ ಫಲವಾಗಿ ಬೆತ್ತಲೆ ಸೇವೆ ನಿಷೇಧವಾಗಿದೆ. ಶಿಕ್ಷಣದಲ್ಲಿ ಹೋಬಳಿಗೊಂದು ಶಾಲೆ ತೆರೆಯುವಲ್ಲಿ ಅವರ ಪಾತ್ರ ದೊಡ್ಡದಾಗಿದೆ ಎಂದು ಹೇಳಿದರು.

ಎಪಿಎಂಸಿ ಮಾಜಿ ಅಧ್ಯಕ್ಷ ಮಂಜುನಾಥ್ ಪಾಟೀಲ್, ತಹಶೀಲ್ದಾರ್ ಬಿ.ಎಂ. ಅಶ್ವತ್ಥ್, ಹರಿಹರ ತಾಲ್ಲೂಕು ಸಂಚಾಲಕ ಪಿ.ಜೆ. ಮಹಾಂತೇಶ್, ದಾವಣಗೆರೆ ವಿಜಯಲಕ್ಷ್ಮಿ, ಎಸ್.ಎಂ. ಹನುಮಂತಪ್ಪ ಹರಳಹಳ್ಳಿ, ಸಾಹಿತಿ ಹುಲಿಕಟ್ಟಿ ಚೆನ್ನಬಸಪ್ಪ, ಎಂ. ಚಿದಾನಂದ ಕಂಚಿಕೇರಿ, ಜೆ. ಕಲೀಂಬಾಷಾ, ಜಿಗಳಿ ಆನಂದಪ್ಪ, ಶಶಿಕುಮಾರ್, ನಿಂಗರಾಜ್, ದೊಡ್ಡಪ್ಪ, ಪ್ರದೀಪ್, ಪರಶುರಾಮ್, ಚೌಡಪ್ಪ ಭಾನುವಳ್ಳಿ, ಗುಡದಹಳ್ಳಿ ಮಂಜಪ್ಪ, ಪ್ರಸನ್ನ, ಎಂ.ಜಯಣ್ಣ, ಕುಮಾರ್ ಸ್ವಾಮಿ, ವಾಸು ಕುಂಬಳೂರು, ಜಿಗಳಿ ಪ್ರಕಾಶ್, ಲಲಿತಮ್ಮ ಹಡಗಲಿ ಹಾಗು ಇತರರು ಹಾಜರಿದ್ದರು.

## ಗ್ರಾಮಾಂತರ ಪ್ರದೇಶಗಳಲ್ಲಿ ಇಂದು ವಿದ್ಯುತ್ ವ್ಯತ್ಯಯ

ಹೆಬ್ಬಾಳು, ಆರಾಧ್ಯ ಕೈಗಾರಿಕೆ, ನೀರ್ಥಡಿ, ಶಿವಪುರ, ಹಾಲುವರ್ತಿ, ಗಂಗನಕಟ್ಟೆ, ನೇರ್ಲಿಗಿ, ಕೊಗ್ಗನೂರು, ಚಿನ್ನಸಮುದ್ರ, ಆನಗೋಡು, ತೋಳಹುಣಸೆ, ಕುರ್ಕಿ, ಕಬ್ಬೂರು, ಗೋಪನಾಳ್, ಕಂದಗಲ್ಲು, ಬಾಡ, ಅತ್ತಿಗೆರೆ, ಹನುಮನಹಳ್ಳಿ, ಹಿರೇತೊಗಲೇರಿ, ರಾಮಗೊಂಡನಹಳ್ಳಿ, ಬಿ. ದುರ್ಗ, ದಿಂಡದಹಳ್ಳಿ, ನರಗನಹಳ್ಳಿ, ಮಾಯಕೊಂಡ, ಬುಳ್ಳಾಪುರ, ಕೊಡಗನೂರು, ಹೆಚ್. ಬಸಾಪುರ, ಮಾಯಕೊಂಡ, ನಲ್ಕುಂದ, ಬೊಮ್ಮನಹಳ್ಳಿ, ಬಾವಿಹಾಳು, ಅಣಬೇರು ಸೇರಿದಂತೆ ವಿವಿಧ ಗ್ರಾಮಗಳಲ್ಲಿ ಇಂದು ಬೆಳಿಗ್ಗೆ 10 ರಿಂದ ಸಂಜೆ 4 ರವರೆಗೆ ವಿದ್ಯುತ್ ಸರಬರಾಜು ಇರುವುದಿಲ್ಲ.

## ಮಗನ ಶವ ಪಡೆಯಲು ಲಂಚದ ಬೇಡಿಕೆ

### ಭಿಕ್ಷೆ ಬೇಡಿ ಹಣ ಸಂಗ್ರಹಿಸಿದ ವೃದ್ಧ ದಂಪತಿ

ಸಮಷ್ಟಿಪುರ (ಬಿಹಾರ), ಜೂ. 9 – ಮಗನ ಮೃತದೇಹವನ್ನು ಸರ್ಕಾರಿ ಶವಾಗಾರದಿಂದ ಪಡೆಯುವ ಸಲುವಾಗಿ ಉದ್ಯೋಗಿಯೊಬ್ಬನಿಗೆ ಲಂಚ ನೀಡಲು ವೃದ್ಧ ತಂದೆ - ತಾಯಿಗಳು ಭಿಕ್ಷೆ ಬೇಡಿದ ಘಟನೆ ನಡೆದಿದೆ.

ಮಗನ ಶವ ಪಡೆಯುವ ಸಲುವಾಗಿ ದಂಪತಿ ಭಿಕ್ಷೆ ಬೇಡುವ ವಿಡಿಯೋ ವೈರಲ್ ಆಗಿದೆ.

ಮಹೇಶ್ ಠಾಕೂರ್ ಅವರ ಪುತ್ರ ಕಳೆದ ಮೇ 25ರಂದು ಕಣ್ಮರೆಯಾಗಿದ್ದ. ಜೂನ್ 7ರಂದು ಮೃತದೇಹ ಬೆಜಾಡೀಹ್ ಹಳ್ಳಿಯಲ್ಲಿ ಪತ್ತೆಯಾಗಿತ್ತು. ಸ್ಥಳೀಯ ಪೊಲೀಸರು ಮೃತದೇಹವನ್ನು ಸಮಷ್ಟಿಪುರ ಜಿಲ್ಲಾ ಆಸ್ಪತ್ರೆಗೆ ಕಳಿಸಿದ್ದರು.

ಈ ಬಗ್ಗೆ ತಿಳಿದ ಠಾಕೂರ್, ಆಸ್ಪತ್ರೆಗೆ ತೆರಳಿ ಮೃತದೇಹ ಗುರುತಿಸಿದ್ದರು.

ಆಗ ಅಲ್ಲಿನ ಉದ್ಯೋಗಿ ಮೃತದೇಹ ಹಸ್ತಾಂತರಿಸಲು 50 ಸಾವಿರ ರೂ. ಲಂಚ ಕೇಳಿದ್ದ. ನಾವು ಬಡವರು, ಇಷ್ಟೊಂದು ಹಣ ಹೇಗೆ ಕೊಡಬೇಕು? ಎಂದು ಠಾಕೂರ್ ಪ್ರಶ್ನಿಸಿದ್ದಾರೆ.

ಬೇರೆ ದಾರಿ ಕಾಣದೇ ಠಾಕೂರ್ ಹಾಗೂ ಅವರ ಪತ್ನಿ ಜನರಿಂದ ಬಿಕ್ಷೆ ಬೇಡಿ ಹಣ ಸಂಗ್ರಹಿಸಿದ್ದಾರೆ. ಆದರೂ ಅವರಿಗೆ ಕೇವಲ 2 ಸಾವಿರ ರೂ.ಗಳು ದೊರೆತವು. ಇಷ್ಟು ಹಣ ಪಡೆದು ಮೃತದೇಹ ಕೊಡುವಂತೆ ಉದ್ಯೋಗಿಗೆ ಕೇಳಿದರೂ ಆತ ಒಪ್ಪಲಿಲ್ಲ ಎಂದು ಠಾಕೂರ್ ಹೇಳಿದ್ದಾರೆ.

ನಂತರ ಮೃತದೇಹ ಪಡೆಯದೇ ಅಂತ್ಯಕ್ರಿಯೆ ನೆರವೇರಿಸಲು ನಿರ್ಧರಿಸಿದೆವು ಎಂದು ತಂದೆ ಹೇಳಿದ್ದಾರೆ.

ಈ ಘಟನೆಯ ತನಿಖೆಗೆ ಸಮಿತಿಯೊಂದನ್ನು ರಚಿಸಲಾಗಿದೆ. ವರದಿ ಬಂದ ನಂತರ ಕ್ರಮ ತೆಗೆದುಕೊಳ್ಳಲಾಗುವುದು ಎಂದು ಸಮಷ್ಟಿಪುರ ಜಿಲ್ಲಾ ಸರ್ಜನ್ ಎಸ್.ಕೆ. ಚೌಧರಿ ತಿಳಿಸಿದ್ದಾರೆ.

## 'ಪುಷ್ಪವತಿ ಭವ' ಪುಸ್ತಕ ಬಿಡುಗಡೆ



ದಾವಣಗೆರೆ, ಜೂ. 9- ಹುಬ್ಬಳ್ಳಿಯ ಜ್ಯೋತಿರ್ವಿ ಜ್ಞಾನ ಸಮುದಾಯ ಭವನದಲ್ಲಿ ನಡೆದ 23 ನೇ ಘಟಿಕೋತ್ಸವ ಸಮಾರಂಭದಲ್ಲಿ, ಮೈಸೂರಿನ ಮಾಯ ಕರ ಗುರುಕುಲದ ಸಂಸ್ಥಾಪಕ ಮೂಗೂರು ಮಧು ದೀಕ್ಷಿತ್ ಅವರು ದಾವಣಗೆರೆಯ ಜ್ಯೋತಿಷಿ ಡಾ. ಸಿ.ಕೆ. ಆನಂದತೀರ್ಥಾಚಾರ್ ರಚಿಸಿರುವ 'ಪುಷ್ಪವತಿ ಭವ' ಪುಸ್ತಕ ಬಿಡುಗಡೆ ಮಾಡಿದರು.

ಈ ಸಂದರ್ಭದಲ್ಲಿ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಜ್ಯೋತಿಷ್ಯ ವಿಭಾಗದ ಮುಖ್ಯಸ್ಥರಾದ ಡಾ. ಗಿರೀಶ್ ಭಟ್, ಡಾ. ಎ. ಕೆ. ಹಂದಿಗೋಳ, ಡಾ. ಎಂ. ಎಸ್. ಹುಲ್ಲೋಳಿ, ಜ್ಯೋತಿರ್ವಿಜ್ಞಾನ ಮಹಾವಿದ್ಯಾಲಯದ ವಿದ್ವಾನ್ ಗಣೇಶ್ ಹೆಗಡೆ ಮತ್ತಿತರರು ಉಪಸ್ಥಿತರಿದ್ದರು.

## ಬೆಂಬಲ ಬೆಲೆ ಹೆಚ್ಚಳ ಹಣದುಬ್ಬರಕ್ಕಿಂತ ಕಡಿಮೆ : ಕಾಂಗ್ರೆಸ್

ನವದೆಹಲಿ, ಜೂ. 9 – ಮುಂಗಾರು ಹಂಗಾಮಿಗೆ ಬೆಂಬಲ ಬೆಲೆ ಹೆಚ್ಚಿಸಿರುವುದು ಕಡಿಮೆಯಾಯಿತು ಎಂದು ಹೇಳಿರುವ ಕಾಂಗ್ರೆಸ್, ದೇಶದ ರೈತರಿಗೆ ದ್ರೋಹವಾಗಿದೆ ಎಂದು ಹೇಳಿದೆ.

ಕಾಂಗ್ರೆಸ್ ವಕ್ತಾರ ರಣದೀಪ್ ಸುರ್ಜೇವಾಲಾ ಹೇಳಿಕೆ ನೀಡಿದ್ದು, ನರೇಂದ್ರ ಮೋದಿ ಸರ್ಕಾರ ರೈತರ ಆದಾಯ ಹೆಚ್ಚಿಸುವ ಬದಲು ಸಂಕಷ್ಟಗಳನ್ನು ಹೆಚ್ಚಿಸಿದೆ ಎಂದಿದ್ದಾರೆ. ಈ ಬಾರಿ ಹಣದುಬ್ಬರಕ್ಕಿಂತಲೂ ಕಡಿಮೆ ಪ್ರಮಾಣದಲ್ಲಿ ಬೆಂಬಲ ಬೆಲೆ ಹೆಚ್ಚಳವಾಗಿದೆ ಎಂದವರು ಹೇಳಿದ್ದಾರೆ.

ಒಂದೆಡೆ ಮೋದಿ ಸರ್ಕಾರ ಕನಿಷ್ಠ ಬೆಂಬಲ ಬೆಲೆಯಲ್ಲಿ ಇಳುವರಿ ಖರೀದಿಸುತ್ತಿಲ್ಲ. ಮತ್ತೊಂದೆಡೆ ಕೃಷಿ ಪರಿಕರಗಳ ಬೆಲೆ ಹೆಚ್ಚಿಸುತ್ತಾ ರೈತರ ಆದಾಯ ಕಡಿತ ಮಾಡುತ್ತಿದೆ ಎಂದವರು ಆರೋಪಿಸಿದ್ದಾರೆ.

ಹಣದುಬ್ಬರ ದರ ಶೇ.6.7ರಷ್ಟಿದೆ ಎಂದು ರಿಸರ್ವ್ ಬ್ಯಾಂಕ್ ತಿಳಿಸಿದೆ. ಆದರೆ, ಕನಿಷ್ಠ ಬೆಂಬಲ ಬೆಲೆ ಹೆಚ್ಚಳ ಹಣದುಬ್ಬರಕ್ಕಿಂತಲೂ ಕಡಿಮೆ ಇದೆ. 14 ಬೆಳೆಗಳ ಪೈಕಿ 11ಕ್ಕೆ ಹಣದುಬ್ಬರಕ್ಕಿಂತಲೂ ಕಡಿಮೆ ಪ್ರಮಾಣದ ಬೆಂಬಲ ಬೆಲೆ ಹೆಚ್ಚಳ ಮಾಡಲಾಗಿದೆ ಎಂದವರು ತಿಳಿಸಿದ್ದಾರೆ.

## ನಿವೃತ್ತಿ : ಚನ್ನಬಸಯ್ಯಗೆ ಬೀಳ್ಕೊಡುಗೆ



ದಾವಣಗೆರೆ, ಜೂ. 9- ಇಲ್ಲಿನ ಡಿಎಆರ್ ಸಶಸ್ತ್ರ ಸಹಾಯಕ ಪೊಲೀಸ್ ಉಪ ನಿರೀಕ್ಷಕ ಎಸ್.ಎಂ. ಚನ್ನಬಸಯ್ಯ ನಿವೃತ್ತಿ ಹಿನ್ನೆಲೆಯಲ್ಲಿ ಜಿಲ್ಲಾ ಪೊಲೀಸ್ ವತಿಯಿಂದ ಹೃದಯಸ್ಪರ್ಶಿ ಬೀಳ್ಕೊಡುಗೆ ನೀಡಲಾಯಿತು.

ಚನ್ನಬಸಯ್ಯ ಅವರು ಡಿ.10, 1984ರಂದು ಇಲಾಖೆಯಲ್ಲಿ ಸಶಸ್ತ್ರ ಪೊಲೀಸ್ ಕಾನ್‌ಸ್ಟೇಬಲ್ ಹುದ್ದೆಗೆ ನೇಮಕಾತಿ ಹೊಂದಿದ್ದರು. ಸಹಾಯಕ ಪೊಲೀಸ್ ಉಪ ನಿರೀಕ್ಷಕರಾಗಿ ಬಡ್ತಿ ಪಡೆದು ಕಾರ್ಯ ನಿರ್ವಹಿಸಿ ವಯೋ ನಿವೃತ್ತಿ ಹೊಂದಿದ್ದು, ಇವರ ನಿವೃತ್ತ ಜೀವನವು ಸುಖಕರವಾಗಿರಲೆಂದು ಜಿಲ್ಲಾ ಪೊಲೀಸ್ ಅಧೀಕ್ಷಕ ಸಿ.ಬಿ. ರಿಷ್ಯಂತ್ ಶುಭ ಹಾರೈಸಿದರು.

ದಾವಣಗೆರೆ ಉಪವಿಭಾಗದ ಎಎಸ್ಪಿ ಕನಿಕಾ ಸಿಕ್ರಿವಾಲ, ಪಿಐ ತಿಮ್ಮಣ್ಣ, ಪಿಎಸ್‌ಐ ರೂಪ ತೆಂಬದ್, ಶಕುಂತಲಾ ಹಾಗೂ ಸಿಬ್ಬಂದಿಗಳು ಇದ್ದರು.


## ಗ್ರಾಮಾಂತರದಲ್ಲಿ ವಿದ್ಯುತ್ ಇಲ್ಲ

ದೊಡ್ಡಬಾತಿ, ಹಳೇಬಾತಿ, ನೀಲಾನಹಳ್ಳಿ, ಯರಗುಂಟೆ, ಕರೂರು, ಆವರಗೊಳ್ಳ, ಕಕ್ಕರಗೊಳ್ಳ, ಚಿತ್ತಾನಹಳ್ಳಿ, ದೊಡ್ಡ ಬೂದಿಹಾಳ್, ಚಿಕ್ಕಬೂದಿಹಾಳ್, ಅಮೃತನಗರ, ದೇವರಹಳ್ಳಿ, ಕೋಡಿಹಳ್ಳಿ, ಬಿ.ಕಲಪನಹಳ್ಳಿ ಗ್ರಾಮಗಳಲ್ಲಿ ಇಂದು ಬೆಳಿಗ್ಗೆ 10ರಿಂದ ಸಂಜೆ 6ರವರೆಗೆ ವಿದ್ಯುತ್ ಇರುವುದಿಲ್ಲ ಎಂದು ಬೆಸ್ಕಾಂ ಗ್ರಾಮೀಣ ಉಪ ವಿಭಾಗದ ಎಇಇ ಸುಧೀರ್ ಕುಮಾರ್ ತಿಳಿಸಿದ್ದಾರೆ.

## ನಗರದಲ್ಲಿ ಇಂದು ವಿದ್ಯುತ್ ವ್ಯತ್ಯಯ

ಪಿ.ಬಿ. ರಸ್ತೆ, ಸಂಗೊಳ್ಳಿ ರಾಯಣ್ಣ ಸರ್ಕಲ್, ಬಿಎಸ್ಸೆನ್ನೆಲ್ ಕಚೇರಿ, ಶಂಕರ್ ವಿಹಾರ್ ಬಡಾವಣೆ, ಶಾಂತಿನಗರ ಮತ್ತು ವಿನಾಯಕನಗರದಲ್ಲಿ, ಎಫ್ 13 ಇಂಡಸ್ಟ್ರೀಯಲ್ ಏರಿಯಾ, ಡಿಸಿ ಕಚೇರಿ, ಕರೂರು ಇಂಡಸ್ಟ್ರೀಯಲ್ ಏರಿಯಾ ಮತ್ತು ಸುತ್ತಮುತ್ತಲಿನಲ್ಲಿ ಇಂದು ಬೆಳಿಗ್ಗೆ '10 ರಿಂದ ಸಂಜೆ 5 ರವರೆಗೆ ವಿದ್ಯುತ್ ವ್ಯತ್ಯಯ ಉಂಟಾಗಲಿದೆ.


**ಶ್ರೀಮತಿ ರತ್ನಮ್ಮ (ಗಂಗಮ್ಮ) ನಿಧನ**



ದಾವಣಗೆರೆ ಎಸ್.ಎಸ್ ಬಡಾವಣೆ 'ಎ' ಬ್ಲಾಕ್ ವಾಸಿ
ಹೆಚ್. ಡಬ್ಬಿ ಹನುಮಂತಪ್ಪನವರ ಧರ್ಮಪತ್ನಿ
**ಶ್ರೀಮತಿ ರತ್ನಮ್ಮ (ಗಂಗಮ್ಮ) ಕೋಟೇರ**
ಇವರು ದಿನಾಂಕ 9.6.2022ರ ಗುರುವಾರ ಬೆಳಿಗ್ಗೆ ದೈವಾಧೀನರಾಗಿರುತ್ತಾರೆ. ಮೃತರಿಗೆ 78 ವರ್ಷ ವಯಸ್ಸಾಗಿತ್ತು. ಇಬ್ಬರು ಪುತ್ರರು, ಇಬ್ಬರು ಪುತ್ರಿಯರು, ಮಕ್ಕಳು, ಮೊಮ್ಮಕ್ಕಳು ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ಗಾಂಧಿನಗರದ ರುದ್ರಭೂಮಿಯಲ್ಲಿ ದಿನಾಂಕ 10.6.2022ರ ಶುಕ್ರವಾರ ಮಧ್ಯಾಹ್ನ 12.00 ಗಂಟೆಗೆ ನೆರವೇರಿಸಲಾಗುವುದು.
**ದುಃಖತಪ್ತ ಕುಟುಂಬ ವರ್ಗ - 98864 00038**

**ಹೃತ್ಪೂರ್ವಕ ಅಭಿನಂದನೆಗಳು**



ಎಸ್.ಎಸ್.ಎಲ್.ಸಿ. ಮರು ಮೌಲ್ಯ ಮಾಪನದಲ್ಲಿ 625ಕ್ಕೆ 622 ಅಂಕಗಳನ್ನು ಗಳಿಸಿರುವ ದಾವಣಗೆರೆ ನಗರದ ಬನಶಂಕರಿ ಬಡಾವಣೆಯ ಸ್ವಾಮಿ ವಿವೇಕಾನಂದ ಆಂಗ್ಲ ಮಾಧ್ಯಮ ಪ್ರೌಢಶಾಲೆಯ ವಿದ್ಯಾರ್ಥಿನಿ
**ಕು. ಮೇಘನ ಎನ್.ಎಂ.**
ಅವರಿಗೆ ಹೃತ್ಪೂರ್ವಕ ಅಭಿನಂದನೆಗಳು.

ತಂದೆ: **ಮಹೇಶ್ವರಪ್ಪ ನಾಗನೂರು**
ತಾಯಿ: **ಪುಷ್ಪ ನಾಗನೂರು**
ಅಜ್ಜಿ: **ನೀಲಮ್ಮ ನಾಗನೂರು**

**STOCK CLEARANCE SALE**

Stock clearance sale of Kichenwares and Cookwares of famous brands, coconut, kitchen essential and Anchor

**TODAY LAST DAY**



**ಶ್ರೀ SHREE ENTERPRISES**

Shubhalakshmi Building, M.C.C. "B" block, Shamanur Road, Davangere.

Ph. : 70266 20019 email : smudugal1971@gmail.com





JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte